## 01-11-2020

### ದೇಶದ ಪ್ರಪ್ರಥಮ ಸೀಪ್ಲೇನ್‌ಗೆ(ಸಮುದ್ರ ವಿಮಾನ) ಚಾಲನೆ ನೀಡಿದ ಪ್ರಧಾನಿ ಮೋದಿ




ಗಾಂಧಿನಗರ: ದೇಶದ ಪ್ರಪ್ರಥಮ ಸೀಪ್ಲೇನ್ (ಸಮುದ್ರ ವಿಮಾನ)ಕ್ಕೆ ಇತ್ತೀಚಿಗೆ ಪ್ರಧಾನಿ ಮೋದಿಯವರು ಚಾಲನೆ ನೀಡಿದರು. ಅಕ್ಟೋಬರ್ 31 ರ ರಾಷ್ಟ್ರೀಯ ಏಕತಾ ದಿನದಂದು "ಸರ್ದಾರ್ ವಲ್ಲಭಭಾಯಿ ಪಟೇಲ್" ಅವರ 145ನೇ ಜನ್ಮದಿನಾಚರಣೆ ಸಂದರ್ಭದಲ್ಲಿ ಮೋದಿಯವರು ದೇಶದ ಪ್ರಪ್ರಥಮ ಸೀಪ್ಲೇನ್ ಸ್ಟ್ಯಾಚ್ಯೂ ಆಫ್ ಯುನಿಟಿ ಸ್ಥಳದಿಂದ ಚಾಲನೆ ನೀಡಿದ್ದು, ಈ ಸೀಪ್ಲೇನ್ ಅಹಮದಾಬಾದ್‌ನ ಸಬರಮತಿ ವರೆಗೆ ಸಂಚರಿಸಲಿದೆ.

* ಕೇಂದ್ರ ಸರ್ಕಾರದ ಉಡಾನ್ ಯೋಜನೆಯಡಿ ಈ ಸೇವೆ ಆರಂಭಿಸಲಾಗಿದೆ.
* ಈ ವಿಮಾನಗಳು ನೀರಿನ ಮೇಲೆ ಟೇಕಾಫ್ ಹಾಗೂ ಲ್ಯಾಂಡಿಂಗ್ ಆಗುವ ವಿಶೇಷ ಸೌಲಭ್ಯವನ್ನು ಹೊಂದಿವೆ ಅದೇ ಕಾರಣಕ್ಕೆ ಇವುಗಳನ್ನು ಸೀಪ್ಲೇನ್ ಎನ್ನಲಾಗುವದು.

### ಟರ್ಕಿ ಮಾಜಿ ಪ್ರಧಾನಿ ಮೆಸೂತ್ ಯಿಲ್ಮಾಜ್ ನಿಧನ



ಇಸ್ತಾನ್‌ಬುಲ್: ಟರ್ಕಿ ದೇಶಕ್ಕೆ ಮೂರು ಬಾರಿ ಪ್ರಧಾನಿಯಾಗಿ ಆಯ್ಕೆಯಾಗಿ ಸೇವೆ ಸಲ್ಲಿಸಿದ್ದ ಮಾಜಿ ಪ್ರಧಾನಿ ಮತ್ತು ಹಿರಿಯ ರಾಜಕಾರಣಿ ಮೆಸುತ್ ಯಿಲ್ಮಾಜ್ ಅವರು ತಮ್ಮ 72 ನೆ ವಯಸ್ಸಿನಲ್ಲಿ ನಿಧನರಾದರು. 1991ರಿಂದ 2002 ತನಕ ಟರ್ಕಿಯ ಮದರ್‌ಲ್ಯಾಂಡ್ ಪಕ್ಷವನ್ನು ಮುನ್ನಡೆಸಿದ್ದರು.1990ರಲ್ಲಿ ಪ್ರಧಾನ ಮಂತ್ರಿಯಾಗಿ ಕಾರ್ಯನಿರ್ವಹಿಸಿದರು. ಇವರು ಒಟ್ಟು 18 ತಿಂಗಳ ಕಾಲ ಅಧಿಕಾರ ನಡೆಸಿದ್ದರು.

## 02-11-2020

### ಜೇಮ್ಸ್ ಬಾಂಡ್ ಖ್ಯಾತಿಯ ನಟ ಸೀನ್ ಕಾನೆರಿ ನಿಧನ



ಸ್ಕಾಟಿಷ್ ನಟರಾದ ಹಾಗೂ ಜೇಮ್ಸ್ ಬಾಂಡ್ ಪಾತ್ರವನ್ನು ದೊಡ್ಡ ಪರದೆಗೆ ತಂದ ಮೊದಲ ನಟ 'ಸೀನ್ ಕಾನೆರಿ' ತಮ್ಮ 90ನೇ ವಯಸ್ಸಿನಲ್ಲಿ ನಿಧನರಾಗಿದ್ದಾರೆ. ಇದುವರೆಗೂ ಹಾಲಿವುಡ್ ನಲ್ಲಿ ಸಿನಿಮಾ ರಂಗದಲ್ಲಿ ಸುಮಾರು 25 ಕ್ಕೂ ಅಧಿಕ ಬಾಂಡ್ ಹೆಸರಿನ ಸಿನಿಮಾಗಳು ತೆರೆಕಂಡಿದ್ದು, ಇವುಗಳ ಪೈಕಿ ಮೊದಲ 7 ಬಾಂಡ್ ಚಿತ್ರಗಳಲ್ಲಿ ಸೀನ್ ಕಾನೆರಿ ಬಣ್ಣ ಹಚ್ಚಿದ್ದರು.

* ಇವರ ಪೂರ್ಣ ಹೆಸರು ಸರ್ ಥಾಮಸ್ ಸೀನ್ ಕಾನೆರಿ. 1930 ಆಗಸ್ಟ್ 25 ರಂದು ಫೌಂಟೇನ್ ಬ್ರಿಡ್ಜ್ ನಲ್ಲಿ ಜನನ.
* ನಟಿಸಿದ ಚಿತ್ರಗಳು : ಡಾ. ನಂ(1962), ಫ್ರಂ ರಷಿಯಾ ವಿತ್ ಲವ್(1963), ಗೋಲ್ಡ್ ಫಿಂಗರ್(1964), ಥಂಡರ್ ಬಾಲ್(1965), ಯು ಕ್ಯಾನ್ ಒನ್ಲಿ ಲಿವ್ ಟ್ವೈಸ್(1967), ಡೈಮಂಡ್ಸ್ ಆರ್ ಫಾರೆವರ್(1971), ನೆವರ್ ಸೇ ನೆವರ್ ಅಗೇನ್(1983)
* ಇವರು ಆಸ್ಕರ್ ಸೇರಿ, ಮೂರು ಬಾರಿ ಗೋಲ್ಡನ್ ಗ್ಲೋಬ್ಸ್ ಗೌರವಕ್ಕೆ ಪಾತ್ರರಾಗಿದ್ದಾರೆ.

### ಗಿಲ್ಗಿಟ್ ಬಾಲ್ಟಿಸ್ತಾನ್‌ಗೆ ಪ್ರಾಂತೀಯ ಸ್ಥಾನಮಾನ: ಭಾರತ ತಿರಸ್ಕಾರ




ನವದೆಹಲಿ : ಪಾಕಿಸ್ತಾನವು ಗಿಲ್ಗಿಟ್ ಬಾಲ್ಟಿಸ್ತಾನ್ ಪ್ರದೇಶಕ್ಕೆ ಪ್ರಾಂತೀಯ ಸ್ಥಾನಮಾನ ನೀಡುವ

ಪಾಕಿಸ್ತಾನದ ಪ್ರಯತ್ನವನ್ನು ಭಾರತ ದೃಢವಾಗಿ ವಿರೋಧಿಸಿದೆ. ಗಿಲ್ಗಿಟ್ ಬಾಲ್ಟಿಸ್ತಾನ್ ಎಂದು ಕರೆಯುವ ಪ್ರದೇಶವನ್ನು ಒಳಗೊಂಡಂತೆ ಜಮ್ಮು ಮತ್ತು ಕಾಶ್ಮೀರದ ಕೇಂದ್ರಾಡಳಿತ ಪ್ರದೇಶಗಳು ಕಾನೂನುಬದ್ಧವಾಗಿ ಸಂಪೂರ್ಣವಾಗಿ ಭಾರತದ ಒಕ್ಕೂಟ ವ್ಯವಸ್ಥೆಯ ಅವಿಭಾಜ್ಯ ಅಂಗವಾಗಿದ್ದು ಇವುಗಳಿಗೆ ಪ್ರಾಂತೀಯ ಸ್ಥಾನಮಾನ ನೀಡಲು ಭಾರತವು ದೃಢವಾಗಿ ವಿರೋಧಿಸಿದೆ.

## ಮೊದಲ ಬಾರಿ ಏರ್ ಇಂಡಿಯಾ ಸಂಸ್ಥೆಗೆ ಮಹಿಳಾ ಸಿಇಒ ನೇಮಕ




ಮುಂಬಯಿ: ವಿಮಾನಯಾನ ಸಂಸ್ಥೆಯಾದ ಏರ್ ಇಂಡಿಯಾವು ಇದೆ ಮೊದಲ ಬಾರಿ ಮಹಿಳಾ ಸಿಇಒ ಆಗಿ ಹರ್‌ಪ್ರೀತ್ ಎ. ಡಿ. ಸಿಂಗ್ ಅವರನ್ನು ನೇಮಿಸಿದೆ. ಭಾರತದಲ್ಲಿ ಮಾತ್ರವೇ ತನ್ನ ಕಾರ್ಯಾ ವ್ಯಾಪ್ತಿಯನ್ನು ಹೊಂದಿರುವ "ಏರ್ ಇಂಡಿಯಾ" ಸಂಸ್ಥೆಯ ಅಂಗ ಸಂಸ್ಥೆಯಾದ "ಅಲಯನ್ಸ್ ಏರ್"ಗೆ ಹರ್‌ಪ್ರೀತ್ ಎ. ಡಿ. ಸಿಂಗ್ ಸಿಇಒ ಆಗಿ ನೇಮಕಗೊಂಡಿದ್ದಾರೆ. ಇಲ್ಲಿಯವರೆಗೆ ಇವರು "ಅಲಯನ್ಸ್ ಏರ್"ನ ಕಾರ್ಯ ನಿರ್ವಾಹಕ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿದ್ದರು, ಇದೀಗ CEO ಹುದ್ದೆಗೆ ಬಡ್ತಿ ಪಡೆದಿದ್ದು, ಏರ್ ಇಂಡಿಯಾ ನೇಮಕ ಮಾಡಿಕೊಂಡ ಮೊದಲ ಮಹಿಳಾ ಪೈಲಟ್ ಹರ್‌ಪ್ರೀತ್.

## ತಮಿಳುನಾಡು ಕೃಷಿ ಸಚಿವ ಆರ್.ದೊರೈಕಣ್ಣು ಕೊರೊನಾಗೆ ಬಲಿ



ಚೆನ್ನೈ : ತಮಿಳುನಾಡು ರಾಜ್ಯದ ಜಾರಿಯಲ್ಲಿರುವ ಸರ್ಕಾರದಲ್ಲಿ ಕೃಷಿ ಸಚಿವರಾಗಿದ್ದ ಆರ್.ದೊರೈಕಣ್ಣು ಅವರು ತಮ್ಮ 72 ನೇ ವಯಸ್ಸಿನಲ್ಲಿ ಮಾರಕ ಕಿಲ್ಲರ್ ಕೊರೊನಾ ವೈರಸ್ ಸೋಂಕಿಗೆ ತುತ್ತಾಗಿ ನಿಧನರಾಗಿದ್ದಾರೆ. ತಮಿಳುನಾಡು ರಾಜ್ಯಪಾಲ ಬನ್ವರಿಲಾಲ್ ಪುರೋಹಿತ್, ಮುಖ್ಯಮಂತ್ರಿ ಎಡಪ್ಪಾಡಿ ಪಳನಿಸ್ವಾಮಿ, ಉಪ ಮುಖ್ಯಮಂತ್ರಿ ಒ.ಪನ್ನೀರ್ ಸೆಲ್ವಂ ಸೇರಿ ಎಲ್ಲ ಮಂತ್ರಿಮಂಡಲದ ಸಚಿವರುಗಳು ಇವರ ನಿದಾನಕ್ಕೆ ಸಂತಾಪ ಸೂಚಿಸಿದ್ದಾರೆ.

## ಕರ್ನಾಟಕ ರಾಜ್ಯ ಕ್ರೀಡಾ ಪ್ರಶಸ್ತಿ ಪ್ರಕಟ



ಬೆಂಗಳೂರು : ಕರ್ನಾಟಕ ರಾಜ್ಯ ಸಚಿವರಾದ ಸಿ.ಟಿ.ರವಿಯವರು 2017, 2018 ಮತ್ತು 2019ನೇ ಸಾಲಿನ ಏಕಲವ್ಯ ಜೀವಮಾನ ಸಾಧನೆ, ಕರ್ನಾಟಕ ಕ್ರೀಡಾ ರತ್ನ, ಕ್ರೀಡಾ ಪೋಷಕ ಮತ್ತು ಎನ್.ಎಸ್.ಎಸ್ ಪ್ರಶಸ್ತಿ ಪುರಸ್ಕೃತ ರ ಪಟ್ಟಿಯನ್ನು ಇತ್ತೀಚಿಗೆ ಬಿಡುಗಡೆ ಮಾಡಿದ್ದಾರೆ.

* 2017ನೇ ಸಾಲಿನ ಏಕಲವ್ಯ ಪ್ರಶಸ್ತಿ ಪುರಸ್ಕೃತರು : ಅನಿಲ್ ಕುಮಾರ್ ಬಿ.ಕೆ (ಬಾಸ್ಕೆಟ್ ಬಾಲ್), ಉಷಾರಾಣಿ ಎನ್. (ಕಬ್ಬಡ್ಡಿ), ಖುಷಿ ವಿ. (ಟೇಬಲ್ ಟೆನ್ನಿಸ್), ಎಂ.ದೀಪಾ (ರೋಯಿಂಗ್), ರಾಜು ಅಡಿವೆಪ್ಪಾ ಭಾಟಿ (ಸೈಕ್ಲಿಂಗ್), ರೀನಾ ಜಾರ್ಜ್ ಎಸ್. (ಅಥ್ಲೆಟಿಕ್), ಮಿಥುಲಾ (ಬ್ಯಾಡ್ಮಿಂಟನ್), ಅವಿನಾಶ ಮಣಿ (ಈಜು), ಅರ್ಜುನ್ ಹಲ್ಕುರ್ಕಿ (ಕುಸ್ತಿ), ಎಂ.ಎಸ್. ಪೊನ್ನಮ್ಮ (ಹಾಕಿ), ವಿನಾಯಕ್ ರೋಖಡೆ (ವಾಲಿಬಾಲ್), ವರ್ಷಾ ಎನ್.(ಬಿಲಿಯಡ್ಸ್ ಸ್ನೂಕರ್), ತೇಜಸ್ ಕೆ. (ಶೂಟಿಂಗ್), ಶೇಖರ್‌ವೀರಾಸ್ವಾಮಿ (ಟೆನ್ನಿಸ್, ಪ್ಯಾರಾ)
* 2017 ನೇ ಸಾಲಿನ ಜೀವಮಾನ ಸಾಧನೆ ಪ್ರಶಸ್ತಿ ಎಂ.ಫ್ರೆಡ್ರಿಕ್ಸ್ (ಹಾಕಿ), ಡಾ.ಪಟೇಲ್ ಮೊಹಮದ್ ಇಲಿಯಾಸ್(ವಾಲಿಬಾಲ್)
* 2017ನೇ ಸಾಲಿನ ಕ್ರೀಡಾರತ್ನ ಪ್ರಶಸ್ತಿ ವೀಣಾ ಎಂ(ಖೋ ಖೋ), ಕೌಶಲ್ಯ ಕೆ.ಎಸ್ (ಕಬ್ಬಡ್ಡಿ), ಜಯಲಕ್ಷ್ಮಿ ಜಿ. (ಬಾಲ್ ಬ್ಯಾಡ್ಮಿಂಟನ್), ಅನುಶ್ರೀ ಎಚ್.ಎಸ್. (ಕುಸ್ತಿ), ರಂಜಿತ ಎಂ. (ಥ್ರೋ ಬಾಲ್), ಭಿಮ್ಮಪ್ಪ ಹಡಪದ (ಮಲ್ಲಕಂಬ), ಮಹೇಶ ಆರ್ ಎರೆಮನೆ (ಆಟ್ಯಾಪಾಟ್ಯಾ), ಚಂದ್ರಶೇಖರ ಎಚ್.ಕಲ್ಲಹೊಲದ (ಗುಂಡು ಎತ್ತುವುದು), ಗೋಪಾಲ ಕೃಷ್ಣ ಪ್ರಭು, (ಕಂಬಳ), ಶ್ರೀನಿವಾಸ್ ಗೌಡ(ಕಂಬಳ), ಮಣಿಕಂದನ್ (ಪ್ಯಾರಾಕ್ಲೈಂಬಿಂಗ್)
* 2018ನೇ ಸಾಲಿನ ಏಕಲವ್ಯ ಪ್ರಶಸ್ತಿ ವಿಜಯಕುಮಾರಿ ಜಿ.ಕೆ (ಅಥ್ಲೆಟಿಕ್), ಬಾಂಧವ್ಯ ಎಚ್.ಎಂ (ಬ್ಯಾಸ್ಕೆಟ್ ಬಾಲ್), ಕೆ.ಎಲ್.ರಾಹುಲ್ (ಕ್ರಿಕೆಟ್), ಮೃಘಾ ಗೂಗಾಡ್ (ಸೈಕ್ಲಿಂಗ್), ಫೌವಾದ್ ಮಿರ್ಜಾ (ಈಕ್ವೆಸ್ಟ್ರಿಯನ್) ನಿಕ್ಕಿನ್ ತಿಮ್ಮಯ್ಯ ( ಹಾಕಿ), ಗೀತಾ ದಾನಪ್ಪ ಗೋಳ್ (ಜುಡೋ), ಶ್ರೀಹರಿ ನಟರಾಜ (ಈಜು), ಶಕೀನ

ಖಾತೂನ್ (ಪ್ಯಾರಾ ಪವರ್ ಲಿಫ್ಟಿಂಗ್)
* 2018 ನೇ ಸಾಲಿನ ಜೀವಮಾನ ಸಾಧನೆ ಪ್ರಶಸ್ತಿ ಸಿ.ಎಂ ಕುರುಂಬಯ್ಯ (ಹಾಕಿ), ಮಂಜುನಾಥ್.ಆರ್ (ಕಬಡ್ಡಿ),
* 2018 ನೇ ಸಾಲಿನ ಕ್ರೀಡಾ ರತ್ನ ಪ್ರಶಸ್ತಿ ಸಂಪತ್ ನಾಗಪ್ಪ ಯರಗಟ್ಟಿ(ಅಟ್ಯಾ_ಪಟ್ಯಾ), ಸುರೇಶ್ ಶೆಟ್ಟಿ (ಕಂಬಳ) ಶಿವಕುಮಾರ್ ಎಚ್.ಎನ್ ( ಖೋ ಖೋ), ಕಿರಣ್ ಕುಮಾರ್.ಐ (ಟೆನ್ನಿ ಕ್ವಾಯಿಟ್), ಮಲ್ಲಪ್ಪ ಗೌಡ ಪಾಟೀಲ್(ಕುಸ್ತಿ), ಯಮನಪ್ಪ ಮಾಯಪ್ಪ ಕಲ್ಲೋಳಿ (ಮಲ್ಲಕಂಬ), ಲಾವಣ್ಯ ಬಿ.ಡಿ (ಬಾಲ್ ಬ್ಯಾಟ್ಮಿಂಟನ್)
* 2019 ನೇ ಏಕಲವ್ಯ ಪ್ರಶಸ್ತಿ ಅಭಿನಯ ಶೆಟ್ಟಿ (ಅಥ್ಲೆಟಿಕ್), ವೇದಾ ಕೃಷ್ಣ ಮೂರ್ತಿ( ಕ್ರಿಕೆಟ್), ವೆಂಕಪ್ಪ ಗೆಂಗಲಗುತ್ತಿ( ಸೈಕ್ಲಿಂಗ್), ಪುಲಿಂದ ಲೋಕೇಶ್ ತಿಮ್ಮಣ್ಣ(ಹಾಕಿ), ಖುಷಿ ದಿನೇಶ್( ಈಜು), ಮಯಾಂಕ್ ಅಗರ್ವಾಲ್ (ಕ್ರಿಕೆಟ್), ಪುನೀತ್ ನಂದಕುಮಾರ್( ಪ್ಯಾರಾ ಈಜು), ಅಭಿಷೇಕ್ ಎನ್ ಶೆಟ್ಟಿ( ಅಥ್ಲೆಟಿಕ್)
* 2019 ನೇ ಸಾಲಿನ ಜೀವಮಾನ ಸಾಧನೆ ಪ್ರಶಸ್ತಿ ಶಾಂತಾ ರಂಗಸ್ವಾಮಿ (ಕ್ರಿಕೆಟ್), ಸಂಜೀವ್ ಆರ್ ಕನಕ(ಖೊಖೋ)
* 2019 ನೇ ಸಾಲಿನ ಕರ್ನಾಟಕ ಕ್ರೀಡಾ ರತ್ನ ಪ್ರಶಸ್ತಿ ಅನಿತಾ ಬಿಚಗಟ್ಟಿ (ಅಟ್ಯಾ ಪಟ್ಯಾ), ಪಲ್ಲವಿ ಎಸ್ ಕೆ( ಬಾಲ್ ಬ್ಯಾಟ್ಮಿಂಟನ್) ರಕ್ಷಿತ ಎಸ್ ( ಕಬಡ್ಡಿ) ಸುದರ್ಶನ್ (ಖೋ ಖೋ), ಅನುಪಮ ಹೆಚ್ ಕೆರಕಲಮಟ್ಟಿ( ಮಲ್ಲಕಂಬ) ಪ್ರವೀಣ್ ಕೆ (ಕಂಬಳ) ಮಂಜುನಾಥ್ ಹೆಚ್ ( ಥ್ರೋ ಬಾಲ್), ಸತೀಶ್ ಪಡತಾರೆ (ಕುಸ್ತಿ) ಅನೀಶಾ ಮಣೇಗಾರ್ (ಟೆನ್ನಿಕ್ವಾಯಿಟ್) ಕ್ರೀಡಾ ಪೋಷಕ ಪ್ರಶಸ್ತಿಗೆ ಆಯ್ಕೆಯಾದ ಸಂಸ್ಥೆಗಳು 2018_19: ಸ್ವರ್ಣ ಫುಟ್ ಬಾಲ್ ಅಭಿವೃದ್ಧಿ ಸಂಸ್ಥೆ, ಮಂಡ್ಯ, ವಿ.ಆರ್ ದೇಶಪಾಂಡೆ ಮೆಮೊರಿಯಲ್ ಟ್ರಸ್ಟ್ , ಹಳಿಯಾಳ 2019 20: ಮಂಗಳೂರು ವಿಶ್ವವಿದ್ಯಾನಿಲಯ ಮಂಗಳೂರು 2020_21: ಸಿದ್ದಗಂಗಾ ಮಠ ಸಂಸ್ಥೆ ತುಮಕೂರು, ಮಾಣಿಕಾ ಪ್ರಭು ಸ್ಪೋರ್ಟ್ಸ್ ಅಕಾಡೆಮಿ ಮಾಣಿಕನಗರ.ಬೀದರ್

## 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಹಾವೇರಿಯಲ್ಲಿ ಆಯೋಜನೆ



ಹಾವೇರಿ : ಈ ಬಾರಿ 86 ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಹಾವೇರಿಯಲ್ಲಿ ನಡೆಸಲು ಯೋಜಿಸಿರುವುದಾಗಿ ಗೃಹ ಸಚಿವ ಬಸವರಾಜ ಬೊಮ್ಮಾಯಿ ಅವರು ಮಾಧ್ಯಮಗಳಿಗೆ ಮಾಹಿತಿ ನೀಡಿದ್ದಾರೆ. ಇನ್ನು ರಾಜ್ಯದಲ್ಲಿ ಕೊರೊನಾ ವೈರಸ್ ಪ್ರಕರಣಗಳ ಸಂಖ್ಯೆ ಕಡಿಮೆಯಾದ ಬಳಿಕವಷ್ಟೇ ಸಮ್ಮೇಳನಕ್ಕೆ ದಿನಾಂಕವನ್ನು ನಿಗದಿಪಡಿಸುವುದಾಗಿ ಅವರು ತಿಳಿಸಿದರು.
* 85ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಕಲಬುರಗಿ ಜಿಲ್ಲೆಯಲ್ಲಿ 2020ರ ಫೆಬ್ರುವರಿ ತಿಂಗಳಿನಲ್ಲಿ ನಡೆಸಲಾಗಿತ್ತು, ಹಾಗೂ ಸಮ್ಮೇಳನದ ಅಧ್ಯಕ್ಷತೆಯನ್ನು ಹಿರಿಯ ಕವಿ ಎಚ್ ಎಸ್ ವೆಂಕಟೇಶಮೂರ್ತಿ ಅವರು ವಹಿಸಿದ್ದರು.

## ಕೊರೋನಾ ಕಾರಣ : ಪಟಾಕಿ ನಿಷೇಧಿಸಿದ ರಾಜಸ್ಥಾನ ಸರ್ಕಾರ




ಜೈಪುರ: ಕೋವಿಡ್ 19 ಸೋಂಕಿತರಿಗೆ ಉಸಿರಾಟದ ಸಮಸ್ಯೆ ಸಾಮಾನ್ಯವಾಗಿರುವುದರಿಂದ ಇವರ ಆರೋಗ್ಯ ರಕ್ಷಣೆ ಹಾಗೂ ಸಾರ್ವಜನಿಕರಿಗೆ ಆರೋಗ್ಯದ ಬಗ್ಗೆ ಕಾಳಜಿವಹಿಸಲು ರಾಜಸ್ಥಾನ ಸರ್ಕಾರ ಪ್ರಮುಖ ನಿರ್ಧಾರ ಕೈಗೊಂಡಿದ್ದು, ಸಿಡಿಮದ್ದು(ಪಟಾಕಿ) ಮಾರಾಟ ಮತ್ತು ಬಳಕೆಯನ್ನು ರಾಜ್ಯದಲ್ಲಿ ನಿಷೇಧಿಸಿದೆ. ಈ ಕುರಿತು ರಾಜಸ್ಥಾನ್ ಮುಖ್ಯಮಂತ್ರಿ ಅಶೋಕ್ ಗೆಹ್ಲೋಟ್ ಅವರು ಮಾಹಿತಿ ನೀಡಿದ್ದಾರೆ.

# 03-11-2020

## 11 ತಿಂಗಳ ಬಳಿಕ ನವೆಂಬರ್ 07 ರಂದು ಉಪಗ್ರಹ ಉಡಾವಣೆಗೆ ಇಸ್ರೊ ಸಜ್ಜು



ಬೆಂಗಳೂರು: ಜಾಗತಿಕವಾಗಿ ವ್ಯಾಪಿಸಿದ ಕೋರೋಣ ಸೋಂಕಿನ ಕಾರಣ ಬಹುತೇಕ ಎಲ್ಲ ರಾಷ್ಟ್ರಗಳ ಬಾಹ್ಯಾಕಾಶ ಯೋಜನೆಗಳು ನಿಧಾನಗೊಂಡಿದ್ದವು. ಅದೇ ರೀತಿ ಭಾರತೀಯ ಬಾಹ್ಯಾಕಾಶ ಸಂಸ್ಥೆ (ISRO) ಕೂಡ ಸತತ 11 ತಿಂಗಳ ಅವಧಿಯಲ್ಲಿ ಯಾವುದೇ ಉಪಗ್ರಹ ಉಡಾವಣೆ ಕೈಗೊಂಡಿಲ್ಲ, 2019ರ

ಡಿಸೆಂಬರ್ 11 ರಂದು ಇಸ್ರೊ ನಡೆಸಿದ ಉಪಗ್ರಹ ಉಡಾವಣೆಯೇ ಕೊನೆಯದಾಗಿತ್ತು.
* ಇದೀಗ ಸುಮಾರು 11 ತಿಂಗಳ ಬಳಿಕ ಇದೇ ನವೆಂಬರ್ 7 ರಂದು PSLV ಉಡಾವಣಾ ವಾಹನ ಮೂಲಕ ಇಒಎಸ್–01 ಸೇರಿ ಒಂಬತ್ತು ವಿದೇಶಿ ಉಪಗ್ರಹಗಳ ಉಡಾವಣೆಗೆ ಇಸ್ರೊ ಸಿದ್ಧತೆ ನಡೆಸಿದೆ.
* ಇಒಎಸ್ ಉಪಗ್ರಹ 01 : ಭೂವೀಕ್ಷಣಾ ಉಪಗ್ರಹ 01 (ಇಒಎಸ್) ಕೃಷಿ, ಅರಣ್ಯ ಮತ್ತು ಪ್ರಾಕೃತಿಕ ವಿಕೋಪ ನಿರ್ವಹಣೆಯ ಉದ್ದೇಶಕ್ಕೆ ನೆರವಾಗಲಿದ್ದು, ಶ್ರೀಹರಿಕೋಟದ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಿಂದ ಉಪಗ್ರಹವನ್ನು ಉಡಾಯಿಸಲು ಯೋಜಿಸಲಾಗಿದೆ.

## ವಿಶ್ವ ವಿಜ್ಞಾನಿಗಳ ಪಟ್ಟಿಯಲ್ಲಿ ಸ್ಥಾನ ಪಡೆದ ಪ್ರೊ.ಕೆ.ಎಸ್. ರಂಗಪ್ಪ



ಮೈಸೂರು: ಅಮೆರಿಕದ ಸ್ಟ್ಯಾನ್ ಫೋರ್ಡ್ ವಿಶ್ವವಿದ್ಯಾಲಯವು ಇತ್ತೀಚಿಗೆ ವಿಶ್ವದ ಅತ್ಯುನ್ನತ ವಿಜ್ಞಾನಿಗಳ ಪಟ್ಟಿಯನ್ನು ಪ್ರಕಟಿಸಿದ್ದು, ಈ ಪಟ್ಟಿಯಲ್ಲಿ ಮೈಸೂರು ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ ಸ್ಥಾನ ಗಿಟ್ಟಿಸಿದ್ದಾರೆ. ಸಾವಯವ ರಾಸಾಯನ ವಿಜ್ಞಾನ ಕ್ಷೇತ್ರದಲ್ಲಿನ ಅವರ ಸಾಧನೆ ಗುರುತಿಸಿ ಇವರಿಗೆ ಪಟ್ಟಿಯಲ್ಲಿ 2181 ನೇ ಸ್ಥಾನವನ್ನು ನೀಡಲಾಗಿದೆ, ಇವರು 500 ಸಂಶೋಧನಾ ಪ್ರಬಂಧಗಳನ್ನು ಪ್ರಕಟಿಸಿದ್ದಾರೆ ಹಾಗೂ 11 ವಿವಿಧ ಸಂಶೋಧನಾ ಪೇಟೆಂಟ್ ತಮ್ಮದಾಗಿಸಿಕೊಂಡಿದ್ದಾರೆ. ಈ ಪಟ್ಟಿಯಲ್ಲಿನ ವಿಜ್ಞಾನಿಗಳ ಪೈಕಿ ಭಾರತೀಯ ವಿಜ್ಞಾನಿಗಳ ಪಾಲು ಶೇಕಡಾ 02 ರಷ್ಟಿದ್ದು, ಭಾರತೀಯರ ಹೆಮ್ಮೆಯಾಗಿದೆ.

# 04-11-2020

## ರಿಲಯನ್ಸ್ ಸಂಸ್ಥೆಯ ₹ 1 ಲಕ್ಷ ಕೋಟಿ ಮಾರುಕಟ್ಟೆ ಬಂಡವಾಳ ಇಳಿಕೆ




ನವದೆಹಲಿ : ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್‌ನ ಸಂಸ್ಥೆಯ ಎರಡನೇ ತ್ರೈಮಾಸಿಕದಲ್ಲಿ ಶೇಕಡ 15ರಷ್ಟು ಇಳಿಕೆ ಕಂಡ ಕಾರಣ ಕಂಪನಿಯ ಷೇರು ಮೌಲ್ಯ ಶೇ 9ರವರೆಗೂ ಇಳಿಕೆ ಕಂಡಿದೆ. ಷೇರುಗಳ ಬೆಲೆ ಕಡಿತಗೊಂಡಿರುವ ಕಾರಣ ಕಂಪನಿಯ ಮಾರುಕಟ್ಟೆ ಬಂಡವಾಳ ಮೌಲ್ಯವು ₹ 1.19 ಲಕ್ಷ ಕೋಟಿಯಷ್ಟು ಕಡಿತಗೊಂಡಿರುವುದಾಗಿ ವರದಿಯಾಗಿದೆ.

## ನಾಲ್ಕು ರಾಷ್ಟ್ರಗಳ 'ಮಲಬಾರ್' ಜಂಟಿ ನೌಕಾ ಸಮರಾಭ್ಯಾಸ ಆರಂಭ



ನವದೆಹಲಿ : ಭಾರತ, ಅಮೆರಿಕ, ಜಪಾನ್ ಹಾಗೂ ಆಸ್ಟ್ರೇಲಿಯ ರಾಷ್ಟ್ರಗಳು ಹಿಂದೂ ಮಹಾಸಾಗರ–ಪೆಸಿಫಿಕ್ ಪ್ರದೇಶದ ಬಂಗಾಳಕೊಲ್ಲಿಯ ವಿಶಾಖಪಟ್ಟಣ ಕರಾವಳಿ ಪ್ರದೇಶದಲ್ಲಿ ಬೃಹತ್ ಜಂಟಿ ನೌಕಾಪಡೆ ಕವಾಯತನ್ನು ಆರಂಭಿಸಿದ್ದು ಈ ಮೂಲಕ ಹಿಂದೂ ಮಹಾಸಾಗರ – ಪೆಸಿಫಿಕ್ ಪ್ರದೇಶದಲ್ಲಿ ಚೀನಾ ರಾಷ್ಟ್ರದ ಪ್ರಾಬಲ್ಯವನ್ನು ನಿಗ್ರಹಿಸುವ ಮುಖ್ಯ ಉದ್ದೇಶವನ್ನು ಉಭಯ ರಾಷ್ಟ್ರಗಳು ಹೊಂದಿವೆ.
* 1992 ರಲ್ಲಿ ಅಮೆರಿಕ ಹಾಗೂ ಭಾರತ ರಾಷ್ಟ್ರಗಳು ದ್ವಿಪಕ್ಷೀಯ ಸೇನಾ ಸಮರಾಭ್ಯಾಸದ ಭಾಗವಾಗಿ ಈ 'ಮಲಬಾರ್' ನೌಕಾ ಸಮರಾಭ್ಯಾಸವನ್ನು ಆರಂಭಿಸಿದವು.
* 2015ರಲ್ಲಿ ಜಪಾನ್ ಈ ಸಮರಾಭ್ಯಾಸಕ್ಕೆ ಸೇರ್ಪಡೆಗೊಂಡಿತು.
* ಪ್ರಸ್ತುತ ವರ್ಷದಿಂದ 'ಮಲಬಾರ್' ಕವಾಯತಿನಲ್ಲಿ ಆಸ್ಟ್ರೇಲಿಯ ರಾಷ್ಟ್ರವು ಕೂಡ ಹೊಸದಾಗಿ ಸಂಘಟನೆಯನ್ನು ಸೇರಿಕೊಂಡಿದೆ.
* ಎರಡನೇ ಹಂತದ ಕವಾಯತು ನ.17 ರಿಂದ 20ರವರೆಗೆ ಅರಬ್ಬಿ ಸಮುದ್ರದಲ್ಲಿ ನಡೆಯಲಿದೆ.

## ಆಸ್ಟ್ರೇಲಿಯಾದಲ್ಲಿರುವ ವಿಶ್ವದ ಅತಿ ದೊಡ್ಡ 'ಪಿಂಕ್ ಡೈಮಂಡ್' ಗಣಿ ಸ್ಥಗಿ



ಸಿಡ್ನಿ: ಆಸ್ಟ್ರೇಲಿಯಾದ ಪಶ್ಚಿಮ ಭಾಗದ ಕಿಂಬರ್ಲಿ ಎಂಬ ಪ್ರದೇಶದಲ್ಲಿ 'ಆರ್ಗೈಲ್' ಎಂಬ ಹೆಸರಿನ ವಿಶ್ವದ ಅತಿ ದೊಡ್ಡದಾದ 'ಪಿಂಕ್ ಡೈಮಂಡ್' ಗಣಿಯನ್ನು ಇಲ್ಲಿನ ಸಂಪನ್ಮೂಲ ಕೊರತೆ ಹಿನ್ನಲೆ ಗಣಿಯನ್ನು ಸ್ಥಗಿತಗೊಳಿಸುವುದಾಗಿ ಎಂದು ರಿಯೊ ಟಿಂಟೊ ಸಂಸ್ಥೆಯು ತಿಳಿಸಿದೆ. ಜಗತ್ತಿನ ಶೇ 90 ರಷ್ಟು ನಸುಗೆಂಪು ಬಣ್ಣದ ವಜ್ರಗಳನ್ನು ಈ ಗಣಿಯಿಂದಾನೇ ಪೂರೈಸಲಾಗುವದು. 1979ರಲ್ಲಿ ಮೊದಲ ಬಾರಿಗೆ ಈ ಪ್ರದೇಶದಲ್ಲಿ ವಜ್ರವನ್ನು ಪತ್ತೆಮಾಡಲಾಗಿತ್ತು.

## 23ನೆ ಆವೃತ್ತಿಯ ಬೆಂಗಳೂರು ತಂತ್ರಜ್ಞಾನ ಶೃಂಗಸಭೆ 2020 ದಿನಾಂಕ ನಿಗದಿ




ಬೆಂಗಳೂರು : ಕರ್ನಾಟಕ ರಾಜ್ಯ ಸರ್ಕಾರವು ಎಲೆಕ್ಟ್ರಾನಿಕ್ಸ್, ಐಟಿ ಬಿಟಿ ಹಾಗೂ ವಿಜ್ಞಾನ ತಂತ್ರಜ್ಞಾನ ವಿಷಯಗಳಿಗೆ ಸಂಬಂಧಿಸಿದ ಪ್ರತಿ ವರ್ಷ ಆಯೋಜಿಸುತ್ತಿರುವ "ತಂತ್ರಜ್ಞಾನ ಶೃಂಗಸಭೆ" ಯನ್ನು ಇದೆ ನವೆಂಬರ್ 19 ರಿಂದ 21ರ ವರೆಗೆ ಆಯೋಜಿಸಲಾಗಿದೆ. ಕೋರೋಣ ಸೋಂಕಿನ ಕಾರಣ ಇದೇ ಮೊದಲ ಬಾರಿಗೆ ಈ ಶೃಂಗಸಭೆಯನ್ನು ವರ್ಚುವಲ್ ಸ್ವರೂಪ(ವಿಡಿಯೋ ಕಾನ್ಪರೆನ್ಸ್) ಮೂಲಕ ನಡೆಸಲಿದೆ.

* ಈ ಶೃಂಗಸಭೆಯನ್ನು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ವಿಡಿಯೊ ಕಾನ್ಪರೆನ್ಸ್ ಮೂಲಕ ಚಾಲನೆ ನೀಡಿ ಮಾತನಾಡಲಿದ್ದಾರೆ.
* ಶೃಂಗಸಭೆಯಲ್ಲಿ, 80 ಜಾಗತಿಕ ಪ್ರತಿಭಾನ್ವಿತರು ಸೇರಿ 250ಕ್ಕೂ ಹೆಚ್ಚು ವಿಷಯ ಪರಿಣಿತರು ವಿವಿಧ ವಿಷಯಗಳ ಕುರಿತು ಮಾತನಾಡಲಿದ್ದಾರೆ.

## ನೇಪಾಳ ಪ್ರವಾಸ ಕೈಗೊಂಡ ಭಾರತೀಯ ಸೇನಾ ವರಿಷ್ಠ ಎಂಎಂ ನರಾವಣೆ



ಕಠ್ಮಂಡು: ನೇಪಾಳ ಸೇನಾ ವರಿಷ್ಠ ಜನರಲ್ ಪೂರ್ಣ ಚಂದ್ರ ಥಾಪಾ ಅವರ ಅಧಿಕೃತ ಆಹ್ವಾನದ ಮೇರೆಗೆ ಭಾರತೀಯ ಸೇನಾ ವರಿಷ್ಠ ಜನರಲ್ ಎಂಎಂ ನರಾವಣೆ ಅವರು ಮೂರು ದಿನಗಳ ಕಾಲ ನೇಪಾಳ ಪ್ರವಾಸ ಕೈಗೊಂಡಿದ್ದು, ಈ ಭೇಟಿ ವೇಳೆ ಭಾರತ ಮತ್ತು ನೇಪಾಳ ರಾಷ್ಟ್ರಗಳ ನಡುವಿನ ಗಡಿ ವಿವಾದ ಸೇರಿದಂತೆ ದ್ವಿಪಕ್ಷೀಯ ಸಂಬಂಧವನ್ನು ಮತ್ತಷ್ಟು ಉತ್ತಮಗೊಳಿಸುವ ಕುರಿತು ಚರ್ಚೆಗಳು ನಡೆಯಲಿವೆ ಎಂದು ವರದಿಗಳು ತಿಳಿಸಿವೆ.

# 05-11-2020

## DRDO ದಿಂದ ಪಿನಾಕಾ ರಾಕೆಟ್ ವ್ಯವಸ್ಥೆಯ ಯಶಸ್ವಿ ಪರೀಕ್ಷೆ



ನವದೆಹಲಿ: ಭಾರತೀಯ ರಕ್ಷಣಾ ಸಂಶೋಧನಾ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ) ಯು ಒಡಿಶಾ ರಾಜ್ಯದ ಕರಾವಳಿಯಲ್ಲಿ 'ಪಿನಾಕಾ ರಾಕೆಟ್ ವ್ಯವಸ್ಥೆ'ಯ ನೂತನ ಆವೃತ್ತಿಯನ್ನು ಯಶಸ್ವಿಯಾಗಿ ಪರೀಕ್ಷಿಸಿತು. DRDO ದಿಂದ ದೇಶಿಯ ತಂತ್ರಜ್ಞಾನದ ಮೂಲಕ ಅಭಿವೃದ್ಧಿ ಪಡಿಸಲಾದ ಪಿನಾಕಾ ರಾಕೆಟ್ ವ್ಯವಸ್ಥೆಯನ್ನು ಒಡಿಶಾ ಕರಾವಳಿಯ ಚಂಡಿಪುರದ ಇಂಟಿಗ್ರೇಟೆಡ್ ಟೆಸ್ಟ್ ರೇಂಜ್ ನಲ್ಲಿ ಯಶಸ್ವಿಯಾಗಿ ಹಾರಾಟ ನಡೆಸಲಾಯಿತು.

* ಪಿನಾಕಾ ರಾಕೆಟ್‌ಗಳ ವ್ಯಾಪ್ತಿ ಸುಮಾರು 37 ಕಿ.ಮೀ.
* ಪಿನಾಕಾ ರಾಕೆಟ್ ಪರೀಕ್ಷೆ ವೇಳೆ ಒಟ್ಟು ಆರು ರಾಕೆಟ್ ಗಳನ್ನು ಸರಣಿಯಲ್ಲಿ ಉಡಾಯಿಸಲಾಯಿತು ಹಾಗೂ ಎಲ್ಲಾ ಪರೀಕ್ಷೆಗಳು ಸಂಪೂರ್ಣ ಯಶಸ್ವಿಯಾದವು.
* ಶಿವನ ಬಿಲ್ಲಿನ ಹೆಸರಿನ ಪಿನಾಕಾ ರಾಕೆಟ್‌ಗಳು ಬಹು ಬ್ಯಾರೆಲ್ ರಾಕೆಟ್ ಲಾಂಚರ್ ವ್ಯವಸ್ಥೆಗಳ ಭಾಗವಾಗಿವೆ.

## ದೇಶದ ತಯಾರಿಕಾ ವಲಯ 13ವರ್ಷಗಳಲ್ಲೇ ಕ್ಷಿಪ್ರ ಪ್ರಗತಿ



ನವದೆಹಲಿ : ಕೋರೋಣ ಸೋಂಕಿನ ಭೀತಿಯಿಂದ ವಿಧಿಸಲಾಗಿದ್ದ ಲಾಕ್ ಡೌನ್ ಹಿನ್ನಲೆ ದೇಶದ ಆರ್ಥಿಕತೆ ತೀವ್ರ ಹದಗೆಟ್ಟಿತ್ತು, ಇದೀಗ ಲಾಕ್ ಡೌನ್ ಹಂತ ಹಂತವಾಗಿ ತೆರವುಗೊಳಿಸಿದ ಹಿನ್ನಲೆ ದೇಶವು ಆರ್ಥಿಕ ಪ್ರಗತಿ ಕಾಣುತಿದ್ದು, ಅದೇ ರೀತಿ ತಯಾರಿಕಾ ವಲಯವೂ ಚೇತರಿಕೆ ಕಂಡಿದೆ, ಕಳೆದ 13 ವರ್ಷಗಳ ಅವಧಿಯಲ್ಲೇ ತಯಾರಿಕಾ ವಲಯವು ಕ್ಷಿಪ್ರ ಪ್ರಗತಿ ಸಾಧಿಸಿರುವುದು ಆಶಾದಾಯಕ ಬೆಳವಣಿಗೆಯಾಗಿದೆ.

## ಫ್ರಾನ್ಸ್ ನಿಂದ ಭಾರತಕ್ಕೆ ಮತ್ತೆ ಮೂರು ರಫೇಲ್ ಜೆಟ್ ಗಳ ಹಸ್ತಾಂತರ



ನವದೆಹಲಿ: ಭಾರತ ಫ್ರಾನ್ಸ್ ರಾಷ್ಟ್ರಗಳ ನಡುವೆ ಏರ್ಪಟ್ಟ ಒಪ್ಪಂದದಂತೆ ಎರಡನೇ ಹಂತದಲ್ಲಿ ಫ್ರಾನ್ಸ್ ರಾಷ್ಟ್ರವು ಭಾರತಕ್ಕೆ ರಫೇಲ್ ಯುದ್ಧ ವಿಮಾನಗಳನ್ನು ಹಸ್ತಾಂತರಿಸಿದೆ. ಒಟ್ಟು ಮೂರು ರಫೇಲ್ ಯುದ್ಧ ವಿಮಾನಗಳು ಫ್ರಾನ್ಸ್‌ನಿಂದ ಭಾರತಕ್ಕೆ ತಡೆ ರಹಿತ ಎಂಟು ಗಂಟೆಗಳ ಹಾರಾಟದೊಂದಿಗೆ ಭಾರತವನ್ನು ತಲುಪಿವೆ. 8 ಗಂಟೆಗಳ ದೀರ್ಘ ಪ್ರಯಾಣದಲ್ಲಿ ಮಾರ್ಗ ಮಧ್ಯೆ ಮೂರು ಬಾರಿ ಇಂಧನ ಭರ್ತಿ ಮಾಡಲಾಗಿದೆ. ಈ ಮೂಲಕ ರಫೇಲ್ ಯುದ್ಧ ವಿಮಾನಗಳು ದೂರ ವ್ಯಾಪ್ತಿಯ ಕಾರ್ಯಾಚರಣೆಯ ಸಾಮರ್ಥ್ಯವನ್ನು ತೋರಿಸಿಕೊಟ್ಟಿವೆ.

* ದಿನಾಂಕ ಜುಲೈ 29ರಂದು ಮೊದಲ ಹಂತದಲ್ಲಿ 5 ರಫೇಲ್‌ಗಳು ಭಾರತ ತಲುಪಿದ್ದವು ಇದೀಗ ಮತ್ತೆ ಮೂರೂ ಸೇರ್ಪಡೆಗೊಂಡಿವೆ. ಒಟ್ಟು ₹59,000 ಕೋಟಿ ವೆಚ್ಚದಲ್ಲಿ 36 ರಫೇಲ್ ಜೆಟ್ ಗಳ ಖರೀದಿಗೆ ಫ್ರಾನ್ಸ್ ಸರ್ಕಾರದೊಂದಿಗೆ ಭಾರತವು ಒಪ್ಪಂದ ಮಾಡಿಕೊಂಡಿದೆ.

## ವಿಶ್ವದ ಅತ್ಯುನ್ನತ ವಿಜ್ಞಾನಿಗಳ ಪಟ್ಟಿಯಲ್ಲಿ ಸ್ಥಾನ ಪಡೆದ ಕರ್ನಾಟಕದ ಡಾ.ಜೆ.ಜಿ.ಮಂಜುನಾಥ



ಮಡಿಕೇರಿ: ಯುಎಸ್‌ಎ ಸ್ಟ್ಯಾನ್ಫೋರ್ಡ್ ವಿಶ್ವವಿದ್ಯಾನಿಲಯ ಇತ್ತೀಚಿಗೆ ನಡೆಸಿದ ಅನಲೈಟಿಕಲ್ ಕೆಮೆಸ್ಟ್ರಿ ಮತ್ತು ಎನರ್ಜಿ ಕ್ಷೇತ್ರದಲ್ಲಿ ಸಂಶೋಧನೆ ಮಾಡಿದ ಪ್ರಮುಖ ಶೇಕಡಾ 02 ವಿಜ್ಞಾನಿಗಳ ಸಮೀಕ್ಷೆಯಲ್ಲಿ ಕರ್ನಾಟಕದ ಡಾ.ಜೆ.ಜಿ.ಮಂಜುನಾಥ ಅವರು ಸ್ಥಾನಪಡೆದಿದ್ದಾರೆ.

* ಡಾ.ಜೆ.ಜಿ.ಮಂಜುನಾಥ ಅವರು ಈವರೆಗೆ 93 ಅಂತರಾಷ್ಟ್ರೀಯ ಸಂಶೋಧನಾ ಲೇಖನಗಳನ್ನು ಪ್ರಕಟಿಸಿದ್ದು, ಪ್ರಸುತ್ತ 7 ಪಿ.ಹೆಚ್.ಡಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದ್ದಾರೆ.
* ಪ್ರಸ್ತುತ ಇವರು ಮಂಗಳೂರು ವಿಶ್ವವಿದ್ಯಾನಿಲಯದ ಅಧೀನ ಕಾಲೇಜು ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಕಾಲೇಜಿನ ರಸಾಯನಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

# 06-11-2020

## ಪಶ್ಚಿಮ ಬಂಗಾಳ ಸರ್ಕಾರದಿಂದ SC ST ಜನರಿಗೆಹಲವು ಯೋಜನೆಗಳು



ಪಶ್ಚಿಮ ಬಂಗಾಳ ರಾಜ್ಯದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿಯವರು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ನಿರಾಶ್ರಿತರ ಜನರಿಗಾಗಿ ಹಲವು ಯೋಜನೆಗಳನ್ನು ಘೋಷಿಸಿದ್ದಾರೆ. ವಿವರಗಳು :

* ಪಶ್ಚಿಮ ಬಂಗಾಳ ರಾಜ್ಯದ ತುಂಬಾ ನಿರಾಶ್ರಿತರು ನೆಲೆಸಿದ್ದು, ಇವರಿಗಾಗಿ ಹೊಸದಾಗಿ 25 ಸಾವಿರ ಪ್ಲಾಟ್(ನಿವೇಶನ) ನೀಡಲು ಯೋಜಿಸಿದೆ.
* ಎರಡು ಲಕ್ಷ ಜನರಿಗೆ ಸಹಕಾರಿ ಬ್ಯಾಂಕುಗಳ ಮೂಲಕ ದ್ವಿಚಕ್ರ ವಾಹನಗಳನ್ನು ಖರೀದಿಸಲು ಸಾಲ ಸೌಲಭ್ಯ ಕಲ್ಪಿಸಲಾಗುವುದು.
* ಇನ್ನು ವಾರ್ಷಿಕವಾಗಿ 1.5 ಲಕ್ಷ ರೂ. ಮೊತ್ತದ ಕ್ಯಾನ್ಸರ್, ಕಾರ್ಡಿಯೋಥೊರಾಸಿಕ್ ಶಸ್ತ್ರಚಿಕಿತ್ಸೆಗಳು, ನರ ಶಸ್ತ್ರಚಿಕಿತ್ಸೆಗಳು, ರಕ್ತದ ಕಾಯಿಲೆಗಳು, ಪಿತ್ತಜನಕಾಂಗದ ಕಾಯಿಲೆಗಳು ಈ ಯೋಜನೆಯ ವ್ಯಾಪ್ತಿಗೆ ಬರುತ್ತವೆ. ಯೋಜನೆಯ ಸಂಪೂರ್ಣ ಪ್ರೀಮಿಯಂ ಅನ್ನು ರಾಜ್ಯ ಸರ್ಕಾರ ಭರಿಸುತ್ತದೆ. ಪಶ್ಚಿಮ ಬಂಗಾಳ ಸರ್ಕಾರವು 2018 ರಲ್ಲಿ ಮಾಟುವಾ ಅಭಿವೃದ್ಧಿ ಮಂಡಳಿ(Matua Development Board) ಸ್ಥಾಪಿಸಿದ್ದು, ಈ ಮಂಡಳಿಗಳು ಆಯಾ ಸಮುದಾಯಗಳ ಸಾಮಾಜಿಕ ಆರ್ಥಿಕ ಸ್ಥಿತಿಯನ್ನು ಸುಧಾರಿಸಲು ಸಹಾಯ ಮಾಡುತ್ತದೆ.

### ಭಾರತ ಮತ್ತು ಇಸ್ರೇಲ್ ನಡುವೆ ಆರೋಗ್ಯ ಮತ್ತು ಔಷಧ ವಿಷಯದ ಒಪ್ಪಂದಕ್ಕೆ ಸಹಿ



ಇತ್ತೀಚಿಗೆ ಕೇಂದ್ರ ಸಚಿವ ಸಂಪುಟವು ಪ್ರಧಾನಿ ಮೋದಿ ಅವರ ಅಧ್ಯಕ್ಷತೆಯಲ್ಲಿ ನಡೆಸಿದ ಸಭೆಯಲ್ಲಿ ಆರೋಗ್ಯ ಮತ್ತು ಔಷಧ ಕ್ಷೇತ್ರದಲ್ಲಿ ಇಸ್ರೇಲ್ ಜೊತೆಗಿನ ಒಪ್ಪಂದಕ್ಕೆ ಅನುಮೋದನೆ ನೀಡಿದೆ. ಇಸ್ರೇಲ್ ಜೊತೆಗಿನ ಈ ಒಪ್ಪಂದದಿಂದ ವೈದ್ಯಕೀಯ ಸಾಧನಗಳು, ಔಷಧಗಳು ಮತ್ತು ಸೌಂದರ್ಯವರ್ಧಕಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಉಭಯ ರಾಷ್ಟ್ರಗಳು ಪರಸ್ಪರ ವಿನಿಮಯ ಮಾಡಿಕೊಳ್ಳಲಿವೆ. ಹಾಗು ಸಾರ್ವಜನಿಕ ಆರೋಗ್ಯ ಕುರಿತ ಕ್ರಮಗಳು ಮತ್ತು ಹವಾಮಾನ ಅಪಾಯಗಳ ಬಗ್ಗೆ ಪರಸ್ಪರ ಕೌಶಲ್ಯಗಳನ್ನು ಹಂಚಿಕೊಳ್ಳುವುದು.

* ಇಸ್ರೇಲ್ ಭಾರತಕ್ಕೆ ಏಪ್ರಿಲ್ 2020 ರಲ್ಲಿ,COVID 19 ವಿರುದ್ಧ ಹೋರಾಡಲು ಸುಧಾರಿತ ವೈದ್ಯಕೀಯ ಉಪಕರಣಗಳನ್ನು ಪೂರೈಸಿತು. ಪ್ರತಿಯಾಗಿ ಭಾರತವು ಇಸ್ರೇಲ್ ದೇಶಕ್ಕೆ ಹೈಡ್ರಾಕ್ಸಿಕ್ಲೋರೋಕ್ವಿನ್ ಮತ್ತು ಐದು ಟನನಷ್ಟು ಔಷಧಿಗಳನ್ನು ಇಸ್ರೇಲ್ ಗೆ ಕಳುಹಿಸಿತು.
* ಇನ್ನು ಕೃಷಿ ಕ್ಷೇತ್ರದಲ್ಲಿ ಭಾರತ ಮತ್ತು ಇಸ್ರೇಲ್ ಸುದೀರ್ಘ ಇತಿಹಾಸ ಮತ್ತು ಬಲವಾದ ಸಹಕಾರವನ್ನು ಹೊಂದಿವೆ. ಹಾಗು ರೈತರಿಗೆ ತರಬೇತಿ ನೀಡುತ್ತವೆ ಮತ್ತು ಸುಧಾರಿತ ಕೃಷಿ ಪದ್ಧತಿಗಳ ಬಗ್ಗೆ ಜ್ಞಾನವನ್ನು ಇಸ್ರೇಲ್ ತಜ್ಞರು ನೇರವಾಗಿ ಭಾರತದೊಂದಿಗೆ ಹಂಚಿಕೊಳ್ಳುತಾರೆ.

### ಭಾರತದ ಸೇನಾ ಮುಖ್ಯಸ್ಥ ನರವಾಣೆಗೆ ನೇಪಾಳ ಸೇನೆಯ ಜನರಲ್ ರ್ಯಾಂಕ್ ಗೌರವ



ಕಠ್ಮಂಡು: ಭಾರತದ ನೆರೆಯ ರಾಷ್ಟ್ರ ನೇಪಾಳಕ್ಕೆ ಭೇಟಿ ನೀಡಿರುವ ಭಾರತೀಯ ಸೇನೆಯ ಮುಖ್ಯಸ್ಥ ಜನರಲ್ ಎಂ.ಎಂ.ನರಾವಣೆ ಅವರಿಗೆ ನೇಪಾಳ ಸೇನೆಯ ಜನರಲ್ ರ್ಯಾಂಕ್ ಗೌರವ ನೀಡಿ ಗೌರವಿಸಲಾಗಿದೆ. ನೇಪಾಳ ಪ್ರವಾಸದಲ್ಲಿರುವ ಇವರಿಗೆ ಇತ್ತೀಚಿಗೆ ನಡೆದ ವಿಶೇಷ ಸಮಾರಂಭದಲ್ಲಿ ನೇಪಾಳ ಅಧ್ಯಕ್ಷೆ ಬಿದ್ಯಾ ದೇವಿ ಭಂಡಾರಿ ನೇಪಾಳ ಸೇನೆಯ ಈ ಗೌರವವನ್ನು ನರವಾಣೆಗೆ ಪ್ರದಾನ ಮಾಡಿದರು. ಈ ಮೂಲಕ ಉಭಯ ರಾಷ್ಟ್ರಗಳ ಸೇನಾ ಸಂಬಂಧವನ್ನು ಮತ್ತಷ್ಟು ಬಲಗೊಳಿಸಲಾಯಿತು. ಉಭಯ ರಾಷ್ಟ್ರಗಳ ಸೇನೆಗಳ ನಡುವಣ ದೃಢ ಸಂಬಂಧದ ಪ್ರತಿಬಿಂಬಿವಾಗಿ 1950 ರಲ್ಲಿ ಮೊದಲ ಬಾರಿಗೆ ಜನರಲ್ ಕೆ ಎಂ ಕಾರಿಯಪ್ಪ ಅವರಿಗೆ ಈ ಗೌರವ ನೀಡಲಾಗಿತ್ತು. ಇನ್ನು ಕಳೆದ ವರ್ಷ ನೇಪಾಳ ಸೇನಾ ಮುಖ್ಯಸ್ಥ ಜನರಲ್ ಪೂರ್ಣ ಚಂದ್ರ ತಪಾರವರಿಗೆ ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರು 'ಗೌರವ ಜನರಲ್' ನ್ನು ಪ್ರದಾನ ಮಾಡಿದ್ದರು.

### ರಿಲಯನ್ಸ್ ರಿಟೇಲ್‌ನಲ್ಲಿ ಸೌದಿ ಅರೇಬಿಯಾ ಕಂಪನಿಯಿಂದ ಹೂಡಿಕೆ




ದುಬೈ: ಭಾರತದ ದಿಗ್ಗಜ ಸಂಸ್ಥೆಯಾದ ರಿಲಯನ್ಸ್ ನ ರಿಟೇಲ್ ವೆಂಚರ್ಸ್ ವಿಭಾಗದಲ್ಲಿ ಸೌದಿ ಅರೇಬಿಯಾದ ಸಂಸ್ಥೆಯಾದ ಪಬ್ಲಿಕ್ ಇನ್‌ವೆಸ್ಟ್ ಮೆಂಟ್ ಫಂಡ್ ಕಂಪನಿಯು ಶೇ 2.04ರಷ್ಟು ಷೇರುಗಳನ್ನು ಒಟ್ಟು ₹ 9,620 ಕೋಟಿ ಮೊತ್ತಕ್ಕೆ ಖರೀದಿಸಿದೆ. ಈ ಮೂಲಕ ಸಂಸ್ಥೆಯು ಭಾರತದಲ್ಲಿ ತನ್ನ ರಿಟೇಲ್ ಮಾರುಕಟ್ಟೆಯ ಸ್ಥಾನವನ್ನು ಉತ್ತಮಗೊಳಿಸುತ್ತಿದೆ. ಕೆಲವೇ ದಿನಗಳ ಹಿಂದೆ ಕಂಪನಿಯು ರಿಲಯನ್ಸ್ ಜಿಯೊದ ಶೇ 2.32ರಷ್ಟು ಷೇರುಗಳನ್ನು ಖರೀದಿಸಿತ್ತು.

## 07-11-2020

### ಭಾರತ ಇಂಡೋನೇಷ್ಯಾ ನಡುವೆ ಕಲ್ಲಿದ್ದಲು ಕುರಿತು 5 ನೇ ಜಂಟಿ ಚರ್ಚೆ



ಭಾರತವು ಇಂಡೋನೇಷ್ಯಾದಿಂದ ಹೆಚ್ಚಿನ ಕಲ್ಲಿದ್ದಲು ಆಮದು ಮಾಡಿಕೊಳ್ಳಲು ನಿರ್ಧರಿಸಿದ್ದು, ಈ ಕುರಿತು ಇಂಡೋನೇಷ್ಯಾ ದೊಂದಿಗೆ 5 ನೇ ಜಂಟಿ ಸಭೆ ನಡೆಸಿತು. ಇಂಡೋನೇಷ್ಯಾ ಏಕೆ ? ಕೋರೋಣ ಸಾಂಕ್ರಾಮಿಕ ರೋಗದಿಂದಾಗಿ 2020 ರ ಸೆಪ್ಟೆಂಬರ್ ನಲ್ಲಿ ಇಂಡೋನೇಷ್ಯಾದ ಕಲ್ಲಿದ್ದಲು ಬೆಲೆ ಬಾರಿ ಪ್ರಮಾಣದಲ್ಲಿ ಕುಸಿತ ಕಂಡಿದ್ದು, ಇದೆ ಕಾರಣದಿಂದ ಭಾರತವು ಇಂಡೋನೇಷ್ಯಾದಿಂದ ಕಲ್ಲಿದ್ದಲು ಆಮದನ್ನು ಹೆಚ್ಚಿಸಲಿದೆ. ಇಂಡೋನೇಷ್ಯಾವು ವಿಶ್ವದಲ್ಲಿಯೇ ಮೂರನೇ ಅತಿದೊಡ್ಡ ಕಲ್ಲಿದ್ದಲು ಉತ್ಪಾದಕ ರಾಷ್ಟ್ರವಾಗಿದೆ. ಹಾಗು ವಿಶ್ವ ಕಲ್ಲಿದ್ದಲು ರಫ್ತಿನಲ್ಲಿ ಶೇಕಡಾ 40 ರಷ್ಟು ಪಾಲನ್ನು ಕೇವಲ ಇಂಡೋನೇಷ್ಯಾ ಹೊಂದಿದೆ.

* ಭಾರತದಲ್ಲಿ ವಿಶ್ವದ ನಾಲ್ಕನೇ ಅತಿದೊಡ್ಡ ಕಲ್ಲಿದ್ದಲು ನಿಕ್ಷೇಪಗಳಿವೆ.
* ಭಾರತವು 2020 ರವರೆಗೆ ಇಂಡೋನೇಷ್ಯಾದಿಂದ 128.7 ಮಿಲಿಯನ್ ಟನ್ ಕಲ್ಲಿದ್ದಲನ್ನು ಆಮದು ಮಾಡಿಕೊಂಡಿದೆ.

# 08-11-2020

## ISRO ದಿಂದ ಇಒಎಸ್ 01 ಉಪಗ್ರಹ ಉಡಾವಣೆ



ಚೆನ್ನೈ: ಭಾರತದ ಹೆಮ್ಮೆಯ ಸಂಸ್ಥೆ ISRO ವು ರಾಡಾರ್ ಇಮೇಜಿಂಗ್ ಉಪಗ್ರಹ ಇಒಎಸ್ 01 ಸೇರಿ ವಿವಿಧ ಒಟ್ಟು 10 ಉಪಗ್ರಹಗಳನ್ನು ಶ್ರೀಹರಿ ಕೋಟಾದ ಮೊದಲನೇ ಲಾಂಚ್ ಪ್ಯಾಡ್‌ನಿಂದ ಯಶಸ್ವಿಯಾಗಿ ಉಡಾವಣೆ ಮಾಡಿದೆ. ಇಒಎಸ್ 01 ಉಪಗ್ರಹವು ಹಗಲು ಮತ್ತು ರಾತ್ರಿ ಎಲ್ಲ ಹವಾಮಾನ ಪರಿಸ್ಥಿತಿಯಲ್ಲೂ ಫೋಟೋ ತೆಗೆಯುವ ಸಾಮರ್ಥ್ಯಹೊಂದಿದ್ದು, ಈ ಮೂಲಕ ಎಲ್ಲ ರೀತಿಯ ನಾಗರಿಕ ಚಟುವಟಿಕೆಗಳನ್ನು ಇದು ದಾಖಲಿಸಲಿದೆ. ಈ ಮೂಲಕ ರಾಷ್ಟ್ರದ ಭದ್ರತೆ, ಸುರಕ್ಷತೆಗೆ ಉಪಯೋಗವಾಗಲಿದೆ. ಈ ಉಡಾವಣೆಯಲ್ಲಿ ಒಟ್ಟು 9 ವಿದೇಶಿ ಉಪಗ್ರಹಗನ್ನು ಉಡಾವಣೆಮಾಡಲಾಗಿದ್ದು, ಈ ಮೂಲಕ ಇಸ್ರೋ ಇಲ್ಲಿಯವರೆಗೆ ಒಟ್ಟು 328 ವಿದೇಶಿ ಉಪಗ್ರಹ ಉಡಾವಣೆ ಮಾಡಿದ ನೂತನ ದಾಖಲೆ ನಿರ್ಮಿಸಿತು.

## ನ್ಯೂಜಿಲ್ಯಾಂಡ್ ಕ್ಯಾಬಿನೆಟ್‌ಗೆ ಆಯ್ಕೆಯಾದ ಭಾರತೀಯ ಮೂಲದ ಪ್ರಿಯಾಂಕಾ




ನವದೆಹಲಿ: ಇತ್ತೀಚಿಗೆ ನ್ಯೂಜಿಲೆಂಡ್ ಪ್ರಧಾನಿ ಜೆಸಿಂಡಾ ಆರ್ಡೆರ್ನ್ ರವರು ತಮ್ಮ ಕ್ಯಾಬಿನೆಟ್ ಗೆ ಐವರು ನೂತನ ಸಚಿವರನ್ನು ನೇಮಕಗೊಳಿಸಿದ್ದು, ಇವರಲ್ಲಿ ಭಾರತೀಯ ಮೂಲದ ಪ್ರಿಯಾಂಕಾ ಅವರು ಒಬ್ಬರಾಗಿದ್ದಾರೆ. ಈ ಮೂಲಕ ನ್ಯೂಜಿಲೆಂಡ್ ಕ್ಯಾಬಿನೆಟ್ ನಲ್ಲಿ ಸ್ಥಾನ ಪಡೆದ ಮೊದಲ ಭಾರತೀಯ ಮೂಲದ ಸಂಸದರಾಗಿದ್ದಾರೆ. ಇವರು 2017 ರಲ್ಲಿ ಸಂಸತ್ತಿನಲ್ಲಿ ಮಲಯಾಳಿ ಭಾಷೆಯಲ್ಲಿ ಮಾತನಾಡುವ ಮೂಲಕ ಭಾರತೀಯರ ಗಮನ ಸೆಳೆದಿದ್ದರು. ಪ್ರಿಯಾಂಕಾ ಜನಿಸಿದ್ದು ತಮಿಳುನಾಡಿನ ಚೆನ್ನೈ ನಗರದಲ್ಲಿ ಹಾಗೂ ಅವರ ಕುಟುಂಬದ ಮೂಲ ಕೇರಳದಲ್ಲಿ.

## ಹಾಕಿ ಇಂಡಿಯಾ ಅಧ್ಯಕ್ಷರಾಗಿ ಜ್ಞಾನೇಂದ್ರೊ ನಿಂಗೊಬಮ್ ಆಯ್ಕೆ



ಕ್ರೀಡಾ ಸಂಹಿತೆಯ ಮಾರ್ಗಸೂಚಿಗಳನ್ನು ಉಲ್ಲಂಘಿಸಿದ ಹಿನ್ನಲೆ ಹಾಕಿ ಇಂಡಿಯಾ ಅಧ್ಯಕ್ಷ ಸ್ಥಾನದಿಂದ ಕ್ರೀಡಾ ಸಚಿವಾಲಯ ಇವರನ್ನು ಕೆಳಗಿಳಿಸಿತ್ತು. ಆಗಿನಿಂದ ಹಾಕಿ ಇಂಡಿಯಾ ಅಧ್ಯಕ್ಷ ಹುದ್ದೆಗೆ ಹಂಗಾಮಿಯಾಗಿ ನೇಮಕಗೊಂಡಿದ್ದ ಜ್ಞಾನೇಂದ್ರೊ ಹಂಗಾಮಿ ಅವರನ್ನು ಪ್ರಸ್ತುತ ಹಾಕಿ ಇಂಡಿಯಾದ (AH) ನ ನೂತನ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಮಾಡಲಾಗಿದೆ.

## ಅಮೆರಿಕ ಅಧ್ಯಕ್ಷೀಯ ಚುನಾವಣೆಯಲ್ಲಿ ಜಯಸಾಧಿಸಿದ ಜೊ ಬೈಡನ್ !



ವಾಷಿಂಗ್ಟನ್ : ಅಮೇರಿಕಾ ಅಧ್ಯಕ್ಷೀಯ ಚುನಾವಣೆಯ ಮತ ಎಣಿಕೆಯಲ್ಲಿ ಹಾಲಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗಿಂತ, ಜೊ ಬೈಡನ್ ಮುನ್ನಡೆ ಪಡೆದುಕೊಂಡಿದ್ದು, ಬಹುತೇಕ ಚುನಾವಣೆಯಲ್ಲಿ ಗೆಲುವು ಖಚಿತ ಪಡಿಸಿಕೊಂಡಿದ್ದಾರೆ, ಇನ್ನು ಬೈಡನ್ ಅವರ ಗೆಲುವನ್ನು ಅಧಿಕೃತವಾಗಿ ಘೋಷಿಸುವುದೊಂದೇ ಬಾಕಿ. ಅಮೇರಿಕಾದಲ್ಲಿ ಕೋವಿಡ್ ಭೀತಿಯಿಂದ ಜನರು ಮತಗಟ್ಟೆಗಳಿಗೆ ತೆರಳಿ ಮತಚಲಾಯಿಸುವುದರ ಬದಲು ಈ ಬಾರಿ ಅತಿ ಹೆಚ್ಚು ಇಮೇಲ್ ಹಾಗು ಅಂಚೆ ಮೂಲಕ ಮತದಾನ ಮಾಡಿದುದರಿಂದ ಈ ಬಾರಿ ಅಂಚೆ ಮತ ಎಣಿಕೆ ಕಾರ್ಯ ವಿಳಂಬವಾಗಿದೆ.

* ಪ್ರಸ್ತುತ ವರದಿಯ ಪ್ರಕಾರ ಟ್ರಂಪ್ ಪಕ್ಷದ 214 ಪ್ರತಿನಿಧಿಗಳು ಹಾಗೂ ಬೈಡನ್ ಅವರ ಪಕ್ಷದ 290 ಮಂದಿ ಆಯ್ಕೆಯಾಗಿದ್ದಾರೆ.
* ಡೆಮಾಕ್ರಟ್ ಪಕ್ಷದ ಅಭ್ಯರ್ಥಿ ಜೊ ಬೈಡನ್ ವಿಜಯವನ್ನು ಈಗಾಗಲೇ ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ.
* ಅಮೇರಿಕಾ ದೇಶದ ಅಧ್ಯಕ್ಷ ಸ್ಥಾನಕ್ಕೆ ಜೊ ಬೈಡನ್ ನೇಮಕಗೊಂಡರೆ, ಉಪಾಧ್ಯಕ್ಷ ಸ್ಥಾನವನ್ನು ಕಮಲಾ ಹ್ಯಾರಿಸ್ ಅಲಂಕರಿಸಲಿದ್ದಾರೆ.

## ವಿಶ್ವಸಂಸ್ಥೆಯ ಸಲಹಾ ಸಮಿತಿಗೆ ಭಾರತೀಯ ಮಹಿಳೆ ವಿದಿಶಾ ಮೈತ್ರಾ ಆಯ್ಕೆ




ವಿಶ್ವಸಂಸ್ಥೆ : ವಿಶ್ವ ಸಂಸ್ಥೆಯ ಸಾಮಾನ್ಯ ಸಭೆಗೆ ಭಾರತದ ರಾಜತಾಂತ್ರಿಕ ಅಧಿಕಾರಿ ವಿದಿಶಾ ಮೈತ್ರಾ ಅವರು ಆಯ್ಕೆಗೊಂಡಿದ್ದಾರೆ.
* ವಿಶ್ವಸಂಸ್ಥೆಯ ಏಷ್ಯಾ ಪೆಸಿಫಿಕ್ ಭಾಗದ ಈ ಸಲಹಾ ಸಮಿತಿಗೆ ಒಟ್ಟು 126 ಮತಗಳನ್ನು ಪಡೆಯುವ ಮೂಲಕ ಆಯ್ಕೆಯಾದ ಮೊದಲ ಭಾರತೀಯ ಪ್ರಜೆ ವಿದಿಶಾ ಮೈತ್ರಾ ರವರಾಗಿದ್ದರೆ.
* ವಿಶ್ವಸಂಸ್ಥೆಯ 193 ಸದಸ್ಯರ ಸಾಮಾನ್ಯ ಸಭೆಯು ಭೌಗೋಳಿಕ ಪ್ರಾತಿನಿಧ್ಯ, ವೈಯಕ್ತಿಕ ಅರ್ಹತೆ ಹಾಗೂ ಅನುಭವಗಳನ್ನು ಪರಿಗಣಿಸಿ ಸಲಹಾ ಸಮಿತಿಗೆ ಸದಸ್ಯರನ್ನು ನೇಮಕ ಮಾಡುತ್ತದೆ.
* ಸದಸ್ಯರಾಗಿ ಆಯ್ಕೆಯಾಗಿರುವ ಮೈತ್ರಾ ಅವರ ಸದಸ್ಯತ್ವದ ಅವಧಿ ಮೂರೂವರೆ ವರ್ಷಗಳಾಗಿದ್ದು, 2021 ಜನವರಿ 1 ರಿಂದ ಇವರ ಸದಸ್ಯತ್ವ ಆರಂಭವಾಗಲಿದೆ.

# 09-11-2020

## ಜೊ ಬೈಡನ್ ಸರ್ಕಾರದಿಂದ ಐದು ಲಕ್ಷ ಅನಿವಾಸಿ ಭಾರತೀಯರಿಗೆ ಅಮೆರಿಕ ನಾಗರಿಕತ್ವ!



ವಾಷಿಂಗ್ಟನ್ : ಅಮೆರಿಕದ ನೂತನ ಅಧ್ಯಕ್ಷರಾಗಿ ಜೋ ಬೈಡನ್ ಅವರು ನೇಮಕಗೊಂಡಿದ್ದು, ನೇಮಕಗೊಂಡ ಪ್ರಮುಖ ನಿರ್ಣಯವೊಂದನ್ನು ಕೈಗೊಂಡಿದ್ದು, ಅಮೇರಿಕಾದಲ್ಲಿ ಕೆಲಸಕ್ಕಾಗಿ ಭಾರತ ಸೇರಿದಂತೆ ವಿವಿಧ ರಾಷ್ಟ್ರಗಳಿಂದ ಬಂದು ನೆಲೆಸಿರುವ 5 ಲಕ್ಷ ಅನಿವಾಸಿ ಭಾರತೀಯರು ಸೇರಿದಂತೆ ಒಟ್ಟು 11 ಲಕ್ಷ ವಿದೇಶಿಗರಿಗೆ ಅಮೆರಿಕಾದ ಪೌರತ್ವ ನೀಡಲು ಮುಂದಾಗಿದ್ದಾರೆ.

## ವಾಟ್ಸಾಪ್ ನಲ್ಲಿ UPI ಪಾವತಿಗೆ NCPI ಯಿಂದಅನುಮೋದನೆ



ಫೇಸ್ ಬುಕ್ ಒಡೆತನಕ ಪ್ರಮುಖ ಮೆಸೇಜಿಂಗ್ ಅಪ್ಲಿಕೇಶನ್ whatsapp ನಲ್ಲಿ UPI ಪಾವತಿಯನ್ನು ಆರಂಭಿಸಲು ನ್ಯಾಷನಲ್ ಪೇಮೆಂಟ್ ಕಾರ್ಪೊರೇಷನ್ ಆಫ್ ಇಂಡಿಯಾ ಅನುಮೋದನೆ ನೀಡಿದ್ದು, ಶೀಘ್ರದಲ್ಲೇ "ವಾಟ್ಸಾಪ್ ಪೇ" ಎಂಬ ವಾಟ್ಸಾಪ್ ನ ಹೊಸ ಸೇವೆ ಭಾರತದಲ್ಲಿ ಆರಂಭವಾಗಲಿದೆ. ವಾಟ್ಸ ಆಪ್ ಸಂಸ್ಥೆಯು "ವಾಟ್ಸಾಪ್ ಪೇ" ಎಂಬ ನೂತನ ಪಾವತಿ ಸೇವೆಗಾಗಿ ಜಿಯೋ ಪೇಮೆಂಟ್ ಬ್ಯಾಂಕ್ ಜೊತೆ ಸಹಭಾಗಿತ್ವವನ್ನು ಹೊಂದಿದ್ದು, ಐಸಿಐಸಿಐ ಬ್ಯಾಂಕ್, ಇಂಡಿಯನ್ ಬ್ಯಾಂಕ್, ಆಕ್ಸಿಸ್ ಬ್ಯಾಂಕ್, ಎಚ್‌ಡಿಎಫ್‌ಸಿ ಬ್ಯಾಂಕ್ ಮತ್ತು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಈ ಎಲ್ಲ ಬ್ಯಾಂಕುಗಳಲ್ಲಿ ಪಾಲುದಾರಿಕೆ ಪಡೆಕುಕೊಂಡಿದೆ.
* ವಾಟ್ಸಾಪ್ ಪೇ ಮೂಲಕ ಬಳಕೆದಾರರು UPI ತಂತ್ರಾಂಶವುಳ್ಳ ಅಪ್ಲಿಕೇಶನ್ ಬಳಸಿ ಮತ್ತೊಬ್ಬ ಬಳಕೆದಾರರಿಗೆ ಹಣ ವರ್ಗಾವಣೆ ಮಾಡಬಹುದು.

* ಮೂಲಗಳ ಪ್ರಕಾರ ಜನವರಿ 1, 2021 ರಿಂದ ವಾಟ್ಸಾಪ್ ಪೇ ಭಾರತದಲ್ಲಿ ಜಾರಿಗೆ ಬರಲಿದ್ದು, ಇದು ದೇಶದ 40 ಕೋಟಿಗೂ ಹೆಚ್ಚು ಬಳಕೆದಾರರಿಗೆ ಸೇವೆ ನೀಡಲು ಸಿದ್ಧವಿದೆ.

### ನೌಕಾಯಾನ ಸಚಿವಾಲಯದ ಮರುನಾಮಕರಣ ಪ್ರಧಾನಿ ಘೋಷಣೆ



ಇತ್ತೀಚಿಗೆ ಮೋದಿಯವರು ಸೂರತ್ ಬಳಿಯಿರುವ ಹಜೀರಾ ಮತ್ತು ಭಾವನಗರದ ಘೋಘಾ ಪಟ್ಟಣದ ನಡುವೆ ಜಲ ಸಾರಿಗೆಗಾಗಿ ಆರಂಭಿಸಲಾದ ರೋ ಪ್ಯಾಕ್ಸ್ ಹಡಗು ಸೇವೆಯ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದರು. ಭಾರತ ಸರ್ಕಾರದ ನೌಕಾಯಾನ ಸಚಿವಾಲಯವನ್ನು ಇನ್ನು ಮುಂದೆ 'ಬಂದರು, ನೌಕಾಯಾನ ಮತ್ತು ಜಲಮಾರ್ಗಗಳ ಸಚಿವಾಲಯ' ಎಂದು ಮರುನಾಮಕರಣ ಮಾಡಲಾಗುತ್ತಿದೆ ಎಂದು ಇದೆ ವೇಳೆ ಅವರು ತಿಳಿಸಿದರು.

## 10-11-2020

### 15ನೇ ಹಣಕಾಸು ಆಯೋಗದಿಂದ ರಾಷ್ಟ್ರಪತಿಗೆ ಆರ್ಥಿಕ ವರ್ಷದ ವರದಿ ಸಲ್ಲಿಕೆ



ನವದಹೆಲಿ : 15ನೇ ಹಣಕಾಸು ಆಯೋಗದ ಅಧ್ಯಕ್ಷರಾದ ಎನ್. ಕೆ. ಸಿಂಗ್ ಅವರು ಇತ್ತೀಚಿಗೆ ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರಿಗೆ 2021 22 ರಿಂದ 2025 26ನೇ ಸಾಲಿನ ಆರ್ಥಿಕ ವರ್ಷಗಳ ಸಮಗ್ರ ವರದಿಯನ್ನು ಸಲ್ಲಿಸಿದರು. ಹಣಕಾಸು ಆಯೋಗವು ಸಲ್ಲಿಸಿದ 2020 21ರ ಹಣಕಾಸು ವರ್ಷದ ಶಿಫಾರಸು ಒಳಗೊಂಡ ವರದಿಯನ್ನು ಕೇಂದ್ರ ಸರ್ಕಾರ ಅಂಗೀಕರಿಸಿ 2020ರ ಜನವರಿ 30ರಂದು ಸಂಸತ್ತಿನಲ್ಲಿ ಮಂಡಿಸಿದೆ. ಈ ಬಾರಿ ಹಣಕಾಸು ಆಯೋಗ ಸಲ್ಲಿಸಿದ ವರದಿಯಲ್ಲಿ ತೆರಿಗೆ ಹಂಚಿಕೆ, ಸ್ಥಳೀಯ ಸರ್ಕಾರದ ಅನುದಾನ, ವಿಪತ್ತು ನಿರ್ವಹಣಾ ಅನುದಾನದ, ವಿದ್ಯುತ್ ಕ್ಷೇತ್ರ, ಡಿಬಿಟಿ ಅಳವಡಿಸಿಕೊಳ್ಳುವಿಕೆ, ಘನತ್ಯಾಜ್ಯ ನಿರ್ವಹಣೆ ಸೇರಿ ಹಲವು ಕ್ಷೇತ್ರಗಳ ಕಾರ್ಯಕ್ಷಮತೆ ಪ್ರೋತ್ಸಾಹ ಪರೀಕ್ಷೆ ಮತ್ತು ಶಿಫಾರಸ್ಸಿಗೆ ಆಯೋಗಕ್ಕೆ ಮನವಿ ಮಾಡಲಾಗಿದೆ.

### ಭಾರತ ಮತ್ತು ಮಾಲ್ಡೀವ್ಸ್ ದೇಶಗಳ ನಡುವೆ ನಾಲ್ಕು ಒಪ್ಪಂದ



ಇತ್ತೀಚಿಗೆ ಭಾರತದ ವಿದೇಶಾಂಗ ಕಾರ್ಯದರ್ಶಿ ಹರ್ಷ್ ವರ್ಧನ್ ಅವರು ಮಾಲ್ಡೀವ್ಸ್ ಗೆ ಭೇಟಿ ನೀಡಿದ್ದು, ಇದೆ ಸಂದರ್ಭದಲ್ಲಿ ಭಾರತ ಮತ್ತು ಮಾಲ್ಡೀವ್ಸ್ ನಡುವೆ 100 ಮಿಲಿಯನ್ ಅನುದಾನದ ನಾಲ್ಕು ಒಪ್ಪಂದಗಳಿಗೆ ಸಹಿ ಹಾಕಲಾಗಿದೆ.

* ಈ ನಾಲ್ಕು ಒಪ್ಪಂದಗಳಲ್ಲಿ ಕ್ರೀಡಾ ಮತ್ತು ಯುವ ವ್ಯವಹಾರಗಳ ಸಹಕಾರ, ಸಸ್ಯ ಮತ್ತು ಮಣ್ಣಿನ ಪರೀಕ್ಷಾ ಪ್ರಯೋಗಾಲಯ ಸ್ಥಾಪನೆ ಸೇರಿ ವಿವಿಧ ಒಪ್ಪಂದಗಳಿಗೆ ಭಾರತದಿಂದ ವಿದೇಶಾಂಗ ಕಾರ್ಯದರ್ಶಿ ಹರ್ಷ್ ವರ್ಧನ್ ಹಾಗೂ ಮಾಲ್ಡೀವ್ಸ್ ವಿದೇಶಾಂಗ ಸಚಿವ ಅಬ್ದುಲ್ಲಾ ಶಾಹಿದ್ ಸಹಿ ಹಾಕಿದರು.

* ಇದೆ ವೇಳೆ ಭಾರತದ ವಿದೇಶಾಂಗ ಕಾರ್ಯದರ್ಶಿ ಮಾಲ್ಡೀವ್ಸ್ನ "ಇಂಡಿಯಾ ಫಸ್ಟ್" ನೀತಿಯನ್ನು ಶ್ಲಾಘಿಸಿದರು.

### ಅಜಿಮ್ ಪ್ರೇಮ್ ಜಿ 2020 ಆರ್ಥಿಕ ವರ್ಷದ ಅತ್ಯಂತ ಉದಾರಿ ಭಾರತೀಯ



2020 ನೇ ಆರ್ಥಿಕ ವರ್ಷದಲ್ಲಿ ಭಾರತದ ಪ್ರತಿಷ್ಠಿತ IT ಸಂಸ್ಥೆಯ ಮುಖ್ಯಸ್ಥ ಅಜಿಮ್ ಪ್ರೇಮ್ ಜಿ ಯವರು ಅತ್ಯಂತ ಉದಾರ ವ್ಯಕ್ತಿಯಾಗಿ ಹೊರಹೊಮ್ಮಿದ್ದಾರೆ. 2020 ರ ಆರ್ಥಿಕ ವರ್ಷದಲ್ಲಿ ಅಜಿಮ್ ಪ್ರೇಮ್ ಜಿ ಯವರು ಸರಿ ಸುಮಾರು 7904 ಕೋಟಿ ರೂಪಾಯಿ ಮೊತ್ತವನ್ನು ವಿವಿಧ ಸಾಮಾಜಿಮುಖಿ ಕಾರ್ಯಗಳಿಗೆ ದಾನ ನೀಡಿದ್ದಾರೆ. ಇದು

ದಿನವೊಂದಕ್ಕೆ 22 ಕೋಟಿ ರೂಪಾಯಿಯಷ್ಟು ಆಗಲಿದೆ. ಈ ಮೂಲಕ 2020 ನೇ ಆರ್ಥಿಕ ವರ್ಷದ ಭಾರತದ ಅತ್ಯಂತ ಉದಾರಿ ಉದ್ಯಮಿ ಎಂಬ ಹೆಗ್ಗಳಿಕೆಗೆ ಅಜಿಮ್ ಪ್ರೇಮ್ ಜಿ ಪಾಲಾಗಿದೆ ಎಂದು ಹುರುನ್ ರಿಪೋರ್ಟ್ ಇಂಡಿಯಾ ಮತ್ತು ಎಡೆಲ್ಗೈವ್ ಫೌಂಡೇಶನ್ ವರದಿ ಮಾಡಿವೆ.

* 2019 ನೇ ಸಾಲಿನಲ್ಲಿ ಹೆಚ್ ಸಿಎಲ್ ಟೆಕ್ನಾಲಜೀಸ್ ನ ಶಿವ್ ನಡಾರ್ ಅತಿ ಹೆಚ್ಚು ದಾನ ನೀಡಿದ ಉದಾರಿ ಉದ್ಯಮಿಯಾಗಿದ್ದರು.
* ರಿಲಾಯನ್ಸ್ ಇಂಡಸ್ಟ್ರಿಯ ಮುಖ್ಯಸ್ಥ ಮುಖೇಶ್ ಅಂಬಾನಿ 458 ಕೋಟಿ ರೂಪಾಯಿಗಳ ದಾನ ನೀಡುವ ಮೂಲಕ ದಾನಿಗಳ ಪಟ್ಟಿಯಲ್ಲಿ ಮೂರನೇ ಸ್ಥಾನ ಪಡೆದಿದ್ದಾರೆ.

## ಭಾರತ ಹಾಗೂ ಆಸ್ಟ್ರೇಲಿಯಾ ರಾಷ್ಟ್ರಗಳಿಂದ ಜಲ ಕೇಂದ್ರ(AIWC)ಕ್ಕೆ ಚಾಲನೆ



ಇತ್ತೀಚಿಗೆ ಆಸ್ಟ್ರೇಲಿಯಾದ ಶಿಕ್ಷಣ ಸಚಿವ ಡಾನ್ ತೆಹನ್ ಮತ್ತು ಭಾರತದ ಜಲಶಕ್ತಿ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಅವರು ವರ್ಚುವಲ್ ಕಾರ್ಯಕ್ರಮದ ಮೂಲಕ ಭಾರತ ಮತ್ತು ಆಸ್ಟ್ರೇಲಿಯಾ ರಾಷ್ಟ್ರಗಳ ಜಂಟಿ ಯೋಜನೆಯಾದ ವಾಟರ್ ಸೆಂಟರ್(ಜಲ ಕೇಂದ್ರ)(AIWC) ಕ್ಕೆ ಚಾಲನೆ ನೀಡಿದರು. ಈ ಜಲ ಕೇಂದ್ರವು ಉಭಯ ರಾಷ್ಟ್ರಗಳ ಒಟ್ಟು 21 ಪಾಲುದಾರರನ್ನು ಹೊಂದಿದ್ದು, ಭಾರತದ ಕಡೆಯಿಂದ ಐಐಟಿ ಗುವಾಹಟಿ ಮತ್ತು ಆಸ್ಟ್ರೇಲಿಯಾದ ಕಡೆಯಿಂದ ವೆಸ್ಟರ್ನ್ ಸಿಡ್ನಿ ವಿಶ್ವವಿದ್ಯಾಲಯ ಜಂಟಿಯಾಗಿ ಮುನ್ನಡೆಸುತ್ತಿವೆ. ಈ ಜಲಕೇಂದ್ರದ ಮೂಲಕ ಉಭಯ ದೇಶಗಳು ಎದುರಿಸುತ್ತಿರುವ ಸಾಮಾನ್ಯ ನೀರಿನ ಸಮಸ್ಯೆಗಳು, ಪ್ರವಾಹ, ಬರ, ನೀರಿನ ಸುರಕ್ಷತೆ, ಹವಾಮಾನ ಬದಲಾವಣೆ, ನೀರಿನ ಅತಿಯಾದ ಬಳಕೆ, ನೀರಿನ ಗುಣಮಟ್ಟ ಕುಸಿತ ಸೇರಿ ವಿವಿಧ ಸಮಸ್ಯೆಗಳ ವಿರುದ್ಧ ಕ್ರಮಕೈಗೊಳ್ಳಲು ಜಲ ಕೇಂದ್ರವು ನೆರವಾಗಲಿದೆ.

* ಹಿನ್ನಲೆ : ಜೂನ್ 2020 ರಲ್ಲಿ ನಡೆದ ವರ್ಚುವಲ್ ಶೃಂಗಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಮತ್ತು ಆಸ್ಟ್ರೇಲಿಯಾದ ಪ್ರಧಾನಿ ಸ್ಕಾಟ್ ಮಾರಿಸನ್ ಅವರು ಜಂಟಿಯಾಗಿ ಜಲ ಕೇಂದ್ರದ ಸ್ಥಾಪನೆಯ ಘೋಷಣೆ ಮಾಡಿದ್ದರು.

# 11-11-2020

## ಅರುಣಾಚಲ ಪ್ರದೇಶದ ಶಾಲಾ ಮಕ್ಕಳಿಗೆ ತ್ರಿವರ್ಣ ಬಣ್ಣದ ಮಾಸ್ಕ್ ವಿತರಣೆ



ಇಟಾನಗರ: ಅರುಣಾಚಲ ಪ್ರದೇಶದ ಸರ್ಕಾರವು ಶಾಲಾ ಮಕ್ಕಳ ದೇಶಪ್ರೇಮವನ್ನು ಉತ್ತೇಜಿಸಲು ವಿನೂತನ ಪ್ರಯೋಗವೊಂದಕ್ಕೆ ಮುಂದಾಗಿದ್ದು, ಶಾಲಾ ಮಕ್ಕಳಿಗೆ ತ್ರಿವರ್ಣ ಧ್ವಜ ಬಣ್ಣದ ಮಾಸ್ಕ್ ಗಳನ್ನು ವಿತರಣೆ ಮಾಡುತ್ತಿದೆ. ಅರುಣಾಚಲ ಪ್ರದೇಶದಲ್ಲಿ ನವೆಂಬರ್ 16ನೇ ತಾರೀಕಿನಂದು ಆರಂಭಿಸಲು ಕ್ರಮ ಕೈಗೊಳ್ಳಲಾಗಿದ್ದು, ಈ ಕುರಿತ ಅರುಣಾಚಲ ಪ್ರದೇಶ ಸರ್ಕಾರವು ಅಧಿಕೃತವಾಗಿ ಆದೇಶ ಹೊರಡಿಸಿದೆ ಈ ಆದೇಶದ ಅನ್ವಯ ನವೆಂಬರ್ 16 ರಿಂದ ಹತ್ತನೇ ತರಗತಿ ಹಾಗೂ 12 ನೇ ತರಗತಿ ಶಾಲಾ ಕಾಲೇಜುಗಳನ್ನು ತೆರೆಯಲು ಸರ್ಕಾರ ಸಕಲ ಸಿದ್ಧತೆ ನಡೆಸಿದೆ, ಹಾಗೂ ಶಾಲಾ ಮಕ್ಕಳಿಗೆ 60 ಸಾವಿರ ಖಾದಿ ಬಟ್ಟೆಯ ಮಾಸ್ಕ್ ಖರೀದಿಸಲು ಅನುಮತಿ ನೀಡಲಾಗಿದ್ದು, ಈ ಮಾಸ್ಕ್ ಗಳನ್ನು ಖಾದಿ ಮತ್ತು ಗ್ರಾಮೋದ್ಯೋಗದಿಂದ ತಯಾರಿಸಲಾಗುತ್ತಿದೆ.

## ನವಂಬರ್ 11 : ಡಾ. ಮೌಲಾನಾ ಅಬ್ದುಲ್ ಕಲಾಂ ಅಜಾದ್ ಜನ್ಮದಿನ



ಭಾರತವು ಸ್ವಾತಂತ್ರ್ಯ ಪಡೆದ ನಂತರ ರಚಿಸಲಾದ ಮೊದಲ ಸಚಿವ ಸಂಪುಟದಲ್ಲಿ ಶಿಕ್ಷಣ ಸಚಿವರಾಗಿ ಸೇವೆ ಸಲ್ಲಿಸಿದ ಸ್ವತಂತ್ರ ಭಾರತದ ಪ್ರಥಮ ಶಿಕ್ಷಣ ಸಚಿವರು ಹಾಗೂ ಭಾರತ ರತ್ನ ಗೌರವಕ್ಕೆ ಪಾತ್ರರಾದ ಡಾ.ಮೌಲಾನಾ ಅಬ್ದುಲ್ ಕಲಾಂ ಅಜಾದ್ ಅವರ ಜನ್ಮದಿನವನ್ನು ರಾಷ್ಟ್ರೀಯ ಶಿಕ್ಷಣ ದಿನವನ್ನಾಗಿ ನವೆಂಬರ್ 11ರಂದು ದೇಶದಾದ್ಯಂತ ಆಚರಿಸಲಾಗುತ್ತದೆ. ಇವರು ಶಿಕ್ಷಣ ಕ್ಷೇತ್ರಕ್ಕೆ ನೀಡಿದ ಅಮೋಘ ಕೊಡುಗೆಯನ್ನು ಪರಿಗಣಿಸಿ ಕೇಂದ್ರ ಮಾನವ ಸಂಪನ್ಮೂಲ ಸಚಿವಾಲಯವು 2008 ರಿಂದ ನವೆಂಬರ್ 11 ರಾಷ್ಟ್ರೀಯ ಶಿಕ್ಷಣ ದಿನವನ್ನು ಆಚರಿಸಲು ಕರೆ ನೀಡಿತು.

# 12-11-2020

## 14ನೇ IPL ನಲ್ಲಿ 9ನೇ ತಂಡ ಸೇರ್ಪಡೆ ಸಾಧ್ಯತೆ




ಇತ್ತೀಚಿಗಷ್ಟೇ ಅರಬ್ ರಾಷ್ಟ್ರದಲ್ಲಿ 13ನೇ ಆವೃತ್ತಿ ಐಪಿಎಲ್ ಟೂರ್ನಿಯನ್ನು ಯಶಸ್ವಿಯಾಗಿ ನಡೆಸಿತು, ಹಾಗು ಮುಂಬೈ ಇಂಡಿಯನ್ಸ್ ತಂಡವು ದೆಹಲಿ ತಂಡದ ವಿರುದ್ಧ ಜಯಸಾದಿಸಿ ಟ್ರೋಫಿಯನ್ನು ತನ್ನದಾಗಿಸಿಕೊಂಡಿತು. ಇದೀಗ ಎಲ್ಲರ ಚಿತ್ತ 14 ನೇ ಆವೃತ್ತಿಯತ್ತ ನೆಟ್ಟಿರುವ ಈ ಸಮಯದಲ್ಲಿ 8 ತಂಡಗಳ ಬದಲಾಗಿ 9 ತಂಡಗಳು ಭಾಗವಹಿಸಲಿದ್ದು, 9ನೇ ತಂಡವಾಗಿ ಅಹಮದಾಬಾದ್ ನಗರದ ಫ್ರಾಂಚೈಸಿ ಸೇರ್ಪಡೆಗೊಳ್ಳುವ ಸಾಧ್ಯತೆ ಇರುವದಾಗಿ ತಿಳಿದು ಬಂದಿದೆ. ಈ ತಂಡದ ತವರು ಮೈದಾನವಾಗಿ ನೂತನ ಸ್ಟೇಡಿಯಂ ಸರ್ದಾರ್ ವಲ್ಲಾಭಾಯ್ ಸ್ಟೇಡಿಯಂ ಆಗಿರಲಿದೆ.

## ಅಮೆರಿಕ ರಕ್ಷಣಾ ಸಚಿವಾಲಯಕ್ಕೆ ಭಾರತೀಯ ಮೂಲದ ಕಾಶ್ ಪಟೇಲ್ ನೇಮಕ



ವಾಶಿಂಗ್ಟನ್ : ಇತ್ತೀಚಿಗೆ ಅಮೇರಿಕಾದಲ್ಲಿ ನಡೆದ ಅಧ್ಯಕ್ಷೀಯ ಚುನಾವಣೆಯಲ್ಲಿ ಜೋ ಬಿಡೆನ್ ಅವರು ಅಧ್ಯಕ್ಷರಾಗಿ ಆಯ್ಕೆಯಾಗಿದ್ದು, ಕಮಲ್ ಹ್ಯಾರಿಸ್ ಅವರು ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಇನ್ನು ಅಮೆರಿಕದ ಉಸ್ತುವಾರಿ ರಕ್ಷಣಾ ಕಾರ್ಯದರ್ಶಿಯಾಗಿರುವ ಮಾರ್ಕ್ ಎಸ್ಪರ್‌ರ ಸಿಬ್ಬಂದಿ ಮುಖ್ಯಸ್ಥರಾಗಿ ಭಾರತೀಯ ಮೂಲದ ಅವೆರಿಕನ್ ಆಗಿರುವ ಕಾಶ್ ಪಟೇಲ್ ಇವರನ್ನು ನೇಮಕ ಮಾಡಿರುವುದಾಗಿ ಅಮೆರಿಕಾದ ರಕ್ಷಣಾ ಸಚಿವಾಲಯ ತಿಳಿಸಿದೆ.

## ಭಾರತೀಯ ನೌಕಾಪಡೆ ಸೇರಿದ ಐಎನ್‌ಎಸ್ 'ವಾಗಿರ್' ಸಬ್‌ಮರೀನ್



ಮುಂಬೈ: ಜಲಾಂತರ್ಗಾಮಿ ನೌಕೆ ವಾಗಿರ್ ಇತ್ತೀಚಿಗೆ ಭಾರತೀಯ ನೌಕಾಪಡೆಯಲ್ಲಿ ತನ್ನ ಸೇವೆಗೆ ಸೇರ್ಪಡೆಗೊಂಡಿತು. ಕೇಂದ್ರ ರಕ್ಷಣಾ ಖಾತೆ ರಾಜ್ಯ ಸಚಿವರಾದ ಶ್ರಿಪಾದ್ ನಾಯಕ್ ಅವರು ಈ ಸಬ್ ಮರಿನ್ ನೌಕೆಗೆ ವಿಡಿಯೋ ಕಾನ್ಫರೆನ್ಸ್ ಮೂಲಕ ಮುಂಬೈ ನಗರದ ಮಝುಗಾಂವ್ ಬಂದರಿನಲ್ಲಿ ಚಾಲನೆ ನೀಡಿದರು.

## ದೇಶದಲ್ಲಿ 2 ಕೋಟಿ fastag ಬಳಕೆದಾರರು = NHAI ವರದಿ




ನವದೆಹಲಿ : ಭಾರತದಲ್ಲಿ ಇಲ್ಲಿಯವರೆಗೆ ಒಟ್ಟು 2 ಕೋಟಿಗೂ ಅಧಿಕ Fastag ಬಳಕೆದಾರ ಸಂಖ್ಯೆ 2 ಕೋಟಿಗೂ ಅಧಿಕವಾಗಿದೆ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (NHAI) ವರದಿ ಮಾಡಿದೆ. ಈ ಮೂಲಕ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಟೋಲ್ ಸಂಗ್ರಹವು ಕಳೆದ ಸಾಲಿಗಿಂತ ಹೋಲಿಸಿದರೆ ಗಣನೀಯ ಪ್ರಮಾಣದಲ್ಲಿ ಏರಿಕೆಯಾಗಿರುವುದಾಗಿ ಅದು ತಿಳಿಸಿದೆ.

* ಪ್ರಸ್ತುತ ಫಾಸ್ಟ್ಯಾಗ್ ಒಟ್ಟು ಟೋಲ್ ಸಂಗ್ರಹದ ಶೇ.75ರಷ್ಟು ಕೊಡುಗೆ ನೀಡುತ್ತಿದೆ.
* ರಾಷ್ಟ್ರೀಯ ಹೆದ್ದಾರಿಗಳ ಟೋಲ್ ಪ್ಲಾಜಾಗಳಲ್ಲಿ ವಾಹನಗಳ ಮಾಲಿನ್ಯ ಕಡಿಮೆ ಮಾಡುವ ಸಲುವಾಗಿ ಫಾಸ್ಟ್ಯಾಗ್ ಮೂಲಕ ಡಿಜಿಟಲ್ ಪಾವತಿಗೆ ಉತ್ತೇಜಿಸಲಾಗುತ್ತಿದೆ.

## ಬಹ್ರೇನ್ ದೇಶದ ಪ್ರಧಾನಿ `ಸಲ್ಮಾನ್ ಅಲ್ ಖಲೀಫಾ' ವಿಧಿವಶ



ಮನಾಮ : 1971 ರಲ್ಲಿ ಬಹ್ರೇನ್ ರಾಷ್ಟ್ರವು ಸ್ವಾತಂತ್ರ್ಯ ಪಡೆಯಿತು. ಅಲ್ಲಿಂದ ಈ ರಾಷ್ಟ್ರದ ಪ್ರಧಾನಿಯಾಗಿ ಅಧಿಕಾರ ನಡೆಸಿದ ಹಾಗು ವಿಶ್ವದ ಅತ್ಯಂತ ದೀರ್ಘ ಕಾಲದ ಪ್ರಧಾನಿ ಎನಿಸಿರುವ ಬಹ್ರೇನ್ ಪ್ರಧಾನಿ ಖಲೀಫಾ ಬಿನ್ ಸಲ್ಮಾನ್ ಅಲ್ ಖಲೀಫಾ ಅವರು ತಮ್ಮ 84ನೇ ವಯಸ್ಸಿನಲ್ಲಿ ಅಮೆರಿಕಾದ ಆಸ್ಪತ್ರೆಯೊಂದರಲ್ಲಿ ಕೊನೆಯುಸಿರೆಳೆದರು.

## ಬಹರೇನ್ ಪ್ರಧಾನಿಯಾಗಿ ರಾಜಕುಮಾರಸಲ್ಮಾನ್‌ನೇಮಕ



ಮನಾಮಾ: ಇತ್ತೀಚಿಗೆ ಬಹರೇನ್ ದೇಶದ ಅತಿ ದೀರ್ಘ ಅವಧಿಯವರೆಗೆ ಆಡಳಿತ ನಡೆಸಿದ ಪ್ರಧಾನಿ ಷೇಕ್ ಖಲಿಫಾ ಬಿನ್ ಸಲ್ಮಾನ್ ಅಲ್ ಖಲಿಫಾ ಅವರು ನಿಧನರಾದ ಹಿನ್ನಲೆ, ಇದೀಗ ಬಹರೇನ್ ರಾಷ್ಟ್ರವು ತನ್ನ ಸರ್ಕಾರದ ನೂತನ ಪ್ರಧಾನಿಯಾಗಿ ರಾಜಕುಮಾರ 'ಸಲ್ಮಾನ್ ಬಿನ್ ಅಲ್ ಖಲೀಫಾ' ಅವರನ್ನು ನೇಮಕ ಮಾಡಿ ಬಹರೇನ್ ರಾಜ 'ಹಮದ್ ಬಿನ್ ಖಲೀಫಾ' ಆದೇಶ ಹೊರಡಿಸಿದ್ದಾರೆ.

## ಪ್ರಧಾನಿ ಮೋದಿಯವರಿಂದ JNU ಆವರಣದಲ್ಲಿ ಸ್ವಾಮಿ ವಿವೇಕಾನಂದ ಪ್ರತಿಮೆ ಅನಾವರಣ



ನವದೆಹಲಿ: ಇತ್ತೀಚಿಗೆ ಭಾರತದ ಪ್ರಧಾನಿ ನರೇಂದ್ರ ಮೋದಿಯವರು ದೆಹಲಿಯ ಜವಾಹರಲಾಲ್ ನೆಹರು ವಿಶ್ವ ವಿದ್ಯಾಲಯದ ಆವರಣದಲ್ಲಿ ಸ್ವಾಮಿ ವಿವೇಕಾನಂದರ ಪುತ್ಥಳಿಯನ್ನು ವಿಡಿಯೋ ಕಾನ್ಫರೆನ್ಸ್ ಸಭೆಯ ಮೂಲಕ ಅನಾವರಣ ಗೊಳಿಸಿದರು.

## ಕರ್ನಾಟಕ ಸರ್ಕಾರದಿಂದ ಕೇವಲ 'ಹಸಿರು ಪಟಾಕಿ ಮಾರಾಟ'ಕ್ಕೆ ಅನುಮತಿ



ಬೆಂಗಳೂರು : ಪಟಾಕಿ ನಿಷೇಧದ ಕುರಿತು ಹಲವು ರಾಜ್ಯಗಳು ವಿವಿಧ ನಿರ್ಣಯಗಳನ್ನು ಕೈಗೊಂಡಿದ್ದು, ಇದೀಗ ರಾಜ್ಯ ಸರ್ಕಾರವು ಕೇವಲ 'ಹಸಿರು ಪಟಾಕಿ' ಗಳನ್ನೂ ಮಾರಾಟ ಮಾಡಲು ಅನುಮತಿ ನೀಡಿದೆ. ಈ ಕುರಿತಂತೆ ರಾಜ್ಯ ಸರ್ಕಾರ ಆದೇಶ ಹೊರಡಿಸಿದ್ದು, ಕೇವಲ ಹಸಿರು ಪಟಾಕಿಗಳನ್ನೂ ಮಾರಾಟ ಮಾಡಲು 5 ದಿನಗಳ ಅವಕಾಶ ನೀಡಿ ಆದೇಶಿಸಲಾಗಿದೆ.

# 13-11-2020

## ನವೆಂಬರ್ 19ರಿಂದ ಬೆಂಗಳೂರು ಟೆಕ್ ಸಮ್ಮಿಟ್ ಆರಂಭ



ರಾಜ್ಯ ರಾಜಧಾನಿ ಬೆಂಗಳೂರಿನಲ್ಲಿ ದಿನಾಂಕ ನವೆಂಬರ್ 19ರಿಂದ ಮೂರು ದಿನಗಳವರೆಗೆ 'ಬೆಂಗಳೂರು ತಂತ್ರಜ್ಞಾನ ಶೃಂಗಸಭೆ' (BTS) ನಡೆಯಲಿದೆ. ಈ ಶೃಂಗದಲ್ಲಿ ಸುಮಾರು 25ಕ್ಕೂ ಹೆಚ್ಚು ರಾಷ್ಟ್ರದ ಪ್ರತಿನಿಧಿಗಳು ಭಾಗಿಯಾಗಲಿದ್ದು, ಅನೇಕ ತಂತ್ರಜ್ಞಾನ ಕ್ಷೇತ್ರದ ಒಪ್ಪಂದಗಳು ಏರ್ಪಡುವ ಸಾಧ್ಯತೆಯಿದ್ದು, ಈಗಾಗಲೇ ಕೃಷಿ, ಸಂಶೋಧನೆ, ಅಭಿವೃದ್ಧಿ, ಸ್ಟಾರ್ಟ್ ಅಪ್'ಗಳ ಸ್ಥಾಪನೆ ಪಾಲುದಾರಿಕೆ ಸೇರಿ ಏಳು ವಿವಿಧ ಒಪ್ಪಂದಗಳು ಸಹಿಗೂ ಸಿದ್ದವಾಗಿರುವುದಾಗಿ ರಾಜ್ಯದ ಉಪ ಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವತ್ಥನಾರಾಯಣ ತಿಳಿಸಿದ್ದಾರೆ.
* ಈ ಶೃಂಗ ಸಭೆಯಲ್ಲಿ ಆಸ್ಟ್ರೇಲಿಯಾ, ಫ್ರಾನ್ಸ್, ಜರ್ಮನಿ, ಇಸ್ರೇಲ್, ನೆದರ್‌ಲ್ಯಾಂಡ್, ಸ್ವಿಟ್ಜರ್ ಲೆಂಡ್ ಮತ್ತು ಇಂಗ್ಲೆಂಡ್ ಪಾಲುದಾರ ದೇಶಗಳಾಗಿವೆ.

## ಪತ್ರಕರ್ತ ಸಾಹಿತಿ ರವಿ ಬೆಳಗೆರೆ ನಿಧನ



ರಾಜ್ಯದ ಹಿರಿಯ ಪತ್ರಕರ್ತ, ನಟ, ಬರಹಗಾರ, ನಿರೂಪಕ ರವಿ ಬೆಳಗೆರೆಯವರು ದಿನಾಂಕ ನವೆಂಬರ್ 13 ರಂದು ತಮ್ಮ 62 ನೇ ವಯಸ್ಸಿನಲ್ಲಿ ಕೊನೆಯುಸಿರೆಳೆದರು. ಬೆಳಗೆರೆಯವರು ಹಾಯ್ ಬೆಂಗಳೂರ್ ವಾರಪತ್ರಿಕೆ, ಮತ್ತು ಓ ಮನಸೇ ಪಾಕ್ಷಿಕದ ಸಂಪಾದಕರಾಗಿದ್ದರು. ಬೆಂಗಳೂರಿನಲ್ಲಿ ಪ್ರಾರ್ಥನಾ ಹೆಸರಿನ ಶಾಲೆ ನಡೆಸುತ್ತಿದ್ದರು. ಸುಮಾರು ಐವತ್ತಕ್ಕೂ ಹೆಚ್ಚು ಪುಸ್ತಕಗಳನ್ನು ಬರೆದಿದ್ದಾರೆ. ರವಿ ಬೆಳಗೆರೆಯವರು ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಕೋಟಾ ಶಿವರಾಮ ಕಾರಂತ ಹುಟ್ಟೂರ ಪ್ರಶಸ್ತಿ, ಅನುವಾದ ಅಕಾಡೆಮಿ ಪ್ರಶಸ್ತಿ ಸೇರಿ ಹಲವು ಪ್ರಶಸ್ತಿಗಳು ಭಾಜನರಾಗಿದ್ದಾರೆ.


# 15-11-2020

## ಭಾರತ ಹಾಗು ರಷ್ಯಾ ನಿರ್ಮಿತ ಬ್ರಹ್ಮೋಸ್ ಖರೀದಿಗೆ ಫಿಲಿಪ್ಪೀನ್ಸ್ ಆಸಕ್ತಿ




ನವದೆಹಲಿ: ಭಾರತ ಮತ್ತು ರಷ್ಯಾ ರಾಷ್ಟ್ರಗಳ ಸಹಭಾಗಿತ್ವದಲ್ಲಿ ತಯಾರಿಸಲಾದ ಬ್ರಹ್ಮೋಸ್ ಕ್ಷಿಪಣಿಗಳನ್ನ ಖರೀದಿಸಲು ದ್ವೀಪರಾಷ್ಟ್ರ ಫಿಲಿಪ್ಪೀನ್ಸ್ ಒಲವು ತೋರಿಸಿದೆ. ಹಾಗು ಈ ಕುರಿತು ಫಿಲಿಪ್ಪೀನ್ ಅಧ್ಯಕ್ಷ ರೊಡ್ರಿಗೋ ಡ್ಯುಟರ್ಟೆ ಅವರು ಭಾರತದ ಪ್ರಧಾನಿ ನರೇಂದ್ರ ಮೋದಿಯವರೊಂದಿಗೆ ಶೀಘ್ರದಲ್ಲೇ ಒಪ್ಪಂದ ಮಾಡಿಕೊಳ್ಳುವ ಸಾಧ್ಯತೆ ಇದೆ. ಒಂದು ವೇಳೆ ಈ ಒಪ್ಪಂದ ಸಫಲವಾದರೆ ಬ್ರಹ್ಮೋಸ್ ಕ್ಷಿಪಣಿಗಳನ್ನು ಖರೀದಿಸಿದ ಮೊದಲ ರಾಷ್ಟ್ರವಾಗಿ ಫಿಲಿಪ್ಪೀನ್ಸ್ ಹೊರಹೊಮ್ಮಲಿದೆ.

## ಗುಜರಾತ್, ರಾಜಸ್ಥಾನದಲ್ಲಿ ಆಯುರ್ವೇದ ಕೇಂದ್ರ ಉದ್ಘಾಟಿಸಿದ ಮೋದಿ




ನವದೆಹಲಿ: 2020 ರ ನವೆಂಬರ್ 13ರಂದು ಆಯುರ್ವೇದ ದಿನದಂದು ಭಾರತದ ಪ್ರಧಾನಿ ನರೇಂದ್ರ ಮೋದಿಯವರು ಗುಜರಾತ್ ಮತ್ತು ರಾಜಸ್ಥಾನ ರಾಜ್ಯಗಳಲ್ಲಿ ಆಯುರ್ವೇದ ಇನ್ಸ್ಟ್ಯೂಷನ್ ಗಳನ್ನು ಉದ್ಘಾಟಿಸಿದರು.
* ಗುಜರಾತ್ ನ ಜಾಮ್ ನಗರದಲ್ಲಿ ಇನ್ಸ್ ಟಿಟ್ಯೂಟ್ ಆಫ್ ಟೀಚಿಂಗ್ ಆಯಂಡ್ ರಿಸರ್ಚ್ ಇನ್ ಆಯುರ್ವೇದ(ಐಟಿಆರ್ ಎ) ಉದ್ಘಾಟಿಸಲಾಯಿತು.
* ರಾಜಸ್ಥಾನದ ಜೈಪುರದಲ್ಲಿ ನ್ಯಾಷನಲ್ ಇನ್ಸ್ ಟಿಟ್ಯೂಟ್ ಆಫ್ ಆಯುರ್ವೇದ(ಎನ್ ಐಎ) ಕೇಂದ್ರವನ್ನು ವಿಡಿಯೋ ಕಾನ್ಫರೆನ್ಸ್ ಕಾರ್ಯಕ್ರಮದ ಮೂಲಕ ಮೋದಿಯವರು ಚಾಲನೆ ನೀಡಿದರು.
* ಈ ಆಯುರ್ವೇದ ಕೇಂದ್ರಗಳ ಮೂಲಕ 21ನೇ ಶತಮಾನದಲ್ಲಿ ಭಾರತವು ವಿಶ್ವಮಟ್ಟದಲ್ಲಿ ಗುರುತಿಸಿಕೊಳ್ಳುವ ಸಾಧ್ಯತೆಯನ್ನು ನಿರೀಕ್ಷಿಸಲಾಗಿದೆ.
* 2016 ರಿಂದ ಆರಂಭಗೊಂಡಂತೆ ಧನ್ವಂತರಿ ಜಯಂತಿಯನ್ನು ಆಯುರ್ವೇದ ದಿನವನ್ನಾಗಿ ಆಚರಿಸಲಾಗುತ್ತಿದೆ.

## ಹಿರಿಯ ಕವಿ `ಡಾ.ವಿ.ಸಿ. ಐರಸಂಗ' ಅಸ್ತಂಗತ



ಧಾರವಾಡ : ಧಾರಾವಾಡ ಜಿಲ್ಲಾ ಸಾಹಿತ್ಯ ಸಮ್ಮೇಳನ ಅಧ್ಯಕ್ಷರಾಗಿದ್ದ ಹಿರಿಯ ಕವಿ ಡಾ. ವಿ.ಸಿ. ಐರಸಂಗ ಇವರು ತಮ್ಮ 91 ನೇ ಇಳಿ ವಯಸ್ಸಿನಲ್ಲಿ ಅನಾರೋಗ್ಯದ ಹಿನ್ನೆಲೆಯಲ್ಲಿ ನಿಧನರಾದರು. ಕವಿ ಐರಸಂಗ ಅವರು ಅತ್ಯಂತ ಸರಳ ಜೀವಿಯಾಗಿದ್ದು, ನೂರಾರು ಅಶುಕವಿತೆಗಳನ್ನು ರಚಿಸಿ ಅವುಗಳನ್ನು ಪ್ಯಾಕೆಟ್ ಪುಸ್ತಕ ರೂಪದಲ್ಲಿ ಮುದ್ರಿಸಿ ತಮ್ಮ ಸೈಕಲ್ ಮೇಲಿಟ್ಟುಕೊಂಡು ಮಾರುತ್ತಿದ್ದರು.

* ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯ ಇವರಿಗೆ ಗೌರವ ಡಾಕ್ಟರೇಟ್ ನೀಡಿ ಗೌರವಿಸಿದೆ.
* ಇವರು ಧಾರಾವಾಡದಲ್ಲಿ ನಡೆದ ಜಿಲ್ಲಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

## DRDO ನಿರ್ಮಿತ QRSAM ಕ್ಷಿಪಣಿ ಪ್ರಯೋಗ ಯಶಸ್ವಿ



ಬಾಲಸೂರ್: ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ) ಯು ಸ್ವದೇಶೀ ತಂತ್ರಜ್ಞಾನ ಬಳಸಿಕೊಂಡು ನಿರ್ಮಿಸಿದ ಕ್ವಿಕ್ ರಿಯಾಕ್ಷನ್ ಸರ್ಫೇಸ್ ಟು ಏರ್(QRSAM) ಕ್ಷಿಪಣಿಯನ್ನು ಇದೆ ದಿನಾಂಕ 13 ನವೆಂಬರ್ 2020 ರಂದು ಒಡಿಶಾ ಕರಾವಳಿಯ ಚಂಡೀಪುರ ಬಳಿ ಇರುವ ಇಂಟಿಗ್ರೇಟೆಡ್ ಟೆಸ್ಟ್ ರೇಂಜ್ ಪ್ರದೇಶದಲ್ಲಿ ಪರೀಕ್ಷಾತ್ರ ಉಡಾವಣೆಯಲ್ಲಿ ಯಶಸ್ವಿಯಾಗಿರುವುದಾಗಿ ಭಾರತ ರಕ್ಷಣಾ ಸಚಿವಾಲಯ ಹೇಳಿದೆ.

## ಅಮೆರಿಕ ಅಧ್ಯಕ್ಷೀಯ ಚುನಾವಣೆ ಅಂತಿಮ ಫಲಿತಾಂಶ ಪ್ರಕಟ



ವಾಷಿಂಗ್ಟನ್ : ಇಡೀ ವಿಶ್ವದ ಗಮನ ಸೆಳೆದು ತೀವ್ರ ಕುತೂಹಲ ಕೆರಳಿಸಿದ ಅಮೆರಿಕ ಅಧ್ಯಕ್ಷೀಯ ಚುನಾವಣೆಯ ಪೂರ್ಣ ಫಲಿತಾಂಶವು ಪ್ರಕಟವಾಗಿದ್ದು, ಒಟ್ಟು 538 ಕಾಲೇಜ್‌ಎಲೆಕ್ಟೊರಲ್ (ಪ್ರಾತಿನಿಧಿಕ) ಮತ ಎಣಿಕೆಯನ್ನು ಅಧಿಕೃತವಾಗಿ ಪೂರ್ಣಗೊಳಿಸಲಾಗಿದ್ದು, ಡೆಮಾಕ್ರೆಟಿಕ್ ಪಕ್ಷದ ನಾಯಕ ಜೋಬಿಡೆನ್ ನಿರೀಕ್ಷೆಯಂತೆ 306 ಮತಗಳ ಭರ್ಜರಿ ಗೆಲುವು ಸಾಧಿಸಿದ್ದಾರೆ. ಇನ್ನು ಅಮೆರಿಕ ಅಧ್ಯಕ್ಷ ಮತ್ತು ರಿಪಬ್ಲಿಕನ್ ಅಭ್ಯರ್ಥಿ ಡೊನಾಲ್ಡ್ ಟ್ರಂಪ್ 232 ಮತಗಳನ್ನು ಗಳಿಸಿ ಸೋಲೊಪ್ಪಿಕೊಂಡಿದ್ದಾರೆ.
* ಅಮೆರಿಕಾದ ಅಧ್ಯಕ್ಷರಾಗಲು ಒಟ್ಟು 270 ಮತಗಳ ಅಗತ್ಯವಿತ್ತು.


## ನವೆಂಬರ್ 14 : ಮೊದಲ ಪ್ರಧಾನಿ ಚಾಚಾ ನೆಹರುರವರ 131ನೇ ಜನ್ಮದಿನ



ನವದೆಹಲಿ: ದೇಶದ ಮೊದಲ ಪ್ರಧಾನಮಂತ್ರಿ ಜವಾಹರ್ ಲಾಲ್ ನೆಹರು ಅವರು 131ನೇ ಜನ್ಮದಿನ ಹಿನ್ನಲೆಯಲ್ಲಿ ದೇಶ್ಯಾದ್ಯಂತ ಇವರಿಗೆ ಗೌರವ ಸಮರ್ಪಿಸಲಾಯಿತು. ಇವರ ಮಕ್ಕಳ ಮೇಲಿನ ಅತೀವ ಪ್ರೀತಿಯ ಕಾರಣ ಇವರ ಜನ್ಮ ದಿನವನ್ನು 'ಮಕ್ಕಳ ದಿನಾಚರಣೆ'ಯಾಗಿ ದೇಶ್ಯಾದ್ಯಂತ ಆಚರಿಸಲಾಗುತ್ತದೆ. ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಪ್ರಮುಖ ಪಾತ್ರವಹಿಸಿ, ಆಗಸ್ಟ್ 15, 1947 ರಂದು ದೇಶದ ಮೊದಲ ಪ್ರಧಾನಮಂತ್ರಿ ಹುದ್ದೆಗೇರಿದ್ದ ಜವಾಹರಲಾಲ್ ನೆಹರೂರವರು 1889ರ ನವೆಂಬರ್ 14 ರಂದು ಉತ್ತರ ಪ್ರದೇಶದ ಪ್ರಯಾಗ್ ರಾಜ್'ನಲ್ಲಿ ಜನಿಸಿದ್ದರು. ಹಾಗೂ ಮೇ 27, 1964 ರಂದು ವಿಧಿವಶರಾಗಿದ್ದರು.

# 16-11-2020

## ವಿಶ್ವದ ಮಹಾನ್ ವಿಜ್ಞಾನಿ ಪಟ್ಟಿಯಲ್ಲಿ ದೇಶದ 2 ಐಐಟಿಯ 36 ವಿಜ್ಞಾನಿಗಳಿಗೆ ಸ್ಥಾನ



ವಾಷಿಂಗ್ಟನ್: ಇತ್ತೀಚಿಗೆ ಅಮೆರಿಕದ ಸ್ಟ್ಯಾನ್‌ಫೋರ್ಡ್ ವಿಶ್ವವಿದ್ಯಾಲಯವು ವಿಶ್ವದ ಅಗ್ರ ವಿಜ್ಞಾನಿಗಳ ಪಟ್ಟಿಯನ್ನು ತಯಾರಿಸಿದ್ದು, ಈ ಪಟ್ಟಿಯಲ್ಲಿ ದೇಶದ 2 ಐಐಟಿಗಳಿಗೆ ಸಂಬಂಧಿಸಿದ 36 ವಿಜ್ಞಾನಿಗಳು ಸ್ಥಾನಪಡೆದಿದ್ದಾರೆ. ಇವುಗಳಲ್ಲಿ ಗುವಾಹಟಿ ಐಐಟಿಯ 22 ಸಂಶೋಧಕರು, ಬನಾರಸ್ ಹಿಂದು ವಿವಿಯ 14 ಪ್ರೊಫೆಸರ್‌ಗಳು ಸ್ಥಾನ ಪಡೆದಿದ್ದಾರೆ.

## ಗಿನ್ನಿಸ್ ವಿಶ್ವ ದಾಖಲೆಗೆ ಸೇರಿಂದ ಪ್ರಪಂಚದ ಅತಿದೊಡ್ಡ ಕಾರಂಜಿ



ದುಬೈ : ದುಬೈನ ಜಗತ್ಪ್ರಸಿದ್ಧ ವಾಟರ್‌ಫ್ರಂಟ್ ಪಾಮ್ ಜುಮೈರಾ ಪ್ರದೇಶದ ದಿ ಪಾಯಿಂಟ್‌ನಲ್ಲಿ ಪ್ರಪಂಚದ ಅತಿದೊಡ್ಡ ಕಾರಂಜಿಯನ್ನು ಸ್ಥಾಪಿಸಲಾಗಿದ್ದು, ಈ ವರ್ಣರಂಜಿತ ಕಾರಂಜಿಯು ಪ್ರಪಂಚದ ಅತಿ ದೊಡ್ಡ ವಾಟರ್ ಫೌಂಟನ್ ಎಂಬ ಗಿನ್ನಿಸ್ ವಿಶ್ವ ದಾಖಲೆ ಬರೆದಿದೆ.

* ಈ ವಾಟರ್ ಪೌಂಟೇನ್ ಕಾರಂಜಿಯು ಸಮುದ್ರದ ನೀರಿನಲ್ಲಿ 14,000 ಚದರ ಅಡಿಗಳಷ್ಟು ವಿಸ್ತಾರದಲ್ಲಿ ನಿರ್ಮಿಸಲಾಗಿದೆ.
* ಒಟ್ಟು 105 ಮೀಟರ್‌ಗಳಷ್ಟು ಎತ್ತರಕ್ಕೆ ಬಣ್ಣ ಬಣ್ಣದ ನೀರನ್ನು ಈ ಕಾರಂಜಿಯು ಚಿಮ್ಮಿಸುತ್ತದೆ.
* ದಕ್ಷಿಣ ಕೊರಿಯಾದ ಬಾನ್ಪೋ ಮೂನ್‌ಲೈಟ್ ರೈನ್‌ಬೋ ಫೌಂಟನ್ 2,519 ಚದರ ಮೀಟರ್‌ಗಳಷ್ಟು ವಿಸ್ತಾರವಾಗಿದ್ದು, ಇಲ್ಲಿಯವರೆಗಿನ ದೊಡ್ಡ ಕಾರಂಜಿ ಎನಿಸಿತ್ತು.
* ಈ ಕಾರಂಜಿಗೆ ಒಟ್ಟು 3,000ಕ್ಕೂ ಅಧಿಕ ಎಲ್‌ಇಡಿ ದೀಪಗಳನ್ನು ಅಳವಡಿಸಲಾಗಿದೆ.

## ಫೈನಾನ್ಸ್‌ಪಿಯರ್ ಸಂಸ್ಥೆಯ ನೂತನ ರಾಯಭಾರಿಯಾಗಿ ರೋಹಿತ್ ಶರ್ಮಾ ಆಯ್ಕೆ



ಮುಂಬೈ: ಶಿಕ್ಷಣ ಶುಲ್ಕಕ್ಕೆ ಹಣಕಾಸು ನೆರವನ್ನು ಒದಗಿಸುವ ಸಂಸ್ಥೆಯಾದ ಫೈನಾನ್ಸ್‌ಪಿಯರ್ ಕಂಪನಿಗೆ ಭಾರತದ ಸ್ಟಾರ್ ಕ್ರಿಕೆಟ್ ಆಟಗಾರ ರೋಹಿತ್ ಶರ್ಮಾ ಅವರು ಪ್ರಚಾರ ರಾಯಭಾರಿಯಾಗಿ ಆಯ್ಕೆಯಾಗಿದ್ದಾರೆ.

* ಹಣಕಾಸು ಸೇವೆ ಜೊತೆಗೆ ವಿಮಾ ರಕ್ಷಣೆ ಹಾಗೂ ಆನ್‌ಲೈನ್ ಕಲಿಕೆಗೆ ವೇದಿಕೆಯನ್ನೂ ಫೈನಾನ್ಸ್ ಪಿಯರ್ ಸಂಸ್ಥೆ ಒದಗಿಸುತ್ತಿದೆ.

## ಸೋಫಿಯಾ ಓಪನ್ ಟೆನಿಸ್ :ಜೆನ್ನಿಕ್ ಸಿನ್ನರ್ ಚಾಂಪಿಯನ್



ಸೋಫಿಯಾ : ಇತ್ತೀಚಿಗೆ ಬಲ್ಗೇರಿಯಾದಲ್ಲಿ ನಡೆದ "ಸೋಫಿಯಾ ಓಪನ್' ಎಟಿಪಿ ಟೆನಿಸ್ ಕೂಟದಲ್ಲಿ ಇಟಲಿಯ 19 ವರ್ಷದ ಜೆನ್ನಿಕ್ ಸಿನ್ನರ್ ಅವರು ಚಾಂಪಿಯನ್ ಆಗಿದ್ದಾರೆ. ಈ ಮೂಲಕ ಕಳೆದ 12 ವರ್ಷಗಳ ಎಟಿಪಿ ಇತಿಹಾಸದಲ್ಲೇ ಪ್ರಶಸ್ತಿ ಜಯಿಸಿದ ಅತಿ ಕಡಿಮೆ ವಯಸ್ಸಿನ ಆಟಗಾರ ಎನಿಸಿದ್ದಾರೆ. ಅಂತಿಮ ಪ್ರಶಸ್ತಿ ಸುತ್ತಿನಲ್ಲಿ ಕೆನಡಾದ ವಾಸೆಕ್ ಪಾಸ್ಪಿಸಿಲ್ ವಿರುದ್ಧ 6 4, 3 6, 7 6 ಅಂತರದಲ್ಲಿ ಗೆಲುವು ದಾಖಲಿಸಿದರು.

## ಹರಿಯಾಣದ ಮೊದಲ ಮಹಿಳಾ ಸಂಸದೆ ಚಂದ್ರವತಿ ದೇವಿ ನಿಧನ



ಚಂಡೀಗಡ : ಹಲವು ಪ್ರಥಮಗಳಿಂದ ಹೆಸರಾಗಿದ್ದ ಹರಿಯಾಣದ ಮಾಜಿ ಸಂಸದೆ ಚಂದ್ರವತಿ ದೇವಿಯವರು ತಮ್ಮ 92 ನೇ ವಯಸ್ಸಿನಲ್ಲಿ ನಿಧನರಾದರು. ಪ್ರಥಮಗಳು :

* ಹರಿಯಾಣದ ಮೊದಲ ಮಹಿಳಾ ಸಂಸದೆ
* ಹರಿಯಾಣದ ಮೊದಲ ಶಾಸಕಿ
* ಪುದುಚೆರಿಯ ಮಾಜಿ ಲೆಫ್ಟಿನೆಂಟ್ ಗವರ್ನರ್
* ಹರಿಯಾಣ ಭಾಗದ ಮೊದಲ ಮಹಿಳಾ ವಕೀಲರು

# 17-11-2020

## ಪ್ರಧಾನಿ ಮೋದಿಯಿಂದ ಯೋಧರ ಜತೆ ದೀಪಾವಳಿ ಆಚರಣೆ



ನವದೆಹಲಿ: ನರೇಂದ್ರ ಮೋದಿ ಅವರು ಪ್ರಧಾನಿ ಹುದ್ದೆಗೆ ಏರಿದ ವರ್ಷದಿಂದ ಆರಂಭವಾಗಿ ಪ್ರತಿ ವರ್ಷದಂತೆ ಈ ವರ್ಷವೂ ಕೂಡ ಭಾರತೀಯ ಯೋಧರೊಂದಿಗೆ ದೀಪಾವಳಿ ಆಚರಿಸುವ ಸಂಪ್ರದಾಯವನ್ನು ಮೋದಿಯವರು ಮುಂದುವರೆಸಿದ್ದು, ಈ ಬಾರಿ ರಾಜಸ್ಥಾನದ ಜೈಸಲ್ಮೇರ್ ನಲ್ಲಿ ನವೆಂಬರ್ 14, 2020 ರಂದು ಯೋಧರ ಜತೆ ದೀಪಾವಳಿ ಆಚರಣೆಯಲ್ಲಿ ಭಾಗಿಯಾಗಿದ್ದರು. ಈ ಮೊದಲು ಮೋದಿಯವರು ದೀಪಾವಳಿ ಆಚರಿಸಿದ ಪ್ರದೇಶಗಳು :

* 2014ರಲ್ಲಿ ಜಗತ್ತಿನ ಅತೀ ದೊಡ್ಡ ಯುದ್ಧ ಭೂಮಿ ಎಂದೇ ಹೆಸರಾಗಿರುವ ಸಿಯಾಚಿನ್ ಗ್ಲೇಸಿಯರ್ಸಿ
* 2015ರಲ್ಲಿ ಪಂಜಾಬ್ ಗಡಿ
* 2016ರಲ್ಲಿ ಉತ್ತರಾಖಂಡ್ ನ ಚಮೋಲಿ ಜಿಲ್ಲೆಯಲ್ಲಿ ಭಾರತ ಚೀನಾ ಗಡಿ
* 2017ರಲ್ಲಿ ಜಮ್ಮು ಕಾಶ್ಮೀರದ ಗ್ಯುರೇಜ್ ಸೆಕ್ಟರ್
* 2018ರಲ್ಲಿ ಉತ್ತರಾಖಂಡದಲ್ಲಿರುವ ಚೀನಾ ಗಡಿಭಾಗ
* 2019ರಲ್ಲಿ ಜಮ್ಮು ಕಾಶ್ಮೀರದ ರಜೌರಿ ಜಿಲ್ಲೆಯ ಗಡಿಭಾಗ

## ಶೀಘ್ರದಲ್ಲೇ ಬ್ರಹ್ಮೋಸ್ ಸೂಪರ್ ಸಾನಿಕ್ ಕ್ರೂಸ್ ಕ್ಷಿಪಣಿ ಉಡಾವಣೆ




ನವದೆಹಲಿ : ಭಾರತ ಹಾಗು ರಷ್ಯಾ ರಾಷ್ಟ್ರಗಳು ಜಂಟಿ ತಂತ್ರಜ್ಞಾನದೊಂದಿಗೆ ನಿರ್ಮಿಸಲಾದ ಬ್ರಹ್ಮೋಸ್ ಕ್ಷಿಪಣಿಯ ಪರಿಷ್ಕೃತ ಆವೃತ್ತಿಯಾದ ಬ್ರಹ್ಮೋಸ್ ಸೂಪರ್‌ಸಾನಿಕ್ ಕ್ರೂಸ್ ಕ್ಷಿಪಣಿಯ ಹಲವು ಉಡಾವಣೆಗಳನ್ನು ಶೀಘ್ರದಲ್ಲೇ ಭಾರತೀಯ ಸೇನೆಯು ಕೈಗೊಳ್ಳುವುದಾಗಿ ಮೂಲಗಳು ಖಚಿತ ಪಡಿಸಿವೆ. ಭಾರತೀಯ DRDO ಸಂಸ್ಥೆ ಅಭಿವೃದ್ಧಿಪಡಿಸಿದ ಸುಧಾರಿತ ಬ್ರಹ್ಮೋಸ್ ಸೂಪರ್‌ಸಾನಿಕ್ ಕ್ರೂಸ್ ಕ್ಷಿಪಣಿಗಳು ಪ್ರಸ್ತುತ ಜಗತ್ತಿನ ಅತಿವೇಗದ ಕಾರ್ಯಾಚರಣೆ ವ್ಯವಸ್ಥೆಯನ್ನು ಹೊಂದಿದ್ದು, ಕ್ಷಿಪಣಿ ವ್ಯಾಪ್ತಿಯನ್ನು ಡಿಆರ್‌ಡಿಒ ಇತ್ತೀಚೆಗಷ್ಟೇ 298 ಕಿ.ಮೀ.ನಿಂದ 450 ಕಿ.ಮೀ.ಗೆ ಹೆಚ್ಚಿಸಿದೆ.

## ಏಷ್ಯಾದ 15 ರಾಷ್ಟ್ರಗಳು ಜಗತ್ತಿನ ಅತಿ ದೊಡ್ಡ ವ್ಯಾಪಾರ ಒಪ್ಪಂದ




ಸಿಂಗಾಪುರ : ಚೀನಾ ಸೇರಿ ಏಷ್ಯಾದ 15 ರಾಷ್ಟ್ರಗಳು ಜಗತ್ತಿನ ಅತಿ ದೊಡ್ಡ ವ್ಯಾಪಾರ ಒಪ್ಪಂದವಾದ 'ಪ್ರಾದೇಶಿಕ ಸಮಗ್ರ ಆರ್ಥಿಕ ಸಹಭಾಗಿತ್ವ'ಕ್ಕೆ ಇತ್ತೀಚಿಗೆ ಸಹಿ ಹಾಕಿದ್ದು, ಭಾರತವು ಈ ಒಪ್ಪಂದದಿಂದ ಹೊರಗುಳಿದಿದೆ.

* ಇತ್ತೀಚಿಗೆ ಏರ್ಪಡಿಸಲಾದ ಆಗ್ನೇಯ ಏಷ್ಯಾದ ನಾಯಕರು ಹಾಗೂ ಅವರ ಪ್ರಾದೇಶಿಕ ಪಾಲುದಾರರ ವಾರ್ಷಿಕ ಶೃಂಗಸಭೆಯಲ್ಲಿ ಸತತ ಎಂಟು ವರ್ಷಗಳ ಮಾತುಕತೆಯಲಿದ್ದ ಈ ಒಪ್ಪಂದಕ್ಕೆ 15 ರಾಷ್ಟ್ರಗಳ ಮಧ್ಯೆ ಸಹಿ ಹಾಕಲಾಯಿತು.
* ಇಂಡೊನೇಷ್ಯಾ, ಬ್ರೂನಿ, ವಿಯೆಟ್ನಾಂ, ಲಾವೋಸ್, ಮಲೇಷ್ಯಾ, ಫಿಲಿಪ್ಪೀನ್ಸ್, ಸಿಂಗಪುರ, ಥಾಯ್ಲೆಂಡ್, ಮ್ಯಾನ್ಮಾರ್ ಹಾಗೂ ಕಾಂಬೋಡಿಯಾ ಒಪ್ಪಂದಕ್ಕೆ ಸಹಿ ಹಾಕಿದ್ದು. ಚೀನಾ, ಜಪಾನ್, ದಕ್ಷಿಣ ಕೊರಿಯಾ, ನ್ಯೂಜಿಲೆಂಡ್ ಮತ್ತು ಆಸ್ಟ್ರೇಲಿಯಾ ರಾಷ್ಟ್ರಗಳು ಈ ಒಪ್ಪಂದದ ಅಡಿಯಲ್ಲಿ ಬರಲಿವೆ.

## ಬಿಹಾರದ 37ನೇ ಮುಖ್ಯಮಂತ್ರಿ ಆಗಿ ನಿತೀಶ್ ಕುಮಾರ್ ಪ್ರಮಾಣವಚನ ಸ್ವೀಕಾರ



ಪಟ್ನಾ : ಇತ್ತೀಚಿಗೆ ನಡೆದ ಬಿಹಾರದ 243 ವಿಧಾನಸಭಾ ಕ್ಷೇತ್ರಗಳ ಚುನಾವಣಾ ಫಲಿತಾಂಶದ ನಂತರ ಬಹುಮತಕ್ಕೆ ಅಗತ್ಯವಿದ್ದ 122 ಸ್ಥಾನಗಳ ಪೈಕಿ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಒಕ್ಕೂಟ(ಎನ್

ಡಿಎ) ಒಟ್ಟು 125 ಕ್ಷೇತ್ರಗಳಲ್ಲಿ ವಿಜಯ ಸಾಧಿಸಿದ್ದು, ಈ ಪೈಕಿ ಬಿಜೆಪಿ 74, ಜೆಡಿಯು 43, ವಿಐಪಿ4ಹಾಗೂಹಿಂದೂಸ್ಥಾನ್ ಮೋರ್ಚಾ ಪಕ್ಷವು 4 ಸ್ಥಾನಗಳಲ್ಲಿ ವಿಜಯ ಸಾಧಿಸಿತ್ತು. ಎನ್ ಡಿಎ ಮೈತ್ರಿಕೂಟದ ಶಾಸಕರ ಸಭೆಯಲ್ಲಿ ನಿತೀಶ್ ಕುಮಾರ್ ಅವರನ್ನು ರಾಜ್ಯದ ಮುಖ್ಯಮಂತ್ರಿ ಆಗಿ ಸರ್ವಾನುಮತದಿಂದ ಆಯ್ಕೆ ಮಾಡಲಾಗಿತ್ತು, ಅದರಂತೆ ಸತತ ನಾಲ್ಕನೆಯ ಅವಧಿಗೆ ಬಿಹಾರ ಮುಖ್ಯಮಂತ್ರಿಯಾಗಿ ಜೆಡಿಯು ಮುಖ್ಯಸ್ಥ ನಿತೀಶ್ ಕುಮಾರ್ ಅವರು ದಿನಾಂಕ 16 ನವೆಂಬರ್ ಸೋಮವಾರದಂದು ಪ್ರಮಾಣವಚನ ಸ್ವೀಕರಿಸಿದರು. 2000ನೇ ವರ್ಷದಿಂದ ಇಲ್ಲಿಯವರೆಗೂ ನಿತೀಶ್ ಕುಮಾರ್ ಒಟ್ಟು ಏಳು ಬಾರಿ ಮುಖ್ಯಮಂತ್ರಿ ಹುದ್ದೆಗೇರಿದಂತಾಯಿತು.

* ಬಿಹಾರದ 37ನೇ ಮುಖ್ಯಮಂತ್ರಿಯಾಗಿ ನಿತೀಶ್ ಅವರು ಪ್ರಮಾಣ ವಚನ ಸ್ವೀಕರಿಸಿದರು.

## ಕೊಡಗಿನಲ್ಲಿ ಇದೆ ನವೆಂಬರ್ 30ಕ್ಕೆ "ಹುತ್ತರಿ ಹಬ್ಬ"



ಇದೆ ನವೆಂಬರ್ 30ರ ರಾತ್ರಿ ರೋಹಿಣಿ ನಕ್ಷತ್ರದಲ್ಲಿ ಕೊಡವ ಜನರಿಂದ ಹುತ್ತರಿ ಹಬ್ಬವನ್ನು ಆಚರಿಸಲಿದ್ದಾರೆ. ಕೊಡವ ಭಾಷೆಯಲ್ಲಿ 'ಪುದಿಯ ಅರಿ' ಎಂದರೆ ಹೊಸ ಅಕ್ಕಿ ಎಂದರ್ಥ. ಪುದಿಯ ಅರಿ ಎನ್ನುವುದನ್ನು ಕನ್ನಡದಲ್ಲಿ ಹುತ್ತರಿ ಎಂದಾಗುತ್ತದೆ. ಈ ಹಬ್ಬದಲ್ಲಿ ವಿಶೇಷವಾಗಿ ಹೊಸ ಅಕ್ಕಿಯನ್ನು ಅಂದರೆ ಭತ್ತದ ಕದಿರನ್ನು ಮನೆಗೆ ತರುವ ಸುಗ್ಗಿಯಾಗಿದೆ.

## ರಿಸರ್ವ್ ಬ್ಯಾಂಕ್ ಇನೊವೇಷನ್ ಹಬ್ ಅಧ್ಯಕ್ಷರಾಗಿ ಕ್ರಿಸ್ ಗೋಪಾಲಕೃಷ್ಣನ್ ಆಯ್ಕೆ



ಕೇಂದ್ರ ಸರ್ಕಾರವು ಕಳೆದ ಆಗಸ್ಟ್ ನಲ್ಲಿ ರಿಸರ್ವ್ ಬ್ಯಾಂಕ್ ಇನೊವೇಷನ್ ಹಬ್ (RBIH) ಸ್ಥಾಪಿಸುವುದಾಗಿ ಘೋಷಿಸಿತ್ತು, ಈ ಹಿನ್ನಲೆ ಇನ್ಫೋಸಿಸ್ ಸಹಸಂಸ್ಥಾಪಕರಾದ ಕ್ರಿಸ್ ಗೋಪಾಲಕೃಷ್ಣನ್ ಅವರನ್ನು ಇತ್ತೀಚಿಗೆ ರಿಸರ್ವ್ ಬ್ಯಾಂಕ್ ನ ಇನೊವೇಷನ್ ಹಬ್ ನ ಮೊದಲ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ.

# 18-11-2020

## ಬಳ್ಳಾರಿ ಸಮೀಪದ ಹಂಪಿಯಲ್ಲಿ ವಿಶ್ವದ ಎತ್ತರದ `ಹನುಮಾನ್' ಪ್ರತಿಮೆ !



ಬಳ್ಳಾರಿ : ಕರ್ನಾಟಕದ ಬಳ್ಳಾರಿ ಜಿಲ್ಲೆಯ ಹಂಪಿ ಮೂಲದ ಜನ್ಮಭೂಮಿ ತೀರ್ಥ ಟ್ರಸ್ಟ್ ಜನ್ಮಸ್ಥಳವಾದ ಕಿಷ್ಕಿಂಧಾದಲ್ಲಿ 215 ಮೀಟರ್ ಎತ್ತರದ ಮೂರ್ತಿಯನ್ನು ಒಟ್ಟು 1,200 ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಿಸಲು ಯೋಜನೆ ರೂಪಿಸಿದೆ. ಒಟ್ಟು 6 ವರ್ಷಗಳ ಕಾಲಾವಧಿಯಲ್ಲಿ ಯೋಜನೆಯನ್ನು ಪೂರ್ಣಗೊಳಿಸಲು ಸಿದ್ಧತೆ ನಡೆಸಲಾಗಿದೆ. ಈ ಮೂರ್ತಿ ನಿರ್ಮಾಣಕ್ಕೆ ರಾಷ್ಟ್ರಾದ್ಯಂತ ರಥಯಾತ್ರೆ ನಡೆಸಿ ಹಣ ಸಂಗ್ರಹಿಸಲು ಟ್ರಸ್ಟ್ ಉದ್ದೇಶಿಸಿದೆ.

## ಬಿಹಾರದ ನೂತನ ಉಪ ಮುಖ್ಯಮಂತ್ರಿಯಾಗಿ ರೇಣು ದೇವಿ ಪ್ರತಿಜ್ಞಾ ವಿಧಿ ಸ್ವೀಕಾರ



ಬಿಹಾರದಲ್ಲಿ ಇತ್ತೀಚಿಗೆ ನಡೆದ ಚುನಾವಣೆಯ ಫಲಿತಾಂಶದಲ್ಲಿ NDA ಮೈತ್ರಿಕೂಟದ ಪಕ್ಷಗಳು ಅಧಿಕಾರಕ್ಕೆ ಬೇಕಾದ ಸ್ಥಾನಗಳನ್ನು ಪಡೆದಿದ್ದು, ನೂತನ ಮುಖ್ಯಮಂತ್ರಿಯಾಗಿ ನಿತೀಶ್ ಕುಮಾರ್ ಅವರು 7ನೇ ಬಾರಿಗೆ ಪ್ರಮಾಣ ವಚನ ಸ್ವೀಕರಿಸಿದರು. ಇನ್ನು ಇಬ್ಬರು ಉಪ ಮುಖ್ಯಮಂತ್ರಿಗಳನ್ನು ಬಿಹಾರ ಸಚಿವ ಸಂಪುಟ ಹೊಂದಲಿದ್ದು, ತಾರ್ ಕಿಶೋರ್

ಪ್ರಸಾದ್ ಮತ್ತು ರೇಣು ದೇವಿ ಅವರು ಉಪ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದರು. ಬಿಹಾರದ ನೂತನ ಉಪ ಮುಖ್ಯಮಂತ್ರಿಯಾಗಿ ಆಯ್ಕೆಯಾಗಿರುವ ರೇಣು ದೇವಿಯವರು ಬೆಟ್ಟಿಯಾ ಕ್ಷೇತ್ರದಿಂದ ನಾಲ್ಕು ಬಾರಿ ಶಾಸಕಿಯಾಗಿ ಆಯ್ಕೆಯಾಗಿದ್ದಾರೆ.
* 2010ರಲ್ಲಿ ನಿತೀಶ್ ಕುಮಾರ್ ಸರ್ಕಾರದಲ್ಲಿ ಸಚಿವೆಯಾಗಿ ಕಾರ್ಯ ನಿರ್ವಹಿಸಿದ್ದಾರೆ. ಮತ್ತು ಅನುಭವ ಹೊಂದಿದ್ದಾರೆ.

## ವೀರಶೈವ ಲಿಂಗಾಯತ ನಿಗಮ ಸ್ಥಾಪನೆಗೆ ಯಡಿಯೂರಪ್ಪ ಆದೇಶ



ಹಲವು ದಿನಗಳಿಂದ ಬೇಡಿಕೆಯಿದ್ದ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮ ಸ್ಥಾಪನೆಗೆ ರಾಜ್ಯ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಆದೇಶಿಸಿದ್ದಾರೆ. ಈ ನಿಗಮ ಸ್ಥಾಪನೆಯಿಂದಾಗಿ ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ಈ ಸಮುದಾಯದ ಬಡವರಿಗೆ ಹಾಗೂ ಹಿಂದುಳಿದವರಿಗೆ ವಿವಿಧ ಸೌಲಭ್ಯ ಹಾಗೂ ಅನುಕೂಲ ಒದಗಿಸಿಕೊಡಲು ಅನುಕೂಲವಾಗಲಿದೆ.
* ಇತ್ತೀಚಿಗಷ್ಟೇ ಮುಖ್ಯಮಂತ್ರಿಗಳು ಮರಾಠ ನಿಗಮ ಸ್ಥಾಪನೆಗೆ ಆದೇಶಿಸಿದ್ದರು. ಹಾಗೂ ಕೆಲ ದಿನಗಳ ಹಿಂದೆ ಕಾಡುಗೊಲ್ಲ ನಿಗಮ ಕೂಡ ಸ್ಥಾಪನೆ ಮಾಡಲಾಗಿದೆ.

## ಪಂಜಾಬ್ ಚುನಾವಣಾ ರಾಯಭಾರಿಯಾಗಿ ನಟ ಸೋನು ಸೂದ್ ನೇಮಕ



ನವದೆಹಲಿ: ಭಾರತೀಯ ಚುನಾವಣಾ ಆಯೋಗವು ಬಾಲಿವುಡ್ ಸೇರಿ ಭಾರತದ ಬಹುತೇಕ ಭಾಷೆಗಳಲ್ಲಿ ನಟಿಸಿರುವ ನಟ ಸೋನು ಸೂದ್ ಅವರನ್ನು ಪಂಜಾಬ್ ರಾಜ್ಯ ಚುನಾವಣಾ ರಾಯಭಾರಿಯನ್ನಾಗಿ ನೇಮಿಸಿ ಆದೇಶ ಹೊರಡಿಸಿದೆ. ಅಲ್ಲದೆ ಪಂಜಾಬ್ ರಾಜ್ಯದ ಮುಖ್ಯ ಚುನಾವಣಾ ಅಧಿಕಾರಿಯಾದ ಎಸ್. ಕರುಣಾ ರಾಜುರವರು ಚುನಾವಣಾ ಆಯೋಗದ ಪ್ರಸ್ತಾವನೆಗೆ ಅನುಮೋದನೆ ನೀಡಿದ್ದಾರೆ. ಕೋರೋಣ ಸೋಂಕಿನಿಂದಾಗಿ ಭಾರತದಾದ್ಯಂತ ವಿಧಿಸಿದ್ದ ಲಾಕ್‌ಡೌನ್ ಸಮಯದಲ್ಲಿ ಕಾರ್ಮಿಕರು ತಮ್ಮ ಊರುಗಳಿಗೆ ತೆರಳಲು ಸಹಾಯ, ಸೇರಿ ಹಲವು ಸಮಾಜ ಸೇವೆಗಳನ್ನು ಮಾಡಿ ಎಲ್ಲರ ಗಮನಸೆಳೆದಿದ್ದರು.

# 19-11-2020

## ಭಾರತೀಯ ಕ್ರಿಕೆಟ್ ತಂಡದ ಉಡುಪುಗಳಿಗೆ ಹೊಸ ಪ್ರಾಯೋಜಕರು

ನವದೆಹಲಿ: ಭಾರತದ ಕ್ರಿಕೆಟ್ ತಂಡದ ಉಡುಪುಗಳಿಗೆ ಭಾರತೀಯ ಕ್ರಿಕೆಟ್ ಮಂಡಳಿಯು ಹೊಸ ಪ್ರಯೋಜಕರರೊಂದಿಗೆ ಒಪ್ಪಂದ ಮಾಡಿಕೊಂಡಿದೆ. ಇದುವರೆಗೆ BCCI ಯು ಅಮೆರಿಕ ಮೂಲದ ಕ್ರೀಡಾ ಉಡುಪುಗಳ ಸಂಸ್ಥೆಯಾದ 'ನೈಕಿ'(Nike) ಜೊತೆ 15 ವರ್ಷಗಳ ಒಪ್ಪಂದ ಮಾಡಿಕೊಂಡಿತ್ತು. ಇನ್ನು ಭಾರತ ತಂಡದ ನೂತನ ಪ್ರಾಯೋಜಕರಾಗಿ ಮೊಬೈಲ್ ಪ್ರೀಮಿಯರ್ ಲೀಗ್ (ಎಂಪಿಎಲ್) ಸ್ಪೋರ್ಟ್ಸ್ ಜೊತೆಗೆ 3 ವರ್ಷಗಳ ಒಪ್ಪಂದ ಮಾಡಿಕೊಂಡಿದ್ದು, MPL ಒಂದು ಆನ್ಲೈನ್ ಕ್ರೀಡಾ ಸಂಸ್ಥೆಯಾಗಿದೆ.
* BCCI ಸಂಸ್ಥೆಯು ಭಾರತ ಮಹಿಳಾ ಕ್ರಿಕೆಟ್ ಹಾಗು 19 ವರ್ಷದೊಳಗಿನ ತಂಡಕ್ಕೂ MPL ಸ್ಪೋರ್ಟ್ಸ್ ನ ಪ್ರಾಯೋಜಕತ್ವ ನೀಡಿದೆ.

## ಭಾರತದಲ್ಲಿ ಆಯೋಜಿಸಿದ್ದ ಫಿಫಾ ಅಂಡರ್ 17 ವಿಶ್ವಕಪ್ ರದ್ದು




ನವದೆಹಲಿ : ಭಾರತದಲ್ಲಿ 2021 ನೇ ಸಾಲಿನಲ್ಲಿ ನಡೆಸಲು ಉದ್ದೇಶಿಸಲಾಗಿದ್ದ ಮಹಿಳೆಯರ ಫಿಫಾ ಅಂಡರ್ 17 ವಿಶ್ವಕಪ್ ಟೂರ್ನಿಯನ್ನು ಕೋರೋಣ ಸೋಂಕಿನ ಭೀತಿಯಿಂದ 2022ಕ್ಕೆ

ಸಾಲಿಗೆ ಮುಂದೂಡಲಾಯಿತು. ಇತ್ತೀಚಿಗೆ ಸಭೆ ಸೇರಿದ್ದ ವಿಶ್ವ ಫುಟ್ಬಾಲ್ ಆಡಳಿತ ಮಂಡಳಿಯು ಭಾರತ ಹಾಗೂ ಕೋಸ್ಟರಿಕಾದಲ್ಲಿ ಈಗಾಗಲೇ ನಿಗದಿಪಡಿಸಿದಂತೆ ಮಹಿಳೆಯರ ಅಂಡರ್ 17 ವಿಶ್ವಕಪ್ ಹಾಗೂ ಅಂಡರ್ 20 ವಿಶ್ವಕಪ್ ಮುಂದೂಡಲು ತೀರ್ಮಾನಿಸಿದ್ದು, ಈ ಎರಡು ದೇಶಗಳಿಗೆ 2022ರ ಆವೃತ್ತಿಯ ವಿಶ್ವಕಪ್ ಆತಿಥ್ಯದ ವಹಿಸಲು ಅವಕಾಶ ನೀಡಲಾಯಿತು.

## ಗ್ಲೋಬಲ್ ಸ್ಮಾರ್ಟ್ ಸಿಟಿ ಯೋಜನೆಗೆ ಬೆಂಗಳೂರು ಸೇರಿ ದೇಶದ 4 ನಗರಗಳು ಆಯ್ಕೆ



ಬೆಂಗಳೂರು : ವಿಶ್ವ ಆರ್ಥಿಕ ವೇದಿಕೆ ಯು ಜಿ 20 ಗ್ಲೋಬಲ್ ಸ್ಮಾರ್ಟ್ ಸಿಟಿ ಅಲಯನ್ಸ್ ನ ಭಾಗವಾಗಿ ಜಾಗತಿಕ ಮಟ್ಟದ ಗ್ಲೋಬಲ್ ಸ್ಮಾರ್ಟ್ ಸಿಟಿ ಯೋಜನೆಗಾಗಿ 22 ದೇಶಗಳ 36 ನಗರಗಳನ್ನು ಆಯ್ಕೆಮಾಡಿದ್ದು, ಈ ನಗರಗಳ ಪೈಕಿ ರಾಜ್ಯ ರಾಜಧಾನಿ ಬೆಂಗಳೂರು ಸೇರಿ ಭಾರತದ ಹೈದದರಾಬಾದ್, ಇಂದೋರ್, ಫರೀದಾಬಾದ ನಗರಗಳು ಆಯ್ಕೆಯಾಗಿವೆ. ಇನ್ನು ವಿವಿಧ ದೇಶಗಳ ಮಾಸ್ಕೊ, ಲಂಡನ್, ಟೊರೊಂಟೊ, ಬ್ರೆಸಿಲಿಯಾ, ಮೆಲ್ಬೋರ್ನ್, ದುಬೈ ನಗರಗಳು ಈ ಪಟ್ಟಿಯಲ್ಲಿ ಸ್ಥಾನ ಪಡೆದಿವೆ. ಆಧುನಿಕ ತಂತ್ರಜ್ಞಾನದದ ಮೂಲಕ ರಸ್ತೆ ಪ್ರಯಾಣವನ್ನು ಸುರಕ್ಷಿತಗೊಳಿಸುವ ಜಾಗತಿಕ ಮಟ್ಟದ ಯೋಜನೆಗೆ ಬೆಂಗಳೂರು, ಹೈದದರಾಬಾದ್, ಇಂದೋರ್, ಫರೀದಾಬಾದನ್ನು ಆಯ್ಕೆ ಮಾಡಲಾಗಿದೆ.

* ಗ್ಲೋಬಲ್ ಸ್ಮಾರ್ಟ್ ಸಿಟಿ ಯೋಜನೆಗೆ ಆಯ್ಕೆಯಾದ ನಗರಗಳಲ್ಲಿ ಖಾಸಗಿಕರಣದ ರಕ್ಷಣೆ, ನಿರ್ವಹಣೆ, ಆಧುನಿಕ ಸೈಬರ್ ತಂತ್ರಜ್ಞಾನದ ಮೂಲಕ ವಿಶೇಷ ಚೇತನರಿಗೆ ಉತ್ತಮ ಸೇವೆ ಸೇರಿ ವಿವಿಧ ಸೌಲಭ್ಯಗಳನ್ನು ಒದಗಿಸುವಲ್ಲಿ ನೆರವಾಗಲಿದೆ.

# 20-11-2020

## ಶೀಘ್ರವೇ ಮಧ್ಯಪ್ರದೇಶ ಸರ್ಕಾರದಿಂದ 'ಗೋವು ಸಚಿವಾಲಯ' ಅಸ್ತಿತ್ವಕ್ಕೆ !



ಭೋಪಾಲ್ : ಮಧ್ಯಪ್ರದೇಶ ರಾಜ್ಯ ಸರ್ಕಾರವು ರಾಜ್ಯದಲ್ಲಿ 'ಗೋವು ಸಚಿವಾಲಯ' ನಿರ್ಮಿಸಲು ತೀರ್ಮಾನ ಕೈಗೊಂಡಿದ್ದು, ಈ ಮೂಲಕ ಗೋವುಗಳ ಸಂರಕ್ಷಣೆಗಾಗಿ ಮುಂದಾಗಿದೆ. ಈ ಕುರಿತು ಮಧ್ಯಪ್ರದೇಶ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಇತ್ತೀಚಿಗೆ ಘೋಷಣೆ ಮಾಡಿದ್ದಾರೆ. ಗೋವು ಸಚಿವಾಲಯದ ಭಾಗವಾಗಿ ಪಶು ಸಂಗೋಪನೆ, ಅರಣ್ಯ, ಪಂಚಾಯಿತಿ, ಗ್ರಾಮೀಣ ಅಭಿವೃದ್ಧಿ, ಗೃಹ ಮತ್ತು ರೈತ ಕಲ್ಯಾಣ ಇಲಾಖೆಗಳು ಸೇರ್ಪಡೆ ಮಾಡಲಾಗುವುದಾಗಿ ಮುಖ್ಯಮಂತ್ರಿ ಚೌಹಾಣ್ ತಿಳಿಸಿದ್ದಾರೆ.

* ಮಧ್ಯ ಪ್ರದೇಶ ಸರ್ಕಾರವು ಇತ್ತೀಚಿಗಷ್ಟೇ 'ಲವ್ ಜಿಹಾದ್' ವಿರುದ್ಧ ಸೂಕ್ತ ಕಾನೂನು ರೂಪಿಸುವ ಕುರಿತು ಘೋಷಿಸಿತ್ತು.

## ರಷ್ಯಾದಲ್ಲಿ ನಡೆದ 12ನೇ ಬ್ರಿಕ್ಸ್ ಸಮ್ಮೇಳನ

ಬ್ರೆಜಿಲ್, ರಷ್ಯಾ, ಭಾರತ, ಚೀನಾ ಮತ್ತು ದಕ್ಷಿಣ ಆಫ್ರಿಕಾ ರಾಷ್ಟ್ರಗಳ ಒಕ್ಕೂಟವನ್ನು ಬ್ರಿಕ್ಸ್ ಎಂದು ಹೆಸರಿಸಲಾಗಿದ್ದು, 2020 ನೇ ಸಾಲಿನ 12 ನೇ ಬ್ರಿಕ್ಸ್ ರಾಷ್ಟ್ರಗಳ ಸಮ್ಮೇಳನಕ್ಕೆ ರಷ್ಯಾ ಆಥಿತ್ಯ ವಹಿಸಿತ್ತು. ಈ ವರ್ಚುಯಲ್ ಸಭೆಯಲ್ಲಿ ಬ್ರಿಕ್ಸ್ ರಾಷ್ಟ್ರಗಳು ಬಹುಪಕ್ಷೀಯ ವ್ಯವಸ್ಥೆ, ಕೊರೊನಾವೈರಸ್ ಸಾಂಕ್ರಾಮಿಕ ಪಿಡುಗು, ಭಯೋತ್ಪಾದನೆ ನಿಗ್ರಹ, ವ್ಯಾಪಾರ, ಆರೋಗ್ಯ ಮತ್ತು ಇಂಧನಕ್ಕೆ ಸೇರಿದಂತೆ ಹಲವು ವಿಷಯಗಳ ಕುರಿತು ಚರ್ಚೆ ನಡೆಸಿದವು. ಈ ಸಭೆಯಲ್ಲಿ ಭಾರತದ ಪ್ರಧಾನಿ ನರೇಂದ್ರ ಮೋದಿಯವರು ಭಾಷಣ ಮಾಡಿ ಭಯೋತ್ಪಾದನೆಯು ಇಂದು ಇಡೀ ವಿಶ್ವವೇ ಎದುರಿಸುತ್ತಿರುವ ಸಮಸ್ಯೆಯಾಗಿದ್ದು, ಉಗ್ರ ಸಂಘಟನೆಗಳನ್ನು ಬೆಂಬಲಿಸುವ, ನೆರವು ಒದಗಿಸುವ ರಾಷ್ಟ್ರಗಳನ್ನು ವಿರುದ್ಧ ಸೂಕ್ತ ಕ್ರಮಗಳನ್ನು ತೇಗುದುಕೊಳ್ಳುವ ಕುರಿತು ಬ್ರಿಕ್ಸ್ ರಾಷ್ಟ್ರಗಳು ಒಂದಾಗಿ ಕೆಲಸ ಮಾಡಬೇಕು ಎಂದು ತಿಳಿಸಿದರು.

## RBI ನಿಂದ ತಾತ್ಕಾಲಿಕ ನಿಷೇಧಕ್ಕೊಳಗಾದ ಲಕ್ಷ್ಮಿ ವಿಲಾಸ ಬ್ಯಾಂಕ್




ತಮಿಳುನಾಡು ರಾಜ್ಯದ ಮೂಲದ ಖಾಸಗಿ ವಲಯದ ಲಕ್ಷ್ಮೀ ವಿಲಾಸ್ ಬ್ಯಾಂಕ್‌ನ ಆರ್ಥಿಕ ಪರಿಸ್ಥಿತಿ ಕುಸಿತ ಕಂಡ ಹಿನ್ನೆಲೆ ಭಾರತೀಯ ರಿಸರ್ವ್ ಬ್ಯಾಂಕ್ 30 ದಿನಗಳ ಕಾಲ ತಾತ್ಕಾಲಿಕ ಅಮಾನತ್ತಿಗೊಳಪಡಿಸಿದೆ. ಬ್ಯಾಂಕಿಂಗ್ ರೆಗ್ಯುಲೇಷನ್ ಆಯಕ್ಟ್‌ನ ಅನುಸಾರ RBI ಕೇಂದ್ರ ಸರ್ಕಾರಕ್ಕೆ ಲಕ್ಷ್ಮಿ ವಿಲಾಸ ಬ್ಯಾಂಕ್‌ನ್ನು ತಾತ್ಕಾಲಿಕ ನಿಷೇಧಕ್ಕೊಳಪಡಿಸುವಂತೆ ಮಾಡಿದ ಮನವಿ ಹಿನ್ನೆಲೆ ಕೇಂದ್ರ ಸರ್ಕಾರ ಈ ನಿರ್ಧಾರ ಕೈಗೊಂಡಿದೆ.
* ಇನ್ನು ಬ್ಯಾಂಕ್ ಗ್ರಾಹಕರಿಗೆ ಡಿಸೆಂಬರ್ 16 ರವರೆಗೂ 25,000 ರೂಗಳ ವಿಥ್'ಡ್ರಾ ಮಿತಿಯನ್ನು ಹೇರಲಾಗಿದೆ.

## ಗೋವಾದ ಮಾಜಿ ರಾಜ್ಯಪಾಲೆ ಮೃದುಲಾ ಸಿನ್ಹಾ ನಿಧನ



ಪಾಟ್ನಾ/ಪಣಜಿ: ಗೋವಾದ ರಾಜ್ಯಪಾಲರಾಗಿ ಸೇವೆ ಸಲ್ಲಿಸಿದ್ದ, ಬಿಜೆಪಿಯ ಹಿರಿಯ ನಾಯಕಿಯೂ ಆದ ಮೃದುಲಾ ಸಿನ್ಹಾ ಅವರು ತಮ್ಮ 77 ನೇ ವಯಸ್ಸಿನಲ್ಲಿ ಇತ್ತೀಚಿಗೆ ನಿಧನರಾದರು. ಬಿಹಾರ ರಾಜ್ಯದಲ್ಲಿ 1942 ರ ನವೆಂಬರ್ 27ರಂದು ಜನಿಸಿದ್ದ ಇವರು ಗೋವಾ ರಾಜ್ಯದ ಮೊದಲ ಮಹಿಳಾ ರಾಜ್ಯಪಾಲರಾಗಿ ಸೇವೆ ಸಲ್ಲಿಸಿದ್ದಾರೆ. ಅಲ್ಲದೆ ಹಿಂದಿ ಸಾಹಿತ್ಯ ಕ್ಷೇತ್ರದಲ್ಲಿಯೂ ಸಾಕಷ್ಟು ಹೆಸರು ಮಾಡಿದ್ದರು. ಇನ್ನು ಕೇಂದ್ರ ಸಮಾಜ ಕಲ್ಯಾಣ ಮಂಡಳಿಯ ಅಧ್ಯಕ್ಷರಾಗಿಯೂ ಕೆಲ ಕಾಲ ತಮ್ಮ ಸೇವೆ ಸಲ್ಲಿಸಿದ್ದಾರೆ.

## 2030 ರಿಂದ ಪೆಟ್ರೋಲ್, ಡೀಸೆಲ್ ವಾಹನ ನಿಷೇದಿಸುವ ಕುರಿತು ಯೋಜಿಸಿದ ಬ್ರಿಟನ್



ಲಂಡನ್ : ದೇಶದಲ್ಲಿ ಹೆಚ್ಚುತ್ತಿರುವ ವಾಯು ಮಾಲಿನ್ಯ ನಿಯಂತ್ರಿಸುವ ಮೂಲಕ ದೇಶದ ಪರಿಸರವನ್ನು ಸಂರಕ್ಷಿಸುವ ಸಲುವಾಗಿ ರೂಪಿಸಿದ ಹಸಿರು ಕೈಗಾರಿಕಾ ಕ್ರಾಂತಿಯಲ್ಲಿ ಒಟ್ಟು 10 ಅಂಶಗಳ ಯೋಜನೆಯನ್ನು ರೂಪಿಸಲಾಗಿದೆ. ಇವುಗಳಲ್ಲಿ ಪ್ರಮುಖವಾಗಿ 2030 ನೇ ವರ್ಷದಿಂದ ಜಾರಿಗೆ ಬರುವತೆ ಪೆಟ್ರೋಲ್ ಮತ್ತು ಡೀಸೆಲ್ ವಾಹನಗಳ ಮಾರಾಟವನ್ನು ಬ್ರಿಟನ್ ನಿಷೇಧಿಸಲು ಕ್ರಮ ಕೈಗೊಳ್ಳಲಿದೆ.
* ಈ ಯೋಜನೆಗಾಗಿ ಬ್ರಿಟನ್ ಈಗಾಗಲೇ 12 ಬಿಲಿಯ ಪೌಂಡ್ (ಸುಮಾರು 1,18,260 ಕೋಟಿ ರೂಪಾಯಿ) ನಿಧಿಯನ್ನು ಮೀಸಲಿರಿಸಲಿದೆ.
* ಈ ಯೋಜನೆಯಿಂದಾಗಿ ಒಟ್ಟು 2,50,000 ಉದ್ಯೋಗ ಸೃಷ್ಟಿಯಾಗುವ ನಿರೀಕ್ಷೆಯಿದ್ದು, 2050ರ ವೇಳೆಗೆ ದೇಶವನ್ನು ಇಂಗಾಲ ಮುಕ್ತಗೊಳಿಸುವ ಗುರಿಯನ್ನು ಹೊಂದಲಾಗಿದೆ.

## ಕರ್ನಾಟಕ ಬಯಲಾಟ ಅಕಾಡೆಮಿ ಅಧ್ಯಕ್ಷ ಸೊಲಬಕ್ಕನವರ್ ನಿಧನ



ಬೆಂಗಳೂರು: ಕರ್ನಾಟಕ ಬಯಲಾಟ ಅಕಾಡೆಮಿ ಅಧ್ಯಕ್ಷರಾಗಿದ್ದ ಡಾ. ಟಿ.ಬಿ. ಸೊಲಬಕ್ಕನವರ್ ಅವರು ತಮ್ಮ 73 ನೇ ವಯಸ್ಸಿನಲ್ಲಿ ನಿಧನರಾದರು. ಶಿಕ್ಷಕರಾಗಿ ವೃತ್ತಿ ಜೀವನ ಆರಂಭಿಸಿದ್ದ ಇವರು ಶಿಗ್ಗಾವಿಯ ಗೊಟಗೋಡಿಯಲ್ಲಿನ ಉತ್ಸವ ರಾಕ್ ಗಾರ್ಡನ್ ನಿರ್ಮಾಣದ ಮೂಲ ರೂವಾರಿಗಳಾಗಿದ್ದರು. ಸರ್ಕಾರಿ ಶಿಕ್ಷಕ ವೃತ್ತಿಯನ್ನು ತೊರೆದು ತಮ್ಮನ್ನು ಸಂಪೂರ್ಣವಾಗಿ ದೊಡ್ಡಾಟದಲ್ಲಿ ತೊಡಗಿಸಿಕೊಂಡಿದ್ದರು. ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ಇವರಿಗೆ ಗೌರವ ಡಾಕ್ಟರೇಟ್ ಪದವಿ ನೀಡಿ ಗೌರವಿಸಿದೆ. ಹಾಗೂ ಕರ್ನಾಟಕ ಯಕ್ಷಗಾನ

ಬಯಲಾಟ ಅಕಾಡೆಮಿ 2002ರಲ್ಲಿ ಅತ್ಯುತ್ತಮ ಕಲಾ ತರಬೇತಿ ಸಂಸ್ಥೆ ಎಂದು ಇವರ ದೊಡ್ಡಾಟ ಕಲಾ ತರಬೇತಿ ಸಂಸ್ಥೆಗೆ ಪ್ರಶಸ್ತಿ ನೀಡಿ ಗೌರವಿಸಿದೆ. 2001ರಲ್ಲಿ ಜಾನಪದ ಜ್ಞಾನ ವಿಜ್ಞಾನ ಪ್ರಶಸ್ತಿ, 2002ರಲ್ಲಿ ಸಂಘಟನಾ ಪ್ರಶಸ್ತಿ, 2005ರಲ್ಲಿ ರಾಜ್ಯೋತ್ಸವ ಹಾಗೂ 2006ರಲ್ಲಿ ಲಲಿತ ಕಲಾ ಅಕಾಡೆಮಿ ಪ್ರಶಸ್ತಿ ಸೇರಿ ಹಲವು ಗೌರವಗಳಿಗೆ ಪಾತ್ರರಾಗಿದ್ದಾರೆ.

# 21-11-2020

## ಕರ್ನಾಟಕದ 31ನೇ ನೂತನ ಜಿಲ್ಲೆಯಾಗಿ 'ವಿಜಯನಗರ' ಸ್ಥಾಪನೆ !




ಬೆಂಗಳೂರು : ರಾಜ್ಯದಲ್ಲಿ ಪ್ರಸ್ತುತ ಇರುವ ಜಿಲ್ಲೆಗಳ ಸಂಖ್ಯೆ 30 ಇದೀಗ ಬಳ್ಳಾರಿ ಜಿಲ್ಲೆಯನ್ನು ವಿಭಜಿಸಿ ವಿಜಯನಗರ ಎಂಬ ನೂತನ ಜಿಲ್ಲೆ ಸ್ಥಾಪನೆಗೆ ನಡೆಯುತ್ತಿರುವ ದಶಕಗಳ ಹೋರಾಟ ಇದೀಗ ಮುನ್ನೆಲೆಗೆ ಬಂದಿದ್ದು, ರಾಜ್ಯದ 31ನೇ ನೂತನ ಜಿಲ್ಲೆಯಾಗಿ ವಿಜಯನಗರ ಶೀಘ್ರದಲ್ಲೇ ಅಧಿಕೃತವಾಗಿ ಅಸ್ತಿತ್ವಕ್ಕೆ ಬರಲಿದೆ. ಇತ್ತೀಚಿಗೆ ರಾಜ್ಯದ ಮುಖ್ಯಮಂತ್ರಿ ಬಿ ಎಸ್ ಯಡಿಯೂರಪ್ಪ ಅವರ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಬಳ್ಳಾರಿ ಜಿಲ್ಲೆಯನ್ನು ವಿಭಾಗಿಸಿ ನೂತನವಾಗಿ ವಿಜಯನಗರ ಜಿಲ್ಲೆ ಸ್ಥಾಪನೆಗೆ ಒಮ್ಮತ ಸೂಚಿರುವುದಾಗಿ ತಿಳಿದು ಬಂದಿದೆ.

## ನವೆಂಬರ್ 19 :ಭಾರತದ ಮೊದಲ ಮಹಿಳಾ ಪ್ರಧಾನಿ ದಿ. ಇಂದಿರಾಗಾಂಧಿಯವರ 103ನೇ ಜನ್ಮದಿನ



ನವದೆಹಲಿ : ಭಾರತದ ಮೊದಲ ಮಹಿಳಾಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರ 103 ನೇ ಜನ್ಮ ದಿನಾಚರಣೆಯನ್ನು ಇದೆ ನವೆಂಬರ್ 19 ರಂದು ದೇಶ್ಯಾದ್ಯಂತ ಆಚರಿಸಲಾಯಿತು. ಇಂದಿರಾ ಗಾಂಧಿಯವರು ಉಕ್ಕಿನ ಮಹಿಳೆ ಎಂದೇ ಖ್ಯಾತರಾಗಿದ್ದರು. ಇವರ 103ನೇ ಜನ್ಮದಿನದಂದು ಭಾರತದ ಪ್ರಧಾನಿ ನರೇಂದ್ರ ಮೋದಿ ಸೇರಿ ವಿವಿಧ ಗಣ್ಯರು, ನಾಯಕರುಗಳು ಮಾಜಿ ಪ್ರಧಾನಿಯನ್ನು ಸ್ಮರಿಸಿಕೊಂಡರು. ಇಂದಿರಾ ಗಾಂಧಿಯವರು 1917ರ ನವೆಂಬರ್ 19ರಂದು ಜನಿಸಿದರು. ಇವರು ಭಾರತದ ಪ್ರಧಾನ ಮಂತ್ರಿಯಾಗಿ 1966 ರಿಂದ 1977ರವರೆಗೆ ಮೊದಲನೇ ಅವಧಿಯಲ್ಲಿ ನಂತರ 1980 ರಿಂದ ಅವರ ಹತ್ಯೆಯಾಗುವವರೆಗೆ ಅಂದರೆ 1984 ರವರೆಗೆ ಪ್ರಧಾನಿಯಾಗಿ ಸೇವೆ ಸಲ್ಲಿಸಿದ್ದಾರೆ.

## ಬೆಂಗಳೂರಿನ ಟೆಕ್ ಸಮ್ಮಿಟ್ ಉದ್ಘಾಟಿಸಿದ ಪ್ರಧಾನಿ ನರೇಂದ್ರ ಮೋದಿ




ಬೆಂಗಳೂರು : ಕರ್ನಾಟಕ ರಾಜ್ಯ ರಾಜಧಾನಿ ಬೆಂಗಳೂರಿನಲ್ಲಿ ಇತ್ತಿಚೀಗೆ ಆಯೋಜಿಸ ಲಾಗಿದ್ದ 'ಬೆಂಗಳೂರು ಟೆಕ್ ಸಮ್ಮಿಟ್' ಅನ್ನು ಪ್ರಧಾನಿ ನರೇಂದ್ರ ಮೋದಿಯವರು ವಿಡಿಯೋ ಕಾನ್ಫರೆನ್ಸ್ ಮೂಲಕ ಉದ್ಘಾಟಿಸಿದರು. ಬೆಂಗಳೂರು ತಂತ್ರಜ್ಞಾನ ಮೇಳದ 23ನೇ ಆವೃತ್ತಿ ಇದಾಗಿದ್ದು, ಕೋವಿಡ್ ಸೋಂಕು ಕಾರಣದಿಂದ ವರ್ಚುಯಲ್ ಆಗಿ ಮೇಳ ನಡೆಸಲಾಗುತ್ತಿದೆ. ಈ ಮೇಳದಲ್ಲಿ ಫಿನ್ಲೆಂಡ್, ಇಸ್ರೇಲ್, ನೆದರ್ ಲೆಂಡ್ಸ್, ಯುಕೆ, ಕೆನಡಾ, ಆಸ್ಟ್ರೇಲಿಯಾ, ಜರ್ಮನಿ, ಫ್ರಾನ್ಸ್, ಆಸ್ಟ್ರೇಲಿಯಾ, ಜರ್ಮನಿ, ಸ್ವೀಡನ್, ಸ್ವಿಟ್ಜರ್ ಲೆಂಡ್, ಡೆನ್ಮಾರ್ಕ್, ತೈವಾನ್, ಜಪಾನ್, ಲಿಥುವಾನಿಯಾ ಸೇರಿ 25ಕ್ಕೂ ಅಧಿಕ ರಾಷ್ಟ್ರಗಳು ಪಾಲ್ಗೊಂಡಿದ್ದು ವಿಶೇಷ. ಈ ಮೇಳದಲ್ಲಿ ಒಟ್ಟು 100ಕ್ಕೂ ಹೆಚ್ಚು ನವೋದ್ಯಮಗಳು, 4000ಕ್ಕೂ ಹೆಚ್ಚು ಉದ್ಯಮ ಗಣ್ಯರು, ಸುಮಾರು 270 ವಿಷಯ ಪರಿಣತರು ಪಾಲ್ಗೊಳ್ಳಲಿದ್ದು ಹಾಗೂ 70ಕ್ಕೂ ಹೆಚ್ಚು ಗೋಷ್ಠಿಗಳು ನಡೆಯಲಿವೆ.

## ಹಾವೇರಿ ರೈಲ್ವೆ ನಿಲ್ದಾಣಕ್ಕೆ 'ಮಹದೇವಪ್ಪ ಮೈಲಾರ' ಹೆಸರು




ಹಾವೇರಿ: ಕರ್ನಾಟಕ ರಾಜ್ಯ ಸರ್ಕಾರವು ಸ್ವಾತಂತ್ರ್ಯ ಹೋರಾಟಗಾರ 'ಮಹದೇವಪ್ಪ ಮೈಲಾರ' ಅವರ ಹೆಸರನ್ನು ಜಿಲ್ಲಾ ಕೇಂದ್ರವಾದ ಹಾವೇರಿಯ ರೈಲು ನಿಲ್ದಾಣಕ್ಕೆ ನಾಮಕರಣ ಮಾಡುವಂತೆ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದ ಹಿನ್ನಲೆ ಕೇಂದ್ರ ಗೃಹ ವ್ಯವಹಾರಗಳ ಸಚಿವಾಲಯ ಅನುಮೋದನೆ ನೀಡಿದೆ. ಈ ಕುರಿತು ಗೆಜೆಟ್ ನೋಟಿಫಿಕೇಶನ್ ಹೊರಡಿಸಿರುವ ಇಲಾಖೆಯು ಹಿಂದಿ, ಇಂಗ್ಲಿಷ್ ಹಾಗೂ ಕನ್ನಡದಲ್ಲಿ ನಾಮಫಲಕ ಅಳವಡಿಸುವಂತೆ ಗೃಹ ಸಚಿವಾಲಯವು ರಾಜ್ಯ ಸರ್ಕಾರಕ್ಕೆ ಈಗಾಗಲೇ ಸೂಚನೆ ನೀಡಿದೆ. ಗಾಂಧೀಜಿಯವರ ಅನುಯಾಯಿಯಾಗಿರುವ ಮಹದೇವಪ್ಪ ಮೈಲಾರ 1911ರಲ್ಲಿ ಹಾವೇರಿ ಜಿಲ್ಲೆಯ ಮೋಟೆಬೆನ್ನೂರಿನಲ್ಲಿ ಜನಿಸಿದರು. ಇವರು ತಮ್ಮ 16ನೇ ವಯಸ್ಸಿನಲ್ಲಿಯೇ ಸ್ವಾತಂತ್ರ್ಯ ಹೋರಾಟಕ್ಕಿಳಿದರು. ಮಹಾತ್ಮ ಗಾಂಧಿ ಅವರ ನೇತೃತ್ವದಲ್ಲಿ 1930ರಲ್ಲಿ ನಡೆದ ಉಪ್ಪಿನ ಸತ್ಯಾಗ್ರಹದಲ್ಲಿ ಇವರು ಭಾಗವಹಿಸಿದ್ದರು.

# 23-11-2020

## ಶುಕ್ರ ಗ್ರಹದ ಕುರಿತ ಸಂಶೋಧನೆಗೆ ಇಸ್ರೋ ಜೊತೆ ಸ್ವೀಡನ್ ಸಹಯೋಗ !



ಬೆಂಗಳೂರು : ಭಾರತದ ಹೆಮ್ಮೆಯ ಬಾಹ್ಯಾಕಾಶ ಸಂಸ್ಥೆಯಾದ ಇಸ್ರೋ (ISRO) ಶುಕ್ರ ಗ್ರಹ ಅನ್ವೇಷಣೆಗಾಗಿ ಕೈಗೊಳ್ಳುತ್ತಿರುವ ಯೋಜನೆಯಲ್ಲಿ ಸ್ವೀಡನ್ ರಾಷ್ಟ್ರವು ಜೊತೆಗೂಡಲಿದೆ ಎಂದು ಇತ್ತೀಚಿಗೆ ಸ್ವೀಡನ್ ದೇಶದ ರಾಯಭಾರಿ ಕ್ಲಾಸ್ ಮೋಲೀನ್ ಹೇಳಿಕೆ ನೀಡಿದ್ದಾರೆ. ಇತ್ತೀಚಿಗೆ ಬೆಂಗಳೂರಿನಲ್ಲಿ ನಡೆದ 'ಬೆಂಗಳೂರು ತಂತ್ರಜ್ಞಾನ ಮೇಳ 2020' ರಲ್ಲಿ ಸಂವಾದ ಕಾರ್ಯಕ್ರಮಯೊಂದರಲ್ಲಿ ಮಾತನಾಡಿದ ಇವರು, ಬಾಹ್ಯಾಕಾಶ ಕ್ಷೇತ್ರದಲ್ಲಿ ಹಲವು ವರ್ಷಗಳಿಂದ ಒಟ್ಟಿಗೆ ಕೆಲಸ ಮಾಡುತ್ತಿರುವ ಭಾರತ ಹಾಗೂ ಸ್ವೀಡನ್ ದೇಶಗಳ ಸಹಯೋಗ ಇನ್ನಷ್ಟು ಬೆಳೆಯಲಿದೆ ಎಂದರು.

## ಕೋವ್ಯಾಕ್ಸಿನ್ 3ನೇ ಹಂತದ ಪ್ರಯೋಗದಲ್ಲಿ ಸ್ವಯಂ ಲಸಿಕೆ ಪಡೆದ ಹರಿಯಾಣ ಆರೋಗ್ಯ ಸಚಿವ



ಅಂಬಾಲ: ವಿಶ್ವವ್ಯಾಪ್ತಿ ವ್ಯಾಪಿಸಿರುವ ಕೊರೋಣ ಸೋಂಕಿಗೆ ಲಸಿಕೆ ಕಂಡಿಕೊಳ್ಳಲ್ಲು ಜಗತ್ತಿನ ಬಹುತೇಕ ಎಲ್ಲ ರಾಷ್ಟ್ರಗಳ ವಿಜ್ಞಾನಿಗಳು ಶ್ರಮವಹಿಸುತ್ತಿದ್ದಾರೆ. ಇನ್ನು ಭಾರತದಲ್ಲಿ ಲಸಿಕೆ ಕೋವ್ಯಾಕ್ಸಿನ್ ಕ್ಲಿನಿಕಲ್ ಟ್ರಯಲ್ ನ ಮೂರನೇ ಹಂತದ ಪ್ರಯೋಗ ಹರಿಯಾಣದಲ್ಲಿ ನಡೆದಿದ್ದು, ಇದರಲ್ಲಿ ಹರಿಯಾಣದ ಆರೋಗ್ಯ ಸಚಿವ ಅನಿಲ್ ವಿಜ್ ಅವರು ಸ್ವಯಂ ಮೊದಲ ಲಸಿಕೆ ಹಾಕಿಸಿಕೊಳ್ಳುವ ಮೂಲಕ ಇಡೀ ದೇಶದ ಗಮನಸೆಳೆದಿದ್ದಾರೆ.

* ಐಸಿಎಂಆರ್ ಹಾಗೂ ಭಾರತ್ ಬಯೋಟೆಕ್ ಸಂಸ್ಥೆಗಳ ಜಂಟಿ ಸಂಶೋಧನೆ ಕೋವ್ಯಾಕ್ಸಿನ್ ಲಸಿಕೆಯ ಮೂರನೇ ಹಂತದ ಟ್ರಯಲ್ ಪರೀಕ್ಷೆ ಇದಾಗಿದೆ.

## ಭಾರತೀಯ ಸೇನಾ ನೌಕಾಪಡೆಗೆ ಅಮೇರಿಕಾದ ಸಬ್‌ಮರೈನ್ ಏರ್ ಕ್ರಾಫ್ಟ್ ಸೇರ್ಪಡೆ




ಭಾರತೀಯ ಸೇನಾ ನೌಕಾಪಡೆಯು ಇದೀಗ P 8I ಏರ್ ಕ್ರಾಫ್ಟ್ ನ್ನು ಹೊಂದಿದೆ. ಭಾರತೀಯ ಸೇನೆಯ ನಾಕಾಪಡೆಗೆ ಇದೆ ಮೊಟ್ಟ ಮೊದಲ ಬಾರಿಗೆ 4 ಪೊಸೈಡಾನ್ 8I ಆಯಂಟಿ ಸಬ್‌ಮರೈನ್ ಏರ್ ಕ್ರಾಫ್ಟ್ ಸೇರ್ಪಡೆಗೊಳಿಸಲಾಗಿದೆ. ಈ ಜಲಂತರ್ಗಾಮಿ ವಿರೋಧಿ ಏರ್‌ಕ್ರಾಫ್ಟ್ ನ್ನು ಸರಿ ಸುಮಾರು 1.1 ಬೀಲಿಯನ್ ಅಮೆರಿಕನ್

ಡಾಲರ್ (81,61,73,05,000 ರೂಪಾಯಿ) ನೀಡಿ ಅಮೆರಿಕ ರಾಷ್ಟ್ರದಿಂದ ಖರೀದಿಸಲಾಗಿದೆ.
* ಇವುಗಳು ಅತ್ಯಾಧುನಿಕ ಸೆನ್ಸಾರ್ ವ್ಯವಸ್ಥೆ ಹೊಂದಿದ್ದು ಸಾಗರದಲ್ಲಿ ಕಾವಲಿಗೆ ಈ ಏರ್‌ಕ್ರಾಫ್ಟ್ ಗಳನ್ನ ಬಳಸಲಾಗುವುದು.

## ರಾಜ್ಯ ಸರ್ಕಾರದಿಂದ 'ಗ್ರಾಮ ಒನ್' ಕೇಂದ್ರಗಳಿಗೆ ಚಾಲನೆ

ಕರ್ನಾಟಕ ಸರಕಾರದಿಂದ ಹಲವು ವಿವಿಧ ಯೋಜನೆಗಳ ಸೌಲಭ್ಯ ಕಲ್ಪಿಸುವ ಸಲುವಾಗಿ ಗ್ರಾಮೀಣ ಭಾಗದಲ್ಲಿ ಹೊಸದಾಗಿ ' ಗ್ರಾಮ ಒನ್' ಕೇಂದ್ರದ ಪ್ರಾಯೋಗಿಕ ಅನುಷ್ಠಾನಕ್ಕೆ ಮುಖ್ಯಮಂತ್ರಿ ಬಿ.ಎಸ್ .ಯಡಿಯೂರಪ್ಪ ದಿನಾಂಕ 19 11 2020 ರಂದು ಚಾಲನೆ ನೀಡಿದರು. ಮೊದಲಿಗೆ ಈ ಯೋಜನೆಯನ್ನು ದಾವಣಗೆರೆ ಜಿಲ್ಲೆಯ 100 ಗ್ರಾಮಗಳಲ್ಲಿ ಶುರುಮಾಡಲಾಗಿದೆ. ಈ ಯೋಜನೆಯಡಿಯಲ್ಲಿ ಕೇಂದ್ರಗಳು ಬೆಳಿಗ್ಗೆ 8 ರಿಂದ ರಾತ್ರಿ 8 ವರೆಗೆ ಕಾರ್ಯನಿರ್ವಹಿಸುತ್ತದೆ. ಸರ್ಕಾರದ ಯೋಜನೆಗಳಾದ ಆದಾಯ ಮತ್ತು ಜಾತಿ ಪ್ರಮಾಣ ಪತ್ರ, ವೃದ್ಧಾಪ್ಯ ವೇತನ & ವಿಧವಾ ವೇತನ, ಅಂಗವಿಕಲ ವೇತನ, ಸಂಧ್ಯಾ ಸುರಕ್ಷಾ ಯೋಜನೆ, ಹಿರಿಯ ನಾಗರಿಕರ ಗುರುತಿನ ಚೀಟಿ, ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ ಕಾರ್ಡ್ ಸೇರಿದಂತೆ ವಿವಿಧ 750ಕ್ಕೂ ಹೆಚ್ಚು ನಾಗರಿಕ ಸೇವೆಗಳ ಸೌಲಭ್ಯ ದೊರೆಯಲಿದೆ.

## ದಿನಕ್ಕೆ 12 ಗಂಟೆ ದುಡಿಮೆಗೆ ಅನುಮತಿ ನೀಡಿದ ಕಾರ್ಮಿಕ ಸಚಿವಾಲಯ



ನವದೆಹಲಿ: ಕೇಂದ್ರ ಸರ್ಕಾರದ ಕಾರ್ಮಿಕ ಸಚಿವಾಲವು ದೇಶದಲ್ಲಿ ಕಾರ್ಯನಿರ್ವಹಿಸುತ್ತಿರುವ ಉದ್ದಿಮೆಗಳು, ಕಾರ್ಖಾನೆಗಳು ಸೇರಿ ಇತರೆ ಸಂಸ್ಥೆಗಳಲ್ಲಿ ಕೆಲಸ ಮಾಡುವ ಕಾರ್ಮಿಕರ ಕೆಲಸದ ಅವಧಿಯನ್ನು 12 ಗಂಟೆಗಳವರೆಗೂ ಹೆಚ್ಚಳ ಮಾಡಿ ಅಧಿಸೂಚನೆಯನ್ನು ಪ್ರಕಟಿಸಿದೆ. ಈ ಮೊದಲು ಪ್ರತಿ ದಿನದ ಗರಿಷ್ಠ ಕೆಲಸದ ಅವಧಿ ಕೇವಲ 9 ಗಂಟೆಗಳಾಗಿತ್ತು, ಆದರೆ ಇದೀಗ 12 ಗಂಟೆಗೆ ಹೆಚ್ಚಿಸಿದೆ ಮತ್ತು ವಾರಕ್ಕೆ ಗರಿಷ್ಠ ಕೆಲಸದ ಅವಧಿಯನ್ನು 48 ಗಂಟೆಗಳಿಗೆ ನಿಗದಿಪಡಿಸಿದೆ.
* 12 ಗಂಟೆಯ ಅವಧಿಯಲ್ಲಿ ಒಂದು ಗಂಟೆ ವಿಶ್ರಾಂತಿ ಅವಧಿಯನ್ನು ಒಳಗೊಂಡಿದೆ.
* ಸತತ 5 ಗಂಟೆಗಿಂತ ಹೆಚ್ಚಿಗೆ ಕೆಲಸ ಮಾಡುವಂತಿಲ್ಲ ಮಧ್ಯ ಕನಿಷ್ಠ ಅರ್ಧ ಗಂಟೆ ವಿಶ್ರಾಂತಿ ಅಗತ್ಯವಿದೆ.
* ಕಾರ್ಮಿಕರ ಸುರಕ್ಷತೆ, ಆರೋಗ್ಯ, ಕೆಲಸದ ಸ್ಥಿತಿಗತಿಗಳನ್ನು ಆಧರಿಸಿ ಕೇಂದ್ರ ಕಾರ್ಮಿಕ ಸಚಿವಾಲವು ಈ ನಿರ್ಧಾರ ಕೈಗೊಂಡಿದ್ದು, ಏನಾದರು ಆಕ್ಷೇಪನೆಗಳಿದ್ದಲ್ಲಿ 45 ದಿನಗಳ ಒಳಗೆ ಇದಕ್ಕೆ ಪ್ರತಿಕ್ರಿಯೆ ಸಲ್ಲಿಸಲು ಅವಕಾಶ ನೀಡಿದೆ.

## ಲೇಖಕ ಡೌಗ್ಲಾಸ್ ಸ್ಟುವರ್ಟ್ ಗೆ 2020ನೇ ಸಾಲಿನ ಪ್ರತಿಷ್ಠಿತ ಬುಕರ್ ಪ್ರಶಸ್ತಿ



ನ್ಯೂಯಾರ್ಕ್ ಮೂಲದ ಲೇಖಕರಾದ 'ಡೌಗ್ಲಾಸ್ ಸ್ಟುವರ್ಟ್' 2020 ನೇ ಸಾಲಿನ ಪ್ರತಿಷ್ಠಿತ ಬುಕರ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ. ತಮ್ಮದೇ ಆತ್ಮಚರಿತ್ರೆ ಆಧರಿಸಿ ಬರೆದ ಚೊಚ್ಚಲ ಕಾದಂಬರಿ 'ಶಗ್ಗಿ ಬೈನ್' ಪ್ರಶಸ್ತಿಗೆ ಆಯ್ಕೆಯಾಗಿರುವುದು ತುಂಬಾ ವಿಶೇಷ.

## ಭಾರತ ಹಾಗೂ ಭೂತಾನ ಪ್ರದಾನಿಗಳಿಂದ ರೂಪೇ ಫೇಸ್ 02 ಗೆ ಚಾಲನೆ




ಭಾರತದ ಪ್ರಧಾನಿ ನರೇಂದ್ರ ಮೋದಿ ಮತ್ತು ಭೂತಾನ್ ಪ್ರಧಾನಿ ಲೊಟೇ ಶೆರಿಂಗ್ ರವರು ದಿನಾಂಕ 20 ನವೆಂಬರ್ 2020 ರಂದು ಭೂತಾನ್ ಪ್ರಜೆಗಳಿಗಾಗಿ ಭಾರತದ ರುಪೇ ಕಾರ್ಡ್ ಫೇಸ್ 2 ಕ್ಕೆ ಚಾಲನೆ ನೀಡಿದರು.

* ಈ ಮೂಲಕ ಉಭಯ ರಾಷ್ಟ್ರಗಳ ನಡುವೆ ಉತ್ತಮ ದ್ವಿಪಕ್ಷೀಯ ಸಂಬಂಧವನ್ನು ಮತ್ತಷ್ಟು ಬಲಗೊಳಿಸಲಾಯಿತು.
* ಇನ್ನು ಭೂತಾನ್‌ನ ಉಪಗ್ರಹಗಳನ್ನು ಬಾಹ್ಯಾಕಾಶ ಕಕ್ಷೆಗೆ ಸೇರಿಸಲು ಇಸ್ರೋ ಕೂಡ ಸಿದ್ದತೆ ನಡೆಸಿದೆ.
* ಈಗಾಗಲೇ ಮೊದಲನೇ ಹಂತದಲ್ಲಿ ರುಪೇ ಫೇಸ್ 1 ಕ್ಕೆ ಕಳೆದ ಆಗಸ್ಟ ತಿಂಗಳಲ್ಲೇ ಚಾಲನೆ ನೀಡಲಾಗಿತ್ತು.
* ಇನ್ನು ಭೂತಾನ್ ರಾಷ್ಟ್ರವು ಮೂರನೇ ಅಂತಾರಾಷ್ಟ್ರೀಯ ಇಂಟರ್‌ನೆಟ್ ಗೇಟ್‌ವೇ ಸಂಬಂಧಿಸಿದ ಒಪ್ಪಂದವನ್ನು ಭಾರತದ ಬಿಎಸ್‌ಎನ್ ಎಲ್ ಸಂಸ್ಥೆಯೊಂದಿಗೆ ಮಾಡಿಕೊಂಡಿರುವುದು ವಿಶೇಷ.

## 24-11-2020

### ನವೆಂಬರ್ 20 : ವಿಶ್ವ ಮಕ್ಕಳ ದಿನ (World Children's Day 2020)




ಪ್ರತಿ ವರ್ಷ ನವೆಂಬರ್ 20 ರಂದು ವಿಶ್ವ ಮಕ್ಕಳ ದಿನವನ್ನು ಆಚರಿಸಲಾಗುತ್ತಿದೆ. ಈ ಆಚರಣೆಯ ಮೂಲಕ ವಿಶ್ವದಾದ್ಯಂತ ಮಕ್ಕಳಲ್ಲಿ ಅಂತರರಾಷ್ಟ್ರೀಯ ಒಗ್ಗಟ್ಟು ಮತ್ತು ಜಾಗೃತಿ ಮೂಡಿಸಲಾಗುವದು. ವಿಶ್ವ ಮಕ್ಕಳ ದಿನವನ್ನು ಮೊದಲಿಗೆ 1954 ರಲ್ಲಿ ಸಾರ್ವತ್ರಿಕ ಮಕ್ಕಳ ದಿನವೆಂದು ಆಚರಿಸಲಾಯಿತು, ನಂತರ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯು ನವೆಂಬರ್ 20,1959 ರಂದು ಮಕ್ಕಳ ಹಕ್ಕುಗಳ ಘೋಷಣೆ ಅನುಮೋದಿಸಿತು.
* ಜಗತ್ತಿನಾದ್ಯಂತ ಆಯಾ ರಾಷ್ಟ್ರಗಳು ಮಕ್ಕಳ ದಿನವನ್ನು ವಿವಿಧ ದಿನಾಂಕಗಳಂದು ಆಚರಿಸುತ್ತವೆ, ಅದೇ ರೀತಿ ಭಾರತದಲ್ಲಿ ಮೊದಲು ಪ್ರಧಾನಿ ಜವಾಹರಲಾಲ್ ನೆಹರೂರವರ ಜನ್ಮದಿನ ನವೆಂಬರ್ 14 ರಂದು ಆಚರಿಸಲಾಗುತ್ತದೆ.

### ಮೊದಲ ಬಾರಿ G20 ಶೃಂಗಸಭೆಗೆ ಆತಿಥ್ಯವಹಿಸಲಿರುವ ಸೌದಿ ಅರೇಬಿಯಾ




ಇಡೀ ವಿಶ್ವವೇ ಕೋವಿಡ್ 19 ಸಾಂಕ್ರಾಮಿಕದಿಂದ ತತ್ತರಿಸಿದ ಬಳಿಕ, ಮೊದಲ ಬಾರಿಗೆ ಜಿ20 ಶೃಂಗಸಭೆ ಆಯೋಜನೆ ಮಾಡಲಾಗಿದ್ದು, ಜಿ20 ಇತಿಹಾಸದಲ್ಲೇ ಮೊದಲ ಬಾರಿಗೆ ಅರಬ್ ರಾಷ್ಟ್ರವು ಜಿ20 ಶೃಂಗಸಭೆಯನ್ನು ಆಯೋಜಿಸಿತು. ಇದೆ ನವೆಂಬರ್ 21 ಮತ್ತು 22 ರಂದು ವರ್ಚುಯಲ್ ಸಭೆಯ ಮೂಲಕ ಸಮ್ಮೇಳನವನ್ನು ಆಯೋಜಿಸಲಾಗಿತ್ತು. G 20 ಗುಂಪು : 1999 ರಲ್ಲಿ ವಿಶ್ವದ ಪ್ರಮುಖ 20 ಅತಿದೊಡ್ಡ ಆರ್ಥಿಕತೆ ಹೊಂದಿದ ರಾಷ್ಟ್ರಗಳ ಗುಂಪು G 20 (ಗ್ರೂಪ್ ಆಫ್ ಟ್ವೆಂಟಿ) ಅಸ್ತಿತ್ವಕ್ಕೆ ಬಂದಿತು. ಈ ಸಂಘಟನೆಯ ಮೂಲಕ ಅಂತರರಾಷ್ಟ್ರೀಯ ಆರ್ಥಿಕ ಸ್ಥಿರತೆಯನ್ನು ಚರ್ಚಿಸಲು ಹಾಗು ಅಭಿವೃದ್ಧಿ ಸಾಧಿಸುವ ಒಂದು ವಿಶ್ವ ಗುಂಪಾಗಿ ಕಲ್ಪಿಸಲಾಗಿತ್ತು. G20 ಸದಸ್ಯ ರಾಷ್ಟ್ರಗಳು : ಅರ್ಜೆಂಟೀನಾ, ಆಸ್ಟ್ರೇಲಿಯಾ, ಬ್ರೆಜಿಲ್, ಕೆನಡಾ, ಚೀನಾ, ಫ್ರಾನ್ಸ್, ಜರ್ಮನಿ, ಭಾರತ, ಇಂಡೋನೇಷ್ಯಾ, ಇಟಲಿ, ಜಪಾನ್, ಕೊರಿಯಾ ಗಣರಾಜ್ಯ, ಮೆಕ್ಸಿಕೊ, ರಷ್ಯಾ, ಸೌದಿ ಅರೇಬಿಯಾ, ದಕ್ಷಿಣ ಆಫ್ರಿಕಾ, ಟರ್ಕಿ, ಯುನೈಟೆಡ್ ಕಿಂಗ್‌ಡಮ್, ಯುನೈಟೆಡ್ ಸ್ಟೇಟ್ಸ್ , ಮತ್ತು ಯುರೋಪಿಯನ್ ಯೂನಿಯನ್.

### ಚಂದ್ರನ ಮೇಲ್ಮೈ ಮೇಲಿನ ಕಲ್ಲು, ಮಣ್ಣಿನ ಸಂಶೋಧನೆಗೆ ನೌಕೆ ಉಡಾಯಿಸಿದ ಚೀನಾ



ಬೀಜಿಂಗ್: ಚಂದ್ರನ ಮೇಲ್ಮೈಯಿಂದ ಕಲ್ಲು ಹಾಗು ಮಣ್ಣಿನ ಸಂಗ್ರಹಿಸುವ ಸಲುವಾಗಿ ನೆರೆಯ ಚೀನಾ ರಾಷ್ಟ್ರವು ಮಾನವರಹಿತ ನೌಕೆಯೊಂದನ್ನು ಉಡಾವಣೆ ಮಾಡಿದೆ.
* ಇನ್ನು 2022 ರೊಳಗಾಗಿ ಬಾಹ್ಯಾಕಾಶ ಕೇಂದ್ರವನ್ನು ನಿರ್ಮಿಸುವ ಯೋಜನೆಯನ್ನು ಹೊಂದಿರುವ ಚೀನಾ ರಾಷ್ಟ್ರವು ಮಾನವಸಹಿತ ಚಂದ್ರಯಾನ ಮಿಷನ್ ಗೆ ಯೋಜನೆಯನ್ನು ರೂಪಿಸಿದೆ.
* ಚಂದ್ರನ ಮೇಲ್ಮೈಯಲ್ಲಿ ಜ್ವಾಲಾಮುಖಿ, ಚಂದ್ರನ ರಚನೆಯನ್ನು ಸೇರಿ ಹಲವು ವಿಷಯಗಳ ಅಧ್ಯಯನಕ್ಕಾಗಿ 'ಚಾಂಗ್‌ಇ 5 ಪ್ರೊಬ್' ನೌಕೆಯನ್ನು ಉದಯಿಸಲಾಗಿದ್ದು, ಅಂದಾಜು 2 kg ಗಳಷ್ಟು ಕಲ್ಲು ಮಣ್ಣಿನ ಸಂಗ್ರಹದೊಂದಿಗೆ ಡಿಸೆಂಬರ್‌ನಲ್ಲಿ ಚೀನಾದ ಮಂಗೋಲಿಯಾ ಪ್ರದೇಶಕ್ಕೆ ಮರಳುವ ಸಾಧ್ಯತೆಯಿದೆ.

## ಸಿಟ್ ಮೆಕ್ಸ್ 2020 = ಅರಬ್ಬೀ ಸಮುದ್ರದಲ್ಲಿ ನೌಕಾಪಡೆಗಳ ಸಮರಾಭ್ಯಾಸ




ನವದೆಹಲಿ : ಭಾರತದ ಅರಬ್ಬೀ ಸಮುದ್ರದಲ್ಲಿ ಭಾರತ, ಸಿಂಗಾಪುರ್ ಮತ್ತು ಥೈಲ್ಯಾಂಡ್ ರಾಷ್ಟ್ರಗಳ ಎರಡು ದಿನಗಳ ನೌಕಾ ಸಮಾರಾಭ್ಯಾಸ ಸಿಟ್ ಮೆಕ್ಸ್ 2020 ನಡೆಯುತ್ತಿದೆ. ತ್ರಿ ರಾಷ್ಟ್ರಗಳ ನೌಕಾಪಡೆಗಳು ಈ ಸಮರಾಭ್ಯಾಸದಲ್ಲಿ ಪಾಲ್ಗೊಂಡಿವೆ. ಈ ಸಮರಾಭ್ಯಾಸದಲ್ಲಿ ಭಾರತ, ಸಿಂಗಾಪುರ್ ಮತ್ತು ಥೈಲ್ಯಾಂಡ್‌ನ ಸಮರ ನೌಕೆಗಳು, ಜಲಾಂತರ್ಗಾಮಿಗಳು ಸೇರಿ ನೌಕಾ ಪಡೆಯ ವಿವಿಧ ಯುದ್ಧ ಸಾಮಗ್ರಿಗಳ ತಾಲೀಮಿನಲ್ಲಿ ತ್ರಿ ರಾಷ್ಟ್ರಗಳು ಪಾಲ್ಗೊಂಡಿವೆ.

## ಕರ್ನಾಟಕ ರಾಜ್ಯದಲ್ಲಿ ಮತ್ಸ್ಯ ಸಂಪದಯೋಜನೆಗೆ ಚಾಲನೆ



ಬೆಂಗಳೂರು: ವಿಶ್ವ ಮೀನುಗಾರಿಕಾ ದಿನಾಚರಣೆ ಅಂಗವಾಗಿ ರಾಜ್ಯದಲ್ಲಿಂದು ಮತ್ಸ್ಯ ಸಂಪದ ಯೋಜನೆಗೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಚಾಲನೆ ನೀಡಿದರು ಏನಿದು ಯೋಜನೆ ? ಭಾರತ ಸರ್ಕಾರವು ಆರಂಭಿಸಿದ ಪ್ರಧಾನ್ ಮಂತ್ರಿ ಮತ್ಸ್ಯ ಸಂಪದ ಯೋಜನೆ ಮೀನುಗಾರಿಕೆ ಕ್ಷೇತ್ರದಲ್ಲಿ ಮೂಲಸೌಕರ್ಯದ ಕೊರತೆಯನ್ನು ನೀಗಿಸಲು ಆರಂಭಿಸಿದ ಒಂದು ಕಾರ್ಯಕ್ರಮವಾಗಿದೆ. ಈ ಯೋಜನೆಯನ್ನು 2019–20ರ ಕೇಂದ್ರ ಬಜೆಟನಲ್ಲಿ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಘೋಷಿಸಿದ್ದರು. ನೀಲಿ ಕ್ರಾಂತಿ ಅನುಷ್ಠಾನಗೊಳಿಸುವ ಮೂಲಕ ಮೀನುಗಳ ಉತ್ಪಾದನೆ ಮತ್ತು ಸಂಸ್ಕರಣೆಯಲ್ಲಿ ಭಾರತವನ್ನು ಮೊದಲ ಸ್ಥಾನದಲ್ಲಿಡಲು ಈ ಯೋಜನೆ ಸಹಾಯ ಮಾಡಲಿದ್ದು, ಯೋಜನೆಯು 2022–23ರ ವೇಳೆಗೆ ರೈತರ ಆದಾಯವನ್ನು ದ್ವಿಗುಣಗೊಳಿಸುವ ಮುಖ್ಯ ಗುರಿಯನ್ನು ಹೊಂದಿದೆ.

## ಜಾಗತಿಕ ಭ್ರಷ್ಟಾಚಾರ ಸೂಚ್ಯಂಕ ವರದಿ ಪ್ರಕಟ: ಭಾರತಕ್ಕೆ 77ನೇ ಸ್ಥಾನ




ಲಂಚ ನಿಗ್ರಹ ಪ್ರಮಾಣ ಸಂಯೋಜನಾ ಸಂಸ್ಥೆಯಾಗಿರುವ ಟ್ರೇಸ್ ಇತ್ತೀಚಿಗೆ ವಿಶ್ವದ 194 ದೇಶಗಳ 2020ರ ಸಾಲಿನ ಭ್ರಷ್ಟಾಚಾರದ ಜಾಗತಿಕ ಪಟ್ಟಿಯನ್ನು ಬಿಡುಗಡೆ ಮಾಡಿದೆ.

* ಈ ವರದಿಯ ಪ್ರಕಾರ, ಭಾರತವು ಪಟ್ಟಿಯಲ್ಲಿ 77ನೇ ಸ್ಥಾನ ಪಡೆದಿದ್ದು, ಕಳೆದ ವರ್ಷ 78ನೇ ಸ್ಥಾನ ಪಡೆದಿತ್ತು.
* ಉತ್ತರ ಕೊರಿಯಾ, ತುರ್ಕಮೆನಿಸ್ತಾನ್, ದಕ್ಷಿಣ ಸುಡಾನ್, ವೆನಿಜುವೆಲ, ಎರಿಟೆರಾ ಸೇರಿ ಹಲವು ರಾಷ್ಟ್ರಗಳಲ್ಲಿ ಲಂಚ ಪ್ರಮಾಣ ಅತಿ ಹೆಚ್ಚಾಗಿದೆ.
* ಇನ್ನು, ಲಂಚದ ಪ್ರಮಾಣ ಕಡಿಮೆ ಇರುವ ದೇಶಗಳ ಪೈಕಿ ಡೆನ್ಮಾರ್ಕ್, ನಾರ್ವೇ, ಫಿನ್ ಲ್ಯಾಂಡ್, ಸ್ವೀಡನ್, ನ್ಯೂಜಿಲ್ಯಾಂಡ್ ದೇಶಗಳು ಮುಂಚೂಣಿಯಲ್ಲಿರುವದಾಗಿ ಟ್ರೇಸ್ ವರದಿ ಮಾಡಿದೆ.
* 2019ರಲ್ಲಿ ಭಾರತವು 48 ಅಂಕಗಳೊಂದಿಗೆ 78ನೇ ಸ್ಥಾನ ಪಡೆದಿತ್ತು, ಮತ್ತು 2020 ನೇ ಸಾಲಿನಲ್ಲಿ 45 ಅಂಕಗಳೊಂದಿಗೆ 77 ನೇ ಸ್ಥಾನದಲ್ಲಿದೆ.
* ವರದಿಯನ್ನು ನಾಲ್ಕು ಅಂಶಗಳನ್ನು ಆಧರಿಸಿ ಬಿಡುಗಡೆ ಮಾಡಲಾಗಿದ್ದು, ಅವುಗಳು ಈ ಕೆಳಗಿನಂತಿವೆ ಸರಕಾರದೊಂದಿಗಿನ ವ್ಯಾವಹಾರಿಕ ಸಂವಹನ ಲಂಚ ವಿರೋಧಿ ತಡೆಗಟ್ಟುವಿಕೆ ಮತ್ತು ಜಾರಿ ಸರಕಾರ ಮತ್ತು ನಾಗರಿಕ ಸೇವೆಯಲ್ಲಿ ಪಾರದರ್ಶಕತೆ ಮತ್ತು ನಾಗರಿಕ ಸಮಾಜದ ಮೇಲ್ವಿಚಾರಣೆಯ ಸಾಮರ್ಥ್ಯ, ಮಾಧ್ಯಮಗಳ ಪಾತ್ರ

# 25-11-2020

## ಭಾರತದ 'ಏರ್‌ಫೋರ್ಸ್ ಒನ್ ಬೋಯಿಂಗ್ 777' ಚಾಲನೆ ನೀಡಿದ ರಾಷ್ಟ್ರಪತಿ



ನವದೆಹಲಿ: ಭಾರತದ ರಾಷ್ಟ್ರಪತಿ ರಾಮನಾಥ್ ಕೋವಿಂದ್ ಹಾಗೂ ಅವರ ಪತ್ನಿ ಇತ್ತೀಚಿಗೆ 'ಏರ್‌ಫೋರ್ಸ್ ಒನ್' ಎಂದೇ ಖ್ಯಾತಿ ಪಡೆದಿರುವ ಬೋಯಿಂಗ್ 777 ಅತ್ಯಾಧುನಿಕ ವಿಮಾನವನ್ನು ಉದ್ಘಾಟಿಸಿದರು. ಹಾಗು ಉದ್ಘಾಟನಾ ಪ್ರಯಾಣವಾಗಿ ನವದೆಹಲಿಯಿಂದ ತಮಿಳುನಾಡಿನ ಚೆನ್ನೈಗೆ ಮೊದಲ ಪ್ರಯಾಣ ಬೆಳೆಸಿದರು. ಬೋಯಿಂಗ್ 777 ವಿಶೇಷತೆ : ಭಾರತದ ರಾಷ್ಟ್ರಪತಿ, ಉಪ ರಾಷ್ಟ್ರಪತಿ ಹಾಗೂ ಪ್ರಧಾನಮಂತ್ರಿ ಪ್ರಯಾಣಕ್ಕಾಗಿ ಏರ್‌ಫೋರ್ಸ್ ಒನ್ ಮಾದರಿಯ ಅತ್ಯಾಧುನಿಕ ವಿಮಾನ ಇದಾಗಿದ್ದು, ಈ ವಿಮಾನದಲ್ಲಿ ಕಚೇರಿ ಸ್ಥಳ, ಸಭೆ ನಡೆಸಲು ಪ್ರತ್ಯೇಕ ಕೊಠಡಿ ಹಾಗೂ ಸಂವಹನ ಪ್ರಕ್ರಿಯೆಗಾಗಿ ಅತ್ಯಾಧುನಿಕ ವ್ಯವಸ್ಥೆ ಒಳಗೊಂಡಿದೆ. ಇನ್ನು ತುರ್ತು ಸಂದರ್ಭಗಳಲ್ಲಿ ಪ್ರತಿದಾಳಿ ಉಪಕರಣಗಳು, ಸಮಗ್ರ ಎಲೆಕ್ಟ್ರಾನಿಕ್ ರಕ್ಷಣಾ ಯುದ್ಧೋಪಕರಣ, ಕ್ಷಿಪಣಿ ದಾಳಿಯನ್ನ ತಡೆಗಟ್ಟುವ ಸಾಮರ್ಥ್ಯ ಸೌಲಭ್ಯವನ್ನು ಹೊಂದಿದೆ. ಇವುಗಳ ಇನ್ನು ಹಲವು ಅತ್ಯಾಧುನಿಕ ಸೌಲಭ್ಯಗಳನ್ನು ಈ ವಿಮಾನ ಹೊಂದಿದ್ದು, ಅಮೇರಿಕಾ ಅಧ್ಯಕ್ಷರ ವಿಮಾನದಷ್ಟೇ ಭದ್ರತೆಯನ್ನು ಈ ವಿಮಾನ ಹೊಂದಿರುವುದು ವಿಶೇಷ.

## ಗದಗ ಬಸ್ ನಿಲ್ದಾಣಕ್ಕೆ ಶ್ರೀ ಪುಟ್ಟರಾಜ ಗವಾಯಿ ಹೆಸರು ನಾಮಕರಣ



ಗದಗ: ಕರ್ನಾಟಕ ರಾಜ್ಯ ಸರ್ಕಾರವು ಗದಗ ಜಿಲ್ಲಾ ಕೇಂದ್ರದ ನವೀಕೃತ ಬಸ್ ನಿಲ್ದಾಣಕ್ಕೆ ಗಾನಯೋಗಿ ಶ್ರೀ ಪಂಡಿತ್ ಪುಟ್ಟರಾಜ ಗವಾಯಿಗಳ ಹೆಸರನ್ನು ನಾಮಕರಣ ಮಾಡಲು ಆದೇಶಿಸಿದೆ. ಗದಗ ಜಿಲ್ಲೆಯಲ್ಲಿರುವ ಶ್ರೀ ಪಂಡಿತ್ ಪುಟ್ಟರಾಜ ಗವಾಯಿ ಮಠದಲ್ಲಿ ನೂರಾರು ವರ್ಷಗಳಿಂದ ಸಾವಿರಾರು ಅಂದ ಮಕ್ಕಳಿಗೆ ಅಕ್ಷರ ದಾಸೋಹ ನಡೆಯುತ್ತಿದ್ದು, ಇವರ ಹೆಸರೇನು ನಗರದ ಬಸ್ ನಿಲ್ದಾಣಕ್ಕಿಡಲು ಸರ್ಕಾರ ಕ್ರಮ ಕೈಗೊಂಡಿದೆ. ಈ ಕುರಿತು ರಾಜ್ಯ ಸಾರಿಗೆ ಸಚಿವರು ಹಾಗೂ ಉಪಮುಖ್ಯಮಂತ್ರಿಗಳು ಆದ ಶ್ರೀ ಲಕ್ಷ್ಮಣ ಸವದಿ ಅವರು ಮಾಧ್ಯಮಗಳಿಗೆ ಮಾಹಿತಿ ನೀಡಿದ್ದಾರೆ.

## 400 ಕಿಮೀ ಗುರಿ ಭೇದಿಸುವ ಬ್ರಹ್ಮೋಸ್ ಭೂ ಕ್ಷಿಪಣಿ ಪರೀಕ್ಷೆ ಯಶಸ್ವಿ



ನವದೆಹಲಿ: ಅಂಡಮಾನ್ ಮತ್ತು ನಿಕೋಬಾರ್ ದ್ವೀಪ ಸಮೂಹದಲ್ಲಿ ನೆಲದಿಂದ ನೆಲಕ್ಕೆ ಹಾರುವ ನೂತನ ಆವೃತ್ತಿಯ ಬ್ರಹ್ಮೋಸ್ ಭೂ ಕ್ಷಿಪಣಿಯ ಯಶಸ್ವೀಯಾಗಿ ಪರೀಕ್ಷೆಗೊಳಪಡಿಸಲಾಯಿತು. ಈ ಮೂಲಕ ಲಡಾಕ್ ಗಡಿಯಲ್ಲಿ ತಂಟೆ ಮುಂದುವರೆಸಿರುವ ನೆರೆಯ ಚೀನಾ ರಾಷ್ಟ್ರಕ್ಕೆ ಭಾರತದ ಸಾಮರ್ಥ್ಯ ಪರಿಚಯಿಸಲಾಯಿತು ಜೊತೆಗೆ ಎಚ್ಚರಿಕೆ ನೀಡಲಾಯಿತು. ಈ ಮೊದಲು ಬ್ರಹ್ಮೋಸ್ ಭೂ ಕ್ಷಿಪಣಿಯ 290 ಕಿ ಮೀ ಸಾಮರ್ಥ್ಯವನ್ನು 400 ಕಿಮೀ ದೂರದವರಗೆ ಹೆಚ್ಚಿಸಲಾಗಿದೆ ಹಾಗೂ ಈ ಪರೀಕ್ಷೆ ಯಶಸ್ವಿಯಾಗಿದೆ.

## ತಮಿಳುನಾಡು, ಪುದುಚೆರಿಗೆ ನಿವಾರ್ ಚಂಡಮಾರುತ ಹೊಡೆತ



ಚನ್ನೈ : ಭಾರತದ ಬಂಗಾಳ ಕೊಲ್ಲಿ ಕರಾವಳಿಯಲ್ಲಿ ಉಂಟಾಗಿರುವ ನಿವಾರ್ ಚಂಡಮಾರುತ ತಮಿಳುನಾಡು ಮತ್ತು ಪುದುಚೆರಿ ಕರಾವಳಿಗೆ ಅಪ್ಪಳಿಸಿದ್ದು, ಸಂಭಾವ್ಯ ಹಾನಿ ತಪ್ಪಿಸಲು ಸ್ಥಳೀಯ ಸರ್ಕಾರಗಳು ಹಲವು ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಂಡಿವೆ. ನಿವಾರ್ ಚಂಡಮಾರುತದ ಪರಿಣಾಮ ತಮಿಳುನಾಡು, ಆಂಧ್ರದ ದಕ್ಷಿಣ ಕರಾವಳಿ, ಪುದುಚೆರಿ ಯಾ ವ್ಯಾಪ್ತಿಯಲ್ಲಿ ನಿರಂತರ ಮಳೆ ಸುರಿಯುತ್ತಿದೆ. ಪುದುಚೆರಿಯಲ್ಲಿ ಮೂರು ದಿನ ನಿಷೇಧಾಜ್ಞೆ, ತಮಿಳುನಾಡಿನಲ್ಲಿ ಸಾರ್ವತ್ರಿಕ ರಜೆ ಘೋಷಿಸಲಾಗಿದೆ.

* ಚಂಡಮಾರುತ ಗಂಟೆಗೆ 145 ಕಿಲೋ ಮೀಟರ್ ವೇಗದಲ್ಲಿ ಅಪ್ಪಳಿಸುವ ಸಾಧ್ಯತೆಯಿದ್ದು, ಚನ್ನೈನ ಆಗ್ನೇಯದಲ್ಲಿ 450 ಕಿಮೀ ದೂರದಲ್ಲಿ ಕೇಂದ್ರೀಕೃತವಾಗಿದೆ.

## 86ನೇ `ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ'ಕ್ಕೆ ದಿನಾಂಕ ನಿಗದಿ



ಬೆಂಗಳೂರು: 86 ನೇ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಹಾವೇರಿಯಲ್ಲಿ ನಡೆಸಲು ಇತ್ತೀಚಿಗಷ್ಟೇ ಘೋಷಿಸಲಾಗಿತ್ತು, ಇದೀಗ 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ದಿನಾಂಕ ನಿಗಧಿಪಡಿಸಲಾಗಿದ್ದು, 2021ರ ಫೆಬ್ರವರಿ 26, 27 ಮತ್ತು 28ರಂದು ದಿನಾಂಕ ನಿಗಧಿ ಪಡಿಸಲಾಗಿದೆ. ಈ ಕುರಿತು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ಮನು ಬಳಗಾರ್ ಮಾಹಿತಿ ನೀಡಿದ್ದಾರೆ.

## ಕಾಂಗ್ರೆಸ್ ಹಿರಿಯ ನಾಯಕ ಅಹ್ಮದ್ ಪಟೇಲ್ ನಿಧನ



ನವದೆಹಲಿ: ರಾಜ್ಯಸಭಾ ಸದಸ್ಯ, ಕಾಂಗ್ರೆಸ್ ಪಕ್ಷದ ಹಿರಿಯ ನಾಯಕ ಅಹ್ಮದ್ ಪಟೇಲ್ ತಮ್ಮ 71 ನೇ ವಯಸ್ಸಿನಲ್ಲಿ ತೀವ್ರ ಅನಾರೋಗ್ಯದ ಕಾರಣ ನಿಧನರಾದರು. ಇವರು ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಖಜಾಂಚಿಯಾಗಿದ್ದರು. ಹಾಗೂ ಸೋನಿಯಾ ಗಾಂಧಿ ಕುಟುಂಬದ ಆಪ್ತರು ಸೋನಿಯಾಗಾಂಧಿ ರಾಜಕೀಯ ಕಾರ್ಯದರ್ಶಿ ಆಗಿದ್ದರು. 1949 ರಲ್ಲಿ ಗುಜರಾತ್ ನಲ್ಲಿ ಜನಿಸಿದ್ದರು, ಲೋಕಸಭೆಗೆ 3 ಬಾರಿ ಆಯ್ಕೆಯಾಗಿದ್ದರು ಹಾಗೂ 5 ಬಾರಿ ರಾಜ್ಯಸಭೆ ಸದಸ್ಯರಾಗಿ ಆಯ್ಕೆಯಾಗಿದ್ದರು.

## 'ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮ'ಕ್ಕೆ ನೂತನ ಅಧ್ಯಕ್ಷರಾಗಿ 'ಬಿ.ಎಸ್.ಪರಮಶಿವಯ್ಯ' ಆಯ್ಕೆ



ಬೆಂಗಳೂರು: ರಾಜ್ಯ ಸರ್ಕಾರವು ಇತ್ತೀಚಿಗಷ್ಟೇ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮನ್ನು ರಚಿಸಿದ್ದು, ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮದ ನೂತನ ಅಧ್ಯಕ್ಷರಾಗಿ ಬಿ.ಎಸ್.ಪರಮಶಿವಯ್ಯ ಅವರನ್ನ ನೇಮಕ ಮಾಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

## ಲವ್ ಜಿಹಾದ್ ನಿಷೇಧಿಸಿ ಸುಗ್ರೀವಾಜ್ಞೆ ಜಾರಿಗೆ ತಂದ ಉತ್ತರಪ್ರದೇಶ ಸರ್ಕಾರ



ಲಕ್ನೋ : ಉತ್ತರಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ನೇತೃತ್ವದ ಸರ್ಕಾರವು ಲವ್ ಜಿಹಾದ್ ಕಾನೂನನ್ನು ಸುಗ್ರೀವಾಜ್ಞೆ ಮೂಲಕ ಜಾರಿಗೊಳಿಸಿರುವುದಾಗಿ ವರದಿಯಾಗಿದೆ. ಇತ್ತೀಚಿಗೆ ಉತ್ತರಪ್ರದೇಶದ ಮುಸ್ಲಿಂ ಯುವಕ ಹಾಗೂ ಹಿಂದೂ ಯುವತಿಯ ಮದುವೆ ವಿಷಯಕ್ಕೆ ಸಂಬಂಧಿಸಿದಂತೆ ಅಲಹಾಬಾದ್ ಹೈಕೋರ್ಟ್ ವೈಯಕ್ತಿಕ ಆಯ್ಕೆಯ ಸ್ವಾತಂತ್ರ್ಯದ ವಿಚಾರದಲ್ಲಿ ಯಾರು ಮಧ್ಯಪ್ರವೇಶಿಸುವಂತಿಲ್ಲ ಎಂದು ನೀಡಿರುವ ತೀರ್ಪು ನೀಡಿದ್ದು. ಇದೆ ವೇಳೆ ಲವ್ ಜಿಹಾದ್ ತಡೆಗಟ್ಟುವ ನಿಟ್ಟಿನಲ್ಲಿ ಶೀಘ್ರದಲ್ಲಿಯೇ ಕಾನೂನು ಜಾರಿಗೊಳಿಸುವುದಾಗಿ ತಿಳಿಸಿದ ಉತ್ತರಪ್ರದೇಶ ಸರ್ಕಾರ, ಲವ್ ಜಿಹಾದ್ ನಿಷೇಧ ಕಾನೂನು ಪ್ರಸ್ತಾಪದ ಅಂಗೀಕಾರಕ್ಕಾಗಿ ಕೇಂದ್ರ ಕಾನೂನು ಸಚಿವಾಲಯಕ್ಕೆ ಕಳುಹಿಸಿತ್ತು. ಈ ನಡುವೆಯೇ ಉತ್ತರಪ್ರದೇಶದ ಸರ್ಕಾರ ಸುಗ್ರೀವಾಜ್ಞೆ ಮೂಲಕ ಲವ್ ಜಿಹಾದ್ ಕಾಯ್ದೆಯನ್ನು ಜಾರಿಗೊಳಿಸಿರುವುದಾಗಿ ತಿಳಿದುಬಂದಿದೆ.

# 26-11-2020

## ಭಾರತೀಯ ವಾಯು ಸೇನೆಗೆ 'ಪ್ರಿಡೇಟರ್ ಡ್ರೋನ್ಸ್' ಸೇರ್ಪಡೆ



ನವದೆಹಲಿ: ಭಾರತೀಯ ಸೇನೆಯು ಹತ್ತು ಹಲವು ಶಸ್ತ್ರಾಸ್ತ್ರಗಳ ಪರೀಕ್ಷಿಸಿ ಸೇನೆಗೆ ನಿಯೋಜನೆಗೊಳಿಸುತ್ತಿದೆ. ಇದೀಗ ಈ ಪಟ್ಟಿಗೆ ನೂತನ ಅಸ್ತ್ರವೊಂದು ಸೇರ್ಪಡೆಗೊಂಡಿದ್ದು, ಭಾರತೀಯ ನೌಕಾಸೇನೆಗೆ ಅಮೆರಿಕಾದ 2 ಪ್ರಿಡೇಟರ್ ಡ್ರೋನ್‌ಗಳು ಸೇರಿಕೊಂಡಿವೆ. ಈ ಡ್ರೋನ್ ಗಳನ್ನೂ ಅಮೇರಿಕಾದಿಂದ ಗುತ್ತಿಗೆ ಆಧಾರದಲ್ಲಿ ಪಡೆಯಲಾಗಿದ್ದು, ಒಟ್ಟು ಒಂದು ವರ್ಷದ ಅವಧಿಗೆ ಇವುಗಳನ್ನು ಪಡೆಯಲಾಗಿದೆ. ಇವುಗಳ ಸತತ 30 ಗಂಟೆಗಳ ಕಾಲ ಹಾರಾಡುವ ಸಾಮರ್ಥ್ಯವನ್ನು ಹೊಂದಿದ್ದು, ಈಗಾಗಲೇ ನೌಕಾಪಡೆಯಲ್ಲಿ ಸೇವೆಗೆ ನಿಯೋಜನೆಗೊಂಡಿವೆ.

## ಕೇಂದ್ರ ಸರ್ಕಾರದಿಂದ ಮತ್ತೆ 43 ಚೀನಿ ಮೊಬೈಲ್ ಆಯಪ್‌ಗಳ ನಿಷೇಧ




ನವದೆಹಲಿ: ಭಾರತದ ಆಂತರಿಕ ಭದ್ರತೆಗೆ ಕಾರಣ ಈಗಾಗಲೇ ಎರಡು ಹಂತದಲ್ಲಿ ಚೀನಿ ಮೊಬೈಲ್ ಅಪ್ಲಿಕೇಶನ್ ಗಳನ್ನೂ ನಿಷೇಧಿಸಿದ ಕೇಂದ್ರ ಸರ್ಕಾರವು ಇದೀಗ ಮತ್ತೆ 43 ಚೀನಿ ಅಯಪ್ ಗಳನ್ನೂ ಮಾಹಿತಿ ತಂತ್ರಜ್ಞಾನ ಕಾಯ್ದೆಯ ಸೆಕ್ಷನ್ 69 ಎ ಅಡಿಯಲ್ಲಿ ನಿಷೇಧಿಸಿ ಆದೇಶಹೊರಡಿಸಿದೆ.

* ನಿಷೇಧಕ್ಕೊಳಗಾದ ಆಯಪ್‌ಗಳಿಂದ ಭಾರತದ ಸಾರ್ವಭೌಮತ್ವ, ಸಮಗ್ರತೆ, ರಕ್ಷಣೆ, ಭದ್ರತೆ ಹಾಗೂ ಸಾರ್ವಜನಿಕ ಸುವ್ಯವಸ್ಥೆಗೆ ತೊಂದರೆಯಾಗಬಹುದಾದ ಕಾರಣ ಈ ಕ್ರಮವನ್ನು ಕೈಗೊಳ್ಳಲಾಗಿದೆ.

## ವಿಶ್ವದ ಶ್ರೀಮಂತ ಪಟ್ಟಿಯಲ್ಲಿ ನಂ.1 ಸ್ಥಾನ ಪಡೆದ ಇಲಾನ್ ಮಸ್ಕ್



ಉದ್ಯಮದ ದೈತ್ಯ ಬಿಲ್ ಗೇಟ್ಸ್ ಅವರನ್ನು ಕೆಳಗಿಳಿಸಿ ಟೆಲ್ಸಾ ಕಂಪನಿಯ ಮುಖ್ಯಸ್ಥ ಇಲಾನ್ ಮಸ್ಕ್ ಮೊದಲಸ್ಥಾನಕ್ಕೇರಿದ್ದಾರೆ ಹಾಗೂ ಬಿಲ್ ಗೇಟ್ಸ್ ಎರಡನೇ ಸ್ಥಾನಕ್ಕಿಳಿದಿದ್ದಾರೆ. ಟೆಲ್ಸಾ ಸಹ ಸಂಸ್ಥಾಪಕ ಇಲಾನ್ ಮಸ್ಕ್ ಅವರ ವಾರ್ಷಿಕ ಆದಾಯ ಇತ್ತೀಚಿಗೆ 100.3 ಶತಕೋಟಿ ಡಾಲರ್ ಏರಿಕೆ ಕಂಡಿದ್ದು, ಇದು ಬಿಲ್ ಗೇಟ್ಸ್ ಅವರ ಆದಾಯಕ್ಕಿಂತ 7.2 ಶತಕೋಟಿ ಡಾಲರ್ ಹೆಚ್ಚಿದ್ದು, ಈ ಮೂಲಕ ಅಗ್ರಸ್ಥಾನ ಪಡೆದುಕೊಂಡಿದ್ದಾರೆ.

## ನೋಯ್ಡಾದಲ್ಲಿನ ಉತ್ಪಾದನಾ ಕೇಂದ್ರದಲ್ಲಿ 5,000 ಕೋಟಿ ರೂ.ಹೂಡಿಕೆ ಮಾಡಿದ ಸ್ಯಾಮ್‌ಸಂಗ್



ನೋಯ್ಡಾ : ಖ್ಯಾತ ಮೊಬೈಲ್ ಹಾಗೂ ಇಲೆಕ್ಟ್ರಾನಿಕ್ ಉತ್ಪನ್ನಗಳ ತಯಾರಕ ಸಂಸ್ಥೆಯಾದ ಸ್ಯಾಮ್‌ಸಂಗ್ ಉತ್ತರ ಪ್ರದೇಶದ ನೋಯ್ಡಾದಲ್ಲಿ ಸ್ಥಾಪಿಸಿರುವ ತನ್ನ ಉತ್ಪಾದನಾ ಕೇಂದ್ರದಲ್ಲಿ ಸುಮಾರು 5,000 ಕೋಟಿ ರೂಪಾಯಿ ಹೂಡಿಕೆ ಮಾಡಲಿರುವುದಾಗಿ ತಿಳಿದುಬಂದಿದೆ. ಕಂಪನಿಯ ಸ್ಮಾರ್ಟ್ ಫೋನ್ ಡಿಸ್ ಪ್ಲೇ ಉತ್ಪಾದನಾ ಕೇಂದ್ರವನ್ನು ಜನವರಿ ಫೆಬ್ರವರಿ 2021 ರ ವೇಳೆಗೆ ಸಿದ್ಧಪಡಿಸಲಿದ್ದು, ಮತ್ತು ಏಪ್ರಿಲ್ 2021 ರ ವೇಳೆಗೆ ವಾಣಿಜ್ಯ ಉತ್ಪಾದನೆಯನ್ನು ಸಾಧಿಸುವ ನಿರೀಕ್ಷೆಯಿದೆ. ಘಟಕವು ತನ್ನ ಕಾರ್ಯಾಚರಣೆಯನ್ನು ಆರಂಭಿಸಿದರೆ, ಸ್ಯಾಮ್ ಸಂಗ್‌ನ ಸ್ಮಾರ್ಟ್‌ಫೋನ್ ಡಿಸ್‌ಪ್ಲೇ ಉತ್ಪಾದನಾ ಸೌಲಭ್ಯವನ್ನು ಹೊಂದಿರುವ ವಿಶ್ವದ ಮೂರನೇ ರಾಷ್ಟ್ರವಾಗಿ ಭಾರತ ಸ್ಥಾನ ಪಡೆಯಲಿದೆ.

* ಸ್ಯಾಮ್‌ಸಂಗ್ ಸಂಸ್ಥೆಯ ಈ ಹೂಡಿಕೆಯಿಂದಾಗಿ ಭಾರತದಲ್ಲಿ ಸುಮಾರು 1,500 ಹೆಚ್ಚುವರು ಉದ್ಯೋಗಗಳನ್ನು ಸೃಷ್ಟಿಸುವ ನಿರೀಕ್ಷೆಯಿದೆ.

# 27-11-2020

## ಕ್ಯಾಲಿಫೋರ್ನಿಯಾ ವಿ.ವಿ.ಯಲ್ಲಿ ಜೈನ ಧರ್ಮ ಅಧ್ಯಯನ ಪೀಠ ಸ್ಥಾಪನೆ




ವಾಷಿಂಗ್ಟನ್ : ಅಮೇರಿಕಾದ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲದಲ್ಲಿ ಇತ್ತೀಚಿಗೆ ಭಾರತೀಯ ಮೂಲಕ ಜೈನಧರ್ಮದ ಅಧ್ಯಯನಕ್ಕಾಗಿ ಹೊಸ ವಿಭಾಗವೊಂದನ್ನು(ಪೀಠ) ಸ್ಥಾಪಿಸಲಾಗಿದೆ. ಈ ನೂತನ ಪೀಠಕ್ಕೆ 'ಭಗವಾನ್ ವಿಮಲನಾಥ್ ದತ್ತಿ ಪೀಠ' ಎಂದು ಹೆಸರಿಡಲಾಗಿದ್ದು, ಇಲ್ಲಿ ಜೈನ ಧರ್ಮ ಕುರಿತ ಅಧ್ಯಯನಕ್ಕಾಗಿ ಪದವಿ ಮತ್ತು ಸ್ನಾತಕೋತ್ತರ ಪದವಿ ಕೋರ್ಸ್‌ಗಳನ್ನು ಸ್ಥಾಪಿಸಲಾಗಿದೆ.
* ಈ ಅಧ್ಯಯನ ಪೀಠ ಸ್ಥಾಪನೆಗಾಗಿ ಹಲವು ಜೈನ ಧರ್ಮಿಯರು ದೇಣಿಗೆ ನೀಡಿದ್ದಾರೆ.

## ನವೆಂಬರ್ 26 : ಭಾರತ ಸಂವಿಧಾನ ದಿನ (Constitution Day of India)




ಪ್ರತೀ ವರ್ಷ ನವೆಂಬರ್ 26 ದಿನದಂದು ಭಾರತದಲ್ಲಿ ಸಂವಿಧಾನ ದಿನ ಎಂದು ಆಚರಿಸಲಾಗುತ್ತಿದ್ದು, ಈ ದಿನವನ್ನು ರಾಷ್ಟ್ರೀಯ ಕಾನೂನು ದಿನ ಅಥವಾ ನ್ಯಾಷನಲ್ ಲಾ ಡೇ ಎಂದೂ ಕರೆಯಲಾಗುತ್ತದೆ. ಭಾರತವು ಸ್ವಾತಂತ್ರ್ಯಾನಂತರ ಆಡಳಿತ ಅನುಕೂಲಕ್ಕಾಗಿ ಸಂವಿಧಾನವನ್ನು ಅಳವಡಿಸಿಕೊಂಡ ದಿನದ ಸ್ಮರಣೆಗಾಗಿ ಪ್ರತಿ ವರ್ಷ ನವೆಂಬರ್ 26 ದಿನವನ್ನ ಸಂವಿಧಾನ ದಿನವನ್ನಾಗಿ ಆಚರಿಸಲಾಗುತ್ತದೆ. ಸಂವಿಧಾನವು 1950 ರ ಜನವರಿ 26ರಂದು ವಾಸ್ತವದಲ್ಲಿ ಜಾರಿಗೆ ಬಂದಿತು. 2015 ಕ್ಕೂ ಮೊದಲು ಈ ದಿನವನ್ನು ಕಾನೂನು ದಿನವನ್ನಾಗಿ ಆಚರಿಸಲಾಗುತ್ತಿತ್ತು. ನಂತರ ಸಂವಿಧಾನ ದಿನ ಎಂದು ಆಚರಣೆ ಶುರುವಾಗಿದೆ.

## ಭಾರತದ ಐಟಿ ಕ್ಷೇತ್ರದ ಪಿತಾಮಹ ಫಕೀರ್ ಚಂದ್ ಕೊಹ್ಲಿ ನಿಧನ



ಮುಂಬೈ : ಭಾರತದ 'ಮಾಹಿತಿ ತಂತ್ರಜ್ಞಾನ ಕ್ಷೇತ್ರದ ಪಿತಾಮಹ' ಎಂದೇ ಹೆಸರಾಗಿದ್ದ IT ಉದ್ಯಮಿ ಫಕೀರ್ ಚಂದ್ ಕೊಹ್ಲಿ ಅವರು ಇತ್ತೀಚಿಗೆ ಹೃದಯಾಘಾತದಿಂದ ತಮ್ಮ 96 ನೇ ವಯಸ್ಸಿನಲ್ಲಿ ಕೊನೆಯುಸಿರೆಳೆದರು. ಭಾರತದ ಪ್ರಮುಖ ಐಟಿ ಕಂಪನಿಗಳಲೊಂದಾದ TCS(Tata Consultancy Services) ಸಂಸ್ಥೆಯ ಸಹ ಸಂಸ್ಥಾಪಕರಾಗಿದ್ದರು. 1951ರಲ್ಲಿ ಟಾಟಾ ಎಲೆಕ್ಟ್ರಿಕ್ ಸಂಸ್ಥೆ ಸೇರಿದ ಇವರು 1968ರಲ್ಲಿ ಎಫ್.ಸಿ.ಕೊಹ್ಲಿಯವರನ್ನು ಟಿಸಿಎಸ್ ಎಂಬ ಸ್ಟಾರ್ಟ್‌ಅಪ್ ಕಂಪನಿ ಆರಂಭಿಸಲು ಆಯ್ಕೆ ಮಾಡಿಕೊಳ್ಳಲಾಯಿತು.
* ಪ್ರಸ್ತುತ ಟಿಸಿಎಸ್ ಇಂದು ವಿಶ್ವದ ಮೂರನೇ ಅತಿದೊಡ್ಡ ಐಟಿ ಸೇವಾ ಕಂಪನಿಯಾಗಿ ಮುನ್ನಡೆಯುತ್ತಿದ್ದು, ಟಾಟಾ ಸಮೂಹದ ಒಟ್ಟು ಲಾಭದ ಶೇಕಡ 70ರಷ್ಟು ಕೊಡುಗೆ ಈ ಕಂಪನಿ ನೀಡುತ್ತಿದೆ.

## ಅಸ್ಸಾಂ ಮಾಜಿ ಸಿಎಂ ತರುಣ್ ಗೋಗಯ್ ನಿಧನ



ಗುವಾಹತಿ: ಅಸ್ಸಾಂ ನ ಮಾಜಿ ಮುಖ್ಯಮಂತ್ರಿ ತರುಣ್ ಗೋಗಯ್ ಅವರ ಅಂತ್ಯ ಕ್ರಿಯೆಯನ್ನು ಗುರುವಾರ ಸಕಲ ಸರ್ಕಾರಿ ಗೌರವವಗಳೊಂದಿಗೆ ಗುವಾಹತಿಯ ನಭಗ್ರಹ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು. ಇವರು 2001 ರಿಂದ 2016 ರ ವರೆಗೆ ಒಟ್ಟು 15 ವರ್ಷಗಳ ಕಾಲ ಅಸ್ಸಾಂ ರಾಜ್ಯದ ಮುಖ್ಯಮಂತ್ರಿಯಾಗಿ ಸೇವೆಸಲ್ಲಿಸಿದಲ್ಲದೆ ಅಸ್ಸಾಂ ರಾಜ್ಯದ ಅತಿ ದೀರ್ಘ ಕಾಲದ ಮುಖ್ಯಮಂತ್ರಿಯಾಗಿ ಹೆಗ್ಗಳಿಕೆ ಹೊಂದಿದ್ದಾರೆ. ಇವರು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಸದಸ್ಯರಾಗಿದ್ದು, ಪಕ್ಷವನ್ನು ಸತತ ಮೂರು ಚುನಾವಣಾ ವಿಜಯಗಳತ್ತ ಮುನ್ನಡೆಸಿದರು. ಮತ್ತು ಅಸ್ಸಾಂ ರಾಜ್ಯದ ಹಣಕಾಸಿನ

ಸ್ಥಿತಿಯನ್ನು ಸುಧಾರಿಸುವುದರ ಜೊತೆಗೆ ಉಗ್ರಗಾಮಿ ದಂಗೆಯನ್ನು ಕೊನೆಗೊಳಿಸಿದ ಮತ್ತು ಹಿಂಸಾಚಾರವನ್ನು ತಗ್ಗಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ.

# 28-11-2020

## ಬಿಹಾರದಲ್ಲಿ ಖೈದಿಗಳಿಗಾಗಿ ಜೈಲಿನಲ್ಲೇ ಎಟಿಎಂಆರಂಭ



ಇದೆ ಮೊದಲ ಬಾರಿಗೆ ಬಿಹಾರ ರಾಜ್ಯದ ಪೂರ್ನಿಯಾದಲ್ಲಿರುವ ಕೇಂದ್ರ ಕಾರಾಗೃಹದಲ್ಲಿ ಖೈದಿಗಳಿಗಾಗಿ ಎಟಿಎಂ ವ್ಯವಸ್ಥೆಯನ್ನು ಆರಂಭ ಮಾಡಿಕೊಡಲಾಗುತ್ತಿದೆ. ಬಿಹಾರದ ಕೇಂದ್ರ ಕಾರಾಗೃಹದಲ್ಲಿರುವ ಪ್ರಸ್ತುತ 750 ಖೈದಿಗಳಿದ್ದು, ಈ ಪೈಕಿ 600 ಜನ ಕೈದಿಗಳು ಬ್ಯಾಂಕ್ ಖಾತೆಗಳನ್ನು ಹೊಂದಿದ್ದು, ಇವರಲ್ಲಿ 400 ಜನರಿಗೆ ಎಟಿಎಂ ಕಾರ್ಡ್ ವಿತರಿಸಲಾಗಿದೆ. ಈ ಮೂಲಕ ಕೈದಿಗಳ ಪ್ರತಿನಿತ್ಯ ಮಾಡುವ ಎಂಟು ಗಂಟೆಗಳ ಕೆಲಸದ ಸಂಬಳವಾದ 52 103 ರೂ.ಗಳನ್ನು ಇವರ ಖಾತೆಗೆ ಜಮಾಮಾಡಲಾಗುವದು.

## ವಿಜಯನಗರ ಜಿಲ್ಲೆಗೆ ರಾಜ್ಯ ಸಚಿವ ಸಂಪುಟ ಅನುಮೋದನೆ : ಹೊಸಪೇಟೆ ಜಿಲ್ಲಾ ಕೇಂದ್ರ




ಬೆಂಗಳೂರು : ವಿಜಯನಗರ ನೂತನ ಜಿಲ್ಲೆಗೆ ರಾಜ್ಯ ಸಚಿವ ಸಂಪುಟವು ಅನುಮೋದನೆ ನೀಡಿದ್ದು, ಹೊಸಪೇಟೆಯನ್ನು ಜಿಲ್ಲಾಕೇಂದ್ರ ಹಾಗು ಒಟ್ಟು ಆರು ತಾಲೂಕುಗಳನ್ನು ಸೇರ್ಪಡೆ ಮಾಡಲು ರಾಜ್ಯ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಗಿದೆ. ಪ್ರಸ್ತುತ ಬಳ್ಳಾರಿ ಜಿಲ್ಲೆಯಲ್ಲಿದ್ದ ಹೊಸಪೇಟೆ, ಹರಪನಹಳ್ಳಿ, ಹೂವಿನ ಹಡಗಲಿ, ಹಗರಿ ಬೊಮ್ಮನಹಳ್ಳಿ, ಕೊಟ್ಟೂರು, ಕೂಡ್ಲಿಗಿ ತಾಲೂಕುಗಳನ್ನು ನೂತನ ಜಿಲ್ಲೆ ವಿಜಯನಗರಕ್ಕೆ ಸೇರ್ಪಡೆ ಮಾಡಲಾಗುವದು. ಸದ್ಯ ವಿಜಯನಗರ ಕರ್ನಾಟಕದ 31ನೇ ಜಿಲ್ಲೆಯಾಗಿ ರಚನೆಯಾಗಿದೆ.

# 29-11-2020

## ನರೇಂದ್ರ ಮೋದಿ ಬ್ರಿಟನ್ ಪ್ರಧಾನಿ ಬೋರಿಸ್ ಜಾನ್ಸನ್ ಮಾತುಕತೆ



ಭಾರತದ ಪ್ರಧಾನಿ ನರೇಂದ್ರ ಮೋದಿಯವರು ಬ್ರಿಟನ್ ಪ್ರಧಾನಿ ಬೋರಿಸ್ ಜಾನ್ಸನ್ ಅವರೊಂದಿಗೆ ಇತ್ತೀಚಿಗೆ ದೂರವಾಣಿ ಮೂಲಕ ಮಾತುಕತೆ ನಡೆಸಿದರು. ಉಭಯ ನಾಯಕರುಗಳ ಈ ಮಾತುಕತೆಯ ವೇಳೆ ಮುಂದಿನ ಹತ್ತು ವರ್ಷಗಳಲ್ಲಿ ಉಭಯ ದೇಶಗಳ ದ್ವಿಪಕ್ಷೀಯ ಸಂಬಂಧ ಗಟ್ಟಿಗೊಳಿಸುವ ಕುರಿತು ಮಾತುಕತೆ ನಡೆಸಿದರು. ಹವಾಮಾನ ವೈಪರೀತ್ಯ ಮತ್ತು ಆರೋಗ್ಯ ವಲಯ ಸೇರಿದಂತೆ ಬ್ರಿಟನ್ ಮತ್ತು ಭಾರತ ನಡುವಿನ ಸಂಬಂಧವನ್ನು ತೀವ್ರಗೊಳಿಸುವ ಮತ್ತು ಬಲಪಡಿಸಲು 2021ರ ವರ್ಷವನ್ನು ತಳಹದಿಯನ್ನಾಗಿ ಬಳಸಿಕೊಳ್ಳುವುದು ಈ ಮಾತುಕತೆಯ ಮುಖ್ಯ ಅಂಶವಾಗಿತ್ತು. ಬ್ರಿಟನ್ ದೇಶವು ಯುರೋಪಿಯನ್ ಒಕ್ಕೂಟದಿಂದ 2021ರ ಜನವರಿ 1ರಿಂದ ಸಂಪೂರ್ಣವಾಗಿ ಸ್ವಾತಂತ್ರ್ಯ ಪಡೆದು ಹೊರಬರಲಿದ್ದು, ಮುಖ್ಯವಾಗಿ ಭಾರತದೊಂದಿಗೆ ಮುಕ್ತ ವ್ಯಾಪಾರ ಒಪ್ಪಂದ ಹೊಂದಲು ಬಯಸುತ್ತಿದೆ.

## ಶ್ರೀಲಂಕಾ, ಭಾರತ ಮತ್ತು ಮಾಲ್ಡೀವ್ಸ್ ಗಳ ಮಧ್ಯ ತ್ರಿಪಕ್ಷೀಯ ಮಾತುಕತೆ



ಇತ್ತೀಚಿಗೆ ರಕ್ಷಣೆ ಕುರಿತಂತೆ ಹಿಂದೂ ಮಹಾಸಾಗರದಲ್ಲಿ ಶ್ರೀಲಂಕಾ ರಾಷ್ಟ್ರವು ಭಾರತ, ಮಾಲ್ಡೀವ್ಸ್ ಗಳ ಸಹಯೋಗದಲ್ಲಿ ನಾಲ್ಕನೆ ರಾಷ್ಟ್ರೀಯ

ಭದ್ರತಾ ಸಲಹೆಗಾರರ ತ್ರಿಪಕ್ಷೀಯ ಮಾತುಕತೆ ಸಭೆಯನ್ನು ಆಯೋಜಿಸಿತ್ತು. ಈ ಸಭೆ ಇಂದ ಕಡಲ ತೀರದ ರಕ್ಷಣೆ, ಪರಿಸರ ಸಂರಕ್ಷಣೆ, ಸಮುದ್ರದ ಮೂಲಕ ಮಾದಕ ದ್ರವ್ಯ ಕಳ್ಳ ಸಾಗಾಣಿಕೆ ತಡೆಗಟ್ಟುವುದು ಸೇರಿದಂತೆ ಹಲವಾರು ಮಹತ್ವದ ಒಪ್ಪಂದಗಳಿಗೆ ಸಹಿ ಹಾಕಲಾಗಿದೆ. ಭಾರತ, ಶ್ರೀಲಂಕಾ ಮತ್ತು ಮಾಲ್ದೀವ್ಸ್ ಒಳನಾಡು, ಕಡಲ ತೀರದ ಸುರಕ್ಷತೆ ನಡುವಣ ತ್ರಿಪಕ್ಷೀಯ ಮಾತುಕತೆಯ ಭಾಗವಾಗಿ ದೋವಲ್ ಮತ್ತು ಮಾಲ್ದೀವ್ಸ್ ನ ದಿದಿ ಅವರ ನಡುವೆ ಸಂವಾದ ನಡೆಯಿತು. ಈ ಸಂವಾದದಲ್ಲಿ ಚೀನಾ ತನ್ನ ಪ್ರಭಾವ ಹೆಚ್ಚಿಸಿಕೊಳ್ಳಲು ಇಂಡೋ ಪೆಸಿಫಿಕ್ ಪ್ರಾಂತ್ಯದಲ್ಲಿ ಹವಣಿಸುತ್ತಿರುವ ಸಂದರ್ಭದಲ್ಲೇ ಮಾಲ್ದೀವ್ಸ್ ದ್ವೀಪ ರಾಷ್ಟ್ರದೊಂದಿಗೆ ಮಹತ್ವದ ಒಪ್ಪಂದಕ್ಕೆ ಭಾರತ ಸಹಿ ಹಾಕಿರುವುದು ಉತ್ತಮ ಬೆಳವಣಿಗೆಯಾಗಿದೆ.

* ಈ ಸಭೆಯು ಕಳೆದ ಬಾರಿ 2014ರಲ್ಲಿ ಸಭೆಯು ನವದೆಹಲಿಯಲ್ಲಿ ನಡೆದಿತ್ತು, ಆರು ವರ್ಷಗಳ ನಂತರ ಈ ಸಭೆ ನಡೆಯುತ್ತಿದೆ.

## ಲಡಾಖ್‌ನ ಪ್ರದೇಶದಲ್ಲಿ ಮೆರ್ರೈನ್ ಕಮಾಂಡೋ ನಿಯೋಜಿಸಿದ ಭಾರತೀಯ ಸೇನೆ



ಭಾರತ ಚೀನಾ ಗಡಿ ವಿವಾದದ ಹಿನ್ನಲೆ ಭಾರತೀಯ ಸೇನೆಯು ನೌಕಾಪಡೆಯ ಮೆರ್ರೈನ್ ಕಮಾಂಡೋಗಳನ್ನು (ಮಾರ್ಕೋಸ್) ಪೂರ್ವ ಲಡಾಖ್‌ನ ಪಾಂಗಾಂಗ್ ಸರೋವರ ಪ್ರದೇಶದಲ್ಲಿ ಕಾರ್ಯಾಚರಣೆಗಾಗಿ ನಿಯೋಜಿಸಲಾಗಿದೆ. ಸರೋವರದಲ್ಲಿ ಕಾರ್ಯಾಚರಣೆಗಾಗಿ ಹೊಸ ದೋಣಿಗಳನ್ನು ನೌಕಾಪಡೆಯ ಕಮಾಂಡೋಗಳು ಶೀಘ್ರದಲ್ಲೇ ಪಡೆಯಲಿದ್ದಾರೆ. ಇತ್ತೀಚಿನ ಬೆಳವಣಿಗೆಯಲ್ಲಿ ಭಾರತ ಮತ್ತು ಚೀನಾ ಪಡೆಗಳು ಸಂಘರ್ಷದಲ್ಲಿ ತೊಡಗಿದ್ದ ಕಾರಣ ಪಾಂಗಾಂಗ್ ಸರೋವರ ಪ್ರದೇಶದಲ್ಲಿ 'ಮಾರ್ಕೋಸ್ ಪಡೆ' ಯನ್ನು ಭಾರತೀಯ ನೌಕಾಪಡೆಯ ನಿಯೋಜಿಸಲಾಗಿದೆ ಎಂದು ತಿಳಿಸಿವೆ.

## ಭಾರತದ ಕ್ರಿಕೆಟ್ ಸ್ಟೇಡಿಯಂವೊಂದಕ್ಕೆ ಫುಟ್‌ಬಾಲ್ ದಿಗ್ಗಜ ಡೀಗೋ ಮರಡೋನಾ ಹೆಸರು



ಇತ್ತೀಚಿಗೆ ನಿಧನರಾದ ಅರ್ಜೆಂಟೀನಾದ ವಿಶ್ವ ಫುಟ್ ಬಾಲ್ ದಿಗ್ಗಜ ಡೀಗೋ ಮರಡೋನಾ ಮೂರು ಬಾರಿ (2007, 2012, 2017) ಭಾರತಕ್ಕೆ ಭೇಟಿ ನೀಡಿದ್ದರು. ಅವರ ಮೊದಲ ಭೇಟಿಯಲ್ಲಿ 2007ರಲ್ಲಿ ಕೋಲ್ಕತಕ್ಕೆ ಆಗಮಿಸಿದ್ದರು. ಈ ಭೇಟಿಯ ಸವಿ ನೆನಪಿಗಾಗಿ ಹಾಗು ವಿಶ್ವ ಫುಟ್ ಬಾಲ್ ದಿಗ್ಗಜ ಡೀಗೋ ಮರಡೋನಾ ಅವರಿಗೆ ಗೌರವ ಸಲ್ಲಿಸುವ ಸಲುವಾಗಿ ಈ ಸ್ಟೇಡಿಯಂಗೆ 'ಡೀಗೋ ಮರಡೋನಾ ಆದಿತ್ಯ ಸ್ಕೂಲ್ ಆಫ್ ಸ್ಪೋರ್ಟ್ಸ್ ಕ್ರಿಕೆಟ್ ಸ್ಟೇಡಿಯಂ' ಎಂದು ಮರುನಾಮಕರಣ ಮಾಡಲು ನಿರ್ಧರಿಸಲಾಗಿದೆ.

* ಮರಡೋನಾರವರು 2007ರ ಡಿಸೆಂಬರ್ 12 ರಂದು ಈ ಸ್ಟೇಡಿಯಂನಲ್ಲಿ ಪ್ರದರ್ಶನ ಪಂದ್ಯವಾಡಿದ್ದರು.
* ಮರಡೋನಾ ನಾಯಕತ್ವದಲ್ಲಿ ಅರ್ಜೆಂಟೀನಾ ಫುಟ್ ಬಾಲ್ ತಂಡವು 1986 ರಲ್ಲಿ ಫಿಫಾ ವಿಶ್ವಕಪ್ ಜಯಿಸಿತ್ತು.

## ಅಫ್ಘಾನಿಸ್ತಾನದಲ್ಲಿ ಶಾಹೂತ್ ಅಣೆಕಟ್ಟು ನಿರ್ಮಿಸಲಿರುವ ಭಾರತ



ಕೇಂದ್ರ ವಿದೇಶಾಂಗ ಸಚಿವರಾದ ಶ್ರೀ ಎಸ್ ಜೈಶಂಕರ್ ಇತ್ತೀಚೆಗೆ ಜಿನೀವಾ ದಾನಿಗಳ ಸಮಾವೇಶದಲ್ಲಿ ಭಾಗವಹಿಸಿದ್ದರು, ಈ ವೇಳೆ ಅವರು ಅಫ್ಘಾನಿಸ್ತಾನದ ಕಾಬೂಲ್ ನದಿಯ ಉಪನದಿಯಾದ ಮೈದಾನ್ ನದಿಗೆ ಅಡ್ಡಲಾಗಿ ಶಾಹೂತ್ ಅಣೆಕಟ್ಟು ನಿರ್ಮಿಸಲು ಭಾರತ ಸಹಾಯ ಹಸ್ತ ನೀಡುವ ಕುರಿತು ಘೋಷಿಸಿದ್ದಾರೆ.

* ಕಾಬೂಲ್ ನಗರದಲ್ಲಿ ಸುಮಾರು 2 ಮಿಲಿಯನ್ ಜನರಿಗೆ ಕುಡಿಯುವ ನೀರನ್ನು ಪೂರೈಸಲಿದೆ. ಅಣೆಕಟ್ಟು ಸುಮಾರು 10,000 ಹೆಕ್ಟೇರ್ ಕೃಷಿ ಭೂಮಿಗೆ ನೀರಾವರಿ ಸೌಲಭ್ಯವನ್ನು ಒದಗಿಸಲಿದೆ.
* ಈ ಮೊದಲು 2016 ರಲ್ಲಿ, ಅಫ್ಘಾನಿಸ್ತಾನದ ಹರಿ

ನದಿಗೆ (ಹೆರಾತ್ ಪ್ರಾಂತ್ಯ) ಅಡ್ಡಲಾಗಿರುವ ನಿರ್ಮಿಸಿರುವ 'ಸಲ್ಮಾ ಅಣೆಕಟ್ಟು' ನಿರ್ಮಾಣಕ್ಕಾಗಿ ಭಾರತ ಹಣ ಹೂಡಿತ್ತು. ಕಾರಣ ಈ ಅಣೆಕಟ್ಟನ್ನು ಅಫಘಾನ್ ಭಾರತ ಸ್ನೇಹ ಅಣೆಕಟ್ಟು ಎಂದೂ ಕರೆಯಲಾಗುತ್ತಿದೆ.

# 30-11-2020

## ಮೊದಲ ಬಾರಿ SCO ಶೃಂಗಸಭೆಯ ಆತಿಥ್ಯವಹಿಸಲಿರುವ ಭಾರತ




ಇದೆ ಮೊದಲ ಬಾರಿಗೆ ಭಾರತವು ಶಾಂಘೈ ಸಹಕಾರಿ ಸಂಸ್ಥೆ(SCO) ಶೃಂಗಸಭೆಯ ನೇತೃತ್ವವನ್ನು ವಹಿಸಿಕೊಂಡಿದ್ದು, SCOನ ಸದಸ್ಯ ರಾಷ್ಟ್ರಗಳಾದ ರಷ್ಯಾ, ಚೀನಾ, ಖಜಕಿಸ್ತಾನ್, ಕಿರ್ಜಿಸ್ತಾನ್, ತಜಕಿಸ್ತಾನ್, ಉಜಬೆಕಿಸ್ತಾನ್ ಪ್ರಧಾನಮಂತ್ರಿಗಳು SCO ಸಭೆಗೆ ಹಾಜರಾಗಲಿದ್ದಾರೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯವು ಸ್ಪಷ್ಟಪಡಿಸಿದೆ. ಈ ಬಾರಿ ನಡೆಯುವ SCO ಶೃಂಗಸಭೆಯಲ್ಲಿ ಆರ್ಥಿಕ ಬಿಕ್ಕಟ್ಟು ನಿವಾರಣೆ ಹಾಗೂ ಜಾಗತಿಕ ಮಟ್ಟದಲ್ಲಿ ಕಾಡುತ್ತಿರುವ ಕೊವಿಡ್ 19 ಸಾಂಕ್ರಾಮಿಕ ರೋಗದಿಂದ ಉಂಟಾದ ಆರ್ಥಿಕತೆ ಸವಾಲು ಎದುರಿಸುವುದು ಹೇಗೆ ಎನ್ನುವುದರ ಕುರಿತು ಪ್ರಮುಖವಾಗಿ ಚರ್ಚಿಸಲಿವೆ.

* ಕಳೆದ ವರ್ಷದ SCO ಶೃಂಗಸಭೆಯ ಆತಿಥ್ಯವನ್ನು ಉಜಬೆಕಿಸ್ತಾನ್ ವಹಿಸಿಕೊಂಡಿತ್ತು. ಈ ಸಭೆಯ ಪ್ರತಿನಿಧಿಯಾಗಿ ಭಾರತದಿಂದ ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಭಾಗವಹಿಸಿದ್ದರು.
* ಭಾರತವು ಕಳೆದ 2017ರಲ್ಲಿ ಪೂರ್ಣ ಪ್ರಮಾಣದ SCOಸದಸ್ಯತ್ವವನ್ನು ಪಡೆದುಕೊಂಡಿತ್ತು.

## ಪ್ರಧಾನಿ ನರೇಂದ್ರ ಮೋದಿ 71ನೇ ಮನ್ ಕಿ ಬಾತ್



'ಮನ್ ಕಿ ಬಾತ್' ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ಆಯೋಜಿಸಿರುವ ಭಾರತೀಯ ರೇಡಿಯೊ ಕಾರ್ಯಕ್ರಮವಾಗಿದ್ದು, ಇದರಲ್ಲಿ ಅವರು ಅಖಿಲ ಭಾರತ ರೇಡಿಯೋ, ಡಿಡಿ ನ್ಯಾಷನಲ್ ಮತ್ತು ಡಿಡಿ ನ್ಯೂಸ್ ನಲ್ಲಿ ರಾಷ್ಟ್ರದ ಜನರನ್ನು ಉದ್ದೇಶಿಸಿ ಮಾತನಾಡುತ್ತಾರೆ. 3 ಅಕ್ಟೋಬರ್ 2014 ರಂದು ಮೊದಲ ಪ್ರಸಾರದ ನಂತರ, 71 ಕಂತುಗಳು ನಡೆದಿವೆ. 71 ನೇ ಸಂಚಿಕೆ ಇದೆ 29 ನವೆಂಬರ್ 2020 ರಂದು ಪ್ರಸಾರವಾಯಿತು. ಈ ಸಂಚಿಕೆಯಲ್ಲಿ ದೇಶದ ಜನರನ್ನುದ್ದೇಶಿಸಿ ಮಾತನಾಡಿದ ಪ್ರಧಾನಿ ಎಪಿಎಂಸಿ ತಿದ್ದುಪಡಿ ಕಾಯ್ದೆ, ಕೃಷಿ ಕಾಯ್ದೆ ಸೇರಿ ಹಲವು ವಿಷಗಳ ಕುರಿತು ಮಾತನಾಡಿದರು.

## ದೇಶದ ಸುರಕ್ಷಿತ ವಿಮಾನ ನಿಲ್ದಾಣ ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ 3ನೇ ಸ್ಥಾನ



ಬೆಂಗಳೂರಿನ ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣವು ಲಾಕ್ ಡೌನ್ ಸಮಯದಲ್ಲಿ ಕೋವಿಡ್ ಹರಡದಂತೆ ತಡೆಯಲು ತೆಗೆದುಕೊಂಡ ಮುನ್ನೆಚ್ಚರಿಕಾ ಕ್ರಮಗಳ ಕಾರಣ, ದೇಶದ ಸುರಕ್ಷಿತ ವಿಮಾನ ನಿಲ್ದಾಣಗಳ ಪೈಕಿ KIA ಗೆ 3ನೇ ಸ್ಥಾನ ಪಡೆದುಕೊಂಡಿದೆ. ಲಾಕ್ ಡೌನ್ ಬಳಿಕ ಮೊದಲು ನವದೆಹಲಿಯ ಇಂದಿರಾ ಗಾಂಧಿ ವಿಮಾನ ನಿಲ್ದಾಣ ಮತ್ತು ಮುಂಬೈನ ಶಿವಾಜಿ ಮಹಾರಾಜ್ ವಿಮಾನ ನಿಲ್ದಾಣಗಳು ಕಾರ್ಯಾಚರಣೆ ಆರಂಭಿಸಿದ್ದವು. ನಂತರ ಮೇ 25ರಂದು ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ವಿಮಾನಗಳ ಸಂಚಾರ ಆರಂಭಿಸಿತ್ತು.

* Safe Travel Barometer ಸಂಗ್ರಹಿದ ಮಾಹಿತಿಯನ್ನು ಆದರಿಸಿ ಪ್ರಯಾಣಿಕರ ಸುರಕ್ಷತೆ ದೃಷ್ಟಿಯಲ್ಲಿ ದೇಶದಲ್ಲಿಯೇ 3ನೇ ಸ್ಥಾನವನ್ನು ಕೆಎಐಗೆ ನೀಡಿದೆ.
* ಪ್ರಯಾಣಿಕರ ಸುರಕ್ಷಿತ ಪ್ರಯಾಣದ ಪಟ್ಟಿಯಲ್ಲಿ 5 ಅಂಕಗಳಿವೆ, ಬೆಂಗಳೂರು ವಿಮಾನ ನಿಲ್ದಾಣ 4 ಅಂಕಗಳನ್ನು ಪಡೆದು ಮೂರನೇ ಸ್ಥಾನವನ್ನು ಪಡೆದಿದೆ.
* ವಿಮಾನ ಪ್ರಯಾಣಿಕರಿಗೆ ಸುರಕ್ಷತೆ ದೃಷ್ಟಿಯಿಂದ ಕೋವಿಡ್ ಪರೀಕ್ಷೆ, ಥರ್ಮಲ್ ಸ್ಕ್ರೀನಿಂಗ್, ಟ್ರಾಲೆವರ್ ಫೇಸ್ ಮಾಸ್ಕ್ ವಿತರಣೆ, ಸಿಬ್ಬಂದಿಗೆ ಪಿಪಿಇ ಕಿಟ್ ವಿತರಣೆ ಸೇರಿದಂತೆ ವಿವಿಧ ಅಂಶಗಳನ್ನು ಪರಿಗಣನೆ ಮಾಡಿ ಅಂಕ ಕೊಡಲಾಗಿದೆ.


KPSC Vaani
KPSC VAANI
Karnataka's no 1 compitative website
ಕರ್ನಾಟಕದ no 1 ಸ್ಪರ್ಧಾತ್ಮಕ ಜಾಲತಾಣ
ಸೇವೆಗಳು:
• ಪ್ರತಿದಿನದ ಉದ್ಯೋಗ ಮಾಹಿತಿ
• ಪ್ರತಿದಿನದ ಪ್ರಚಲಿತ ಘಟನೆಗಳು
• ಸ್ಟಡಿ ಮೆಟೀರಿಯಲ್ಸ್
• ಹಳೆಯ ಪ್ರಶ್ನೆಪತ್ರಿಕೆಗಳ ಸಂಗ್ರಹ
• ಕಟ್ ಆಫ್ ಅಂಕಗಳ ಮಾಹಿತಿ
• ಸ್ಪರ್ಧಾತ್ಮಕ ಲೇಖನಗಳು
• ವೀಡಿಯೊ ತರಗತಿಗಳು
• ಹಾಗೂ ಇನ್ನು ಹತ್ತು ಹಲವು ಸ್ಪರ್ಧಾತ್ಮಕ ಮಾಹಿತಿಗಾಗಿ ಕೂಡಲೇ ಬೇಟಿ ನೀಡಿ
www.kpscvaani.com
Google Play Store ನಿಂದ KPSC Vaani app ಕೂಡಾ ಡೌನ್ಲೋಡ್ ಮಾಡಿಕೊಳ್ಳಿ
Scan QR Code to download kpscvaani App